ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 30 ಗುರುವಾರ 2022

ಸಂಪುಟ: 43 | ಸಂಚಿಕೆ: 75 | ಪುಟಗಳು: 10

43

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸರ್ಕಾರಿ ಪಿಯು ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ

ಬೆಂಗಳೂರು: ಸರ್ಕಾರಿ ಪಿಯು ಕಾಲೇಜುಗಳಿಗೆ ದಾಖಲಾಗುವ ವಿದ್ಯಾರ್ಥಿನಿಯರು ಪಾವತಿಸುವ ಶುಲ್ಕಕ್ಕೆ ವಿನಾಯಿತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾಗುವ ವಿದ್ಯಾರ್ಥಿನಿಯರಿಗೆ ರೂ.456 ಶುಲ್ಕದಿಂದ ವಿನಾಯಿತಿ ನೀಡಿ, ಸದರಿ ಮೊತ್ತವನ್ನು ಪ್ರಾಂಶುಪಾಲರ ಖಾತೆಗೆ ಜಮೆ ಮಾಡುವ ಕುರಿತು ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿಯಲ್ಲಿ ಪ್ರವೇಶ ಪಡೆಯುವ ಸಮಯದಲ್ಲಿ ವಿದ್ಯಾರ್ಥಿನಿಯರು 2019–2020 ಸಾಲಿನಿಂದ ರೂ.456/–ಶುಲ್ಕದಿಂದ ವಿನಾಯಿತಿ ನೀಡಿ ಪ್ರವೇಶ ನೀಡಲು ಆದೇಶಿಸಲಾಗಿತ್ತು. ಕಳೆದ 2 ವರ್ಷಗಳಿಂದ ಕೇವಲ ಆಯಾ ▶ 8ನೇ ಪುಟಕ್ಕೆ

ಮಹಾ ರಾಜಕೀಯ ಸಂಘರ್ಷಕ್ಕೆ ಬಹುತೇಕ ತೆರೆ: ವಿಶ್ವಾಸಮತ ಯಾಚನೆಗೂ ಮುನ್ನವೇ

ಮುಖ್ಯಮಂತ್ರಿ ಉದ್ಧವ್ ಠಾಕ್ರೆ ರಾಜೀನಾಮೆ

● ಎರಡೂವರೆ ವರ್ಷದ ಮಹಾ ವಿಕಾಸ ಅಘಾಡಿ ಸರ್ಕಾರ ಪತನ ● ಬಿಜೆಪಿ, ಶಿವಸೇನಾ ಬಂಡಾಯ ಪಾಳಯದಲ್ಲಿ ಸಂಭ್ರಮ ● ನಾಳೆ ದೇವೇಂದ್ರ ಫಡ್ನವೀಸ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಸಾಧ್ಯತೆ ● ದೂರವಾಣಿ ಮೂಲಕ ಫಡ್ನವೀಸ್; ಏಕನಾಥ್ ಶಿಂಧೆ ಮಾತುಕತೆ ● ಮುಂಬೈನ ತಾಜ್‌ನಲ್ಲಿ ಬಿಜೆಪಿ ಶಾಸಕರು, ಗೋವಾದ ಐಷಾರಾಮಿ ಹೋಟೆಲ್‌ನಲ್ಲಿ ಶಿವಸೇನೆ ಬಂಡಾಯ ಶಾಸಕರ ಬಿಡಾರ

ನವದೆಹಲಿ,ಜೂ.29–ವಿಶ್ವಾಸಮತ ಯಾಚನೆಗೆ ತಡೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದ ಬೆನ್ನಲ್ಲೇ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಬುಧವಾರ ರಾತ್ರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದ್ದಾರೆ. ಇದರೊಂದಿಗೆ ಮಹಾ ರಾಜಕೀಯ ಬಿಕ್ಕಟ್ಟಿಗೆ ಬಹುತೇಕ ತೆರೆ ಬಿದ್ದಂತಾಗಿದೆ.

ವಿಶ್ವಾಸಮತ ಯಾಚಿಸುವಂತೆ ಸೂಚನೆ ನೀಡಿರುವ ಮಹಾರಾಷ್ಟ್ರ ರಾಜ್ಯಪಾಲರ ಆದೇಶಕ್ಕೆ ತಡೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದ ಕೆಲವೇ ಕ್ಷಣಗಳಲ್ಲಿ ಫೇಸ್‌ಬುಕ್ ಲೈವ್ ಬಂದ ಉದ್ಧವ್ ಠಾಕ್ರೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಮತ್ತು ತಮ್ಮ ಎಂಎಲ್‌ಸಿ ಸ್ಥಾನಕ್ಕೂ ರಾಜೀನಾಮೆ ಘೋಷಿಸಿದ್ದಾರೆ. ಸರ್ಕಾರ ರಚನೆಗೆ ಸಹಕಾರ ನೀಡಿದ್ದಕ್ಕೆ ಎನ್‌ಸಿಪಿ ಮತ್ತು ಕಾಂಗ್ರೆಸ್‌ಗೆ ಉದ್ಧವ್ ಠಾಕ್ರೆ ಧನ್ಯವಾದ ಹೇಳಿದರು. ಇದರೊಂದಿಗೆ ಎರಡೂವರೆ ವರ್ಷದ ಮಹಾರಾಷ್ಟ್ರ ವಿಕಾಸ ಅಘಾಡಿ ಸರ್ಕಾರ ಪತನವಾಗಿದೆ.

ಸಿಎಂ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ್ ಅಘಾಡಿ(ಎಂವಿಎ) ಸರ್ಕಾರಕ್ಕೆ ಗುರುವಾರ ವಿಧಾನ ಸಭೆಯಲ್ಲಿ ವಿಶ್ವಾಸಮತ ಯಾಚಿಸುವಂತೆ ಮಹಾರಾಷ್ಟ್ರ ರಾಜ್ಯಪಾಲರು ನೀಡಿದ ನಿರ್ದೇಶನವನ್ನು ಶಿವಸೇನೆಯ ಮುಖ್ಯ ಸಚೇತಕ ಸುನೀಲ್ ಪ್ರಭು ಬುಧವಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ರಾಜ್ಯಪಾಲ ಭಗತ್ ಸಿಂಗ್ ಕೋಶ್ಯಾರಿ ಅವರ ನಿರ್ದೇಶನದಂತೆ ನಾಳೆಯೇ ವಿಧಾನ ಸಭೆಯಲ್ಲಿ ಬಹುಮತ ಸಾಬೀತು ಪಡಿಸುವಂತೆ ಮಹಾ ಸರ್ಕಾರಕ್ಕೆ ಸೂಚಿಸಿತ್ತು. ಗವರ್ನರ್ ಭಗತ್ ಸಿಂಗ್ ಕೊಶ್ಯಾರಿ ಅವರು ಬಹುಮತ ಸಾಬೀತುಪಡಿಸುವ ಆದೇಶ ನೀಡುವಲ್ಲಿ ಆತುರ ತೋರಿಸಿದ್ದಾರೆ ಎಂದು ಅಘಾಡಿ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಬಗ್ಗೆ ▶ 8ನೇ ಪುಟಕ್ಕೆ



ನಾನು ಹೆದರುವವನಲ್ಲ, ಶಿವಸೈನಿಕರ ರಕ್ತ ಬೀದಿಯಲ್ಲಿ ಬೀಳುವುದಕ್ಕಿಂತ ನಾನು ಕೆಳಗಿಳಿಯುವುದೇ ಲೇಸು. ನಾನು ಹುದ್ದೆ ಬಗ್ಗೆ ಚಿಂತಿಸುವುದಿಲ್ಲ. ನನ್ನ ಶಿವಸೈನಿಕರ ಬೆಂಬಲದ ಬಗ್ಗೆ ಕಾಳಜಿ ವಹಿಸುತ್ತೇನೆ. ನಾವು ಸುಪ್ರೀಂಕೋರ್ಟ್ ತೀರ್ಪನ್ನು ಗೌರವಿಸುತ್ತೇವೆ. ಪ್ರಜಾಪ್ರಭುತ್ವವನ್ನು ಅನುಸರಿಸಬೇಕು.
–ಉದ್ಧವ್ ಠಾಕ್ರೆ, ಮಾಜಿ ಸಿಎಂ

ಅಂತಿಮ ಪ್ರಮುಖ ನಿರ್ಧಾರ

ಬುಧವಾರ ಸಂಜೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಔರಂಗಾಬಾದ್ ಹೆಸರು ಸಂಭಾಜಿನಗರ, ಉಸ್ಮಾನಾಬಾದ್ ಹೆಸರು ಧಾರಾಶಿವ್ ಎಂದು ಮರು ನಾಮಕರಣ ಮಾಡುವ ಪ್ರಸ್ತಾವನೆಗೆ ಮಹಾರಾಷ್ಟ್ರ ಸರ್ಕಾರ ಒಪ್ಪಿಗೆ ನೀಡಿದೆ. ಅದೇ ವೇಳೆ ನವಿ ಮುಂಬೈ ವಿಮಾನ ನಿಲ್ದಾಣದ ಹೆಸರನ್ನು ಡಿಬಿ ಪಾಟೀಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಬದಲಿಸಲಾಗುವುದು. ಶಿವಸೇನೆಯ 31 ತಿಂಗಳ ಅವಧಿಯ ಅಘಾಡಿ ಸರ್ಕಾರದ ಕೊನೆಯ ಪ್ರಮುಖ ನಿರ್ಧಾರ ಇದಾಗಿದೆ.



ಫಡ್ನವೀಸ್



ಏಕನಾಥ್

ದ್ರೌಪದಿಗೆ ಜೆಡಿಎಸ್ ಬೆಂಬಲ

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಘೋಷಣೆ

ಬೆಂಗಳೂರು, ಜೂ.29(ಕೆಎಂಶಿ)–ರಾಷ್ಟ್ರಪತಿ ಸ್ಥಾನಕ್ಕೆ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರಿಗೆ ಜೆಡಿಎಸ್ ಬೆಂಬಲ ವ್ಯಕ್ತಪಡಿಸಿದೆ.



ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಜೆಡಿಎಲ್‌ಪಿ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಪರೋಕ್ಷವಾಗಿ ಮುರ್ಮು ಅವರಿಗೆ ನಮ್ಮ ಮತ ಎಂದರು.

ಬಹುಮತದ ಸಂಖ್ಯೆ ಈಗಾಗಲೇ ಅವರಿಗೆ ಸಿಕ್ಕಿದೆ. ನಮ್ಮ ಪಕ್ಷದ ಬೆಂಬಲ ಅವಶ್ಯಕತೆ ಇಲ್ಲ. ಆದರೂ ನಮ್ಮ ಬೆಂಬಲ ಕೇಳಿದ್ದಾರೆ. ಅದು ಅವರ ಔದಾರ್ಯ ಎಂದು ಬೆಂಬಲ ನೀಡುವ ಬಗ್ಗೆ ಪರೋಕ್ಷವಾಗಿ ಹೇಳಿದರು. ಮುರ್ಮು ಈಗಾಗಲೇ ಗೆದ್ದಾಗಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಅವರು ಎರಡು ಬಾರಿ ದೂರವಾಣಿ ಕರೆ ಮಾಡಿ ಬೆಂಬಲಕ್ಕೆ ಮನವಿ ಮಾಡಿದ್ದಾರೆ. ಬೆಂಗಳೂರಿಗೆ ಬಂದು ಮನವಿ ಮಾಡಲು ಅವರು ಸಮಯ ಕೋರಿದ್ದರು. ಅವರು ಖುದ್ದು ಬಂದು ಮನವಿ ಮಾಡುವ ಅವಶ್ಯಕತೆ ಇಲ್ಲ. ಚುನಾವಣಾ ಅಭ್ಯರ್ಥಿಯಾಗಿ ಮುರ್ಮು ಕಣದಲ್ಲಿದ್ದಾರೆ. ಅವರ ಹಿನ್ನೆಲೆ ಏನು, ಎಷ್ಟು ಕಷ್ಟ ಅನುಭವಿಸಿದ್ದಾರೆ ಅಂತ ನಾನು ಗಮನಿಸಿದ್ದೇನೆ ಎಂದರು.

ಇಲ್ಲಿ ಕಾಂಗ್ರೆಸ್, ಬಿಜೆಪಿ ಅನ್ನುವ ಪ್ರಶ್ನೆ ಅಲ್ಲ. ಬಿ ಟೀಂ ಅನ್ನುವ ಪ್ರಶ್ನೆ ರಾಷ್ಟ್ರಪತಿ ಚುನಾವಣೆಗೆ ಬರಲ್ಲ. ನಾವು ತೆಗೆದುಕೊಂಡ ನಿರ್ಧಾರ ಬಿಜೆಪಿ ಬಿ ಟೀಂ ಅಂತ ಪ್ರಚಾರ ಮಾಡೋದು ಇದಕ್ಕೆ ಅನ್ವಯ ಆಗಲ್ಲ ಎಂದು ಹೇಳಿದರು.

ರೈತರಿಗೆ ಜಿಎಸ್‌ಟಿ ಬರೆ

ನವದೆಹಲಿ, ಜೂ.29– ಮೊದಲೇ ಪ್ಯಾಕ್ ಮಾಡಿದ ಆಹಾರ ಪದಾರ್ಥಗಳ ಮೇಲೆ ಜಿಎಸ್‌ಟಿ ಕೌನ್ಸಿಲ್ ವಿಧಿಸಲು ನಿರ್ಧರಿಸಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಚಂಡೀಗಢದಲ್ಲಿ ನಡೆದ 47ನೇ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಅಲ್ಲಿ ನಾಲ್ಕು ಜಿಓಎಂಗಳು ತಮ್ಮ ಶಿಫಾರಸುಗಳನ್ನು ಪ್ರಸ್ತುತಪಡಿಸಿದರು.



ಪ್ಯಾಕ್ ಮಾಡಿದ ಆಹಾರ, ಹೋಟೆಲ್ ರೂಂ, ಆಸ್ಪತ್ರೆಯಲ್ಲೂ ತೆರಿಗೆ ಬಿಸಿ

ಪ್ಯಾಕ್ ಮಾಡಿದ ಆಹಾರ: ಪ್ಯಾಕ್ ಮಾಡಿದ ಆಹಾರ ಪದಾರ್ಥಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಶಿಫಾರಸನ್ನು ಜಿಎಸ್‌ಟಿ ಸಮಿತಿ ಒಪ್ಪಿಕೊಂಡಿದೆ. ಇಲ್ಲಿಯವರೆಗೆ, ನಿರ್ದಿಷ್ಟ ಆಹಾರ ಪದಾರ್ಥಗಳು, ಧಾನ್ಯಗಳು ಇತ್ಯಾದಿಗಳ ಮೇಲೆ ಜಿಎಸ್‌ಟಿಯನ್ನು ಬ್ರಾಂಡೆಡ್ ಮಾಡದಿದ್ದಾಗ ವಿನಾಯಿತಿ ನೀಡಲಾಗುತ್ತಿತ್ತು ಅಥವಾ ಬ್ರಾಂಡ್‌ನ ಮೇಲಿನ ಹಕ್ಕನ್ನು ಮುಂಚಿತವಾಗಿ ನಿಗದಿಪಡಿಸಲಾಗಿದೆ. ಪೂರ್ವ–ಪ್ಯಾಕ್ ಮಾಡಿದ, ಮೊದಲೇ ಲೇಬಲ್ ಮಾಡಲಾದ ಮೊಸರು, ಲಸ್ಸಿ ಮತ್ತು ಮಜ್ಜಿಗೆ ಸೇರಿದಂತೆ ಕಾನೂನು ಮಾಪನಶಾಸ್ತ್ರ ಕಾಯ್ದೆಯ ಪ್ರಕಾರ, ಪೂರ್ವ–ಪ್ಯಾಕ್ ಮಾಡಿದ ಮತ್ತು ಪೂರ್ವ–ಲೇಬಲ್ ಮಾಡಿದ ಚಿಲ್ಲರೆ ಪ್ಯಾಕ್ ಅನ್ನು ಅದರಿಂದ ▶ 6ನೇ ಪುಟಕ್ಕೆ

ಕೃಷಿ ಪಂಪ್‌ಸೆಟ್‌ಗಳಿಗೆ ರಿಯಾಯಿತಿ ದರದಲ್ಲಿ ಸೋಲಾರ್ ಸಂಪರ್ಕ

● ರಾಜ್ಯ ಸರ್ಕಾರದ ನಿರ್ಧಾರ ● 7.5 ಹೆಚ್‌ಪಿವರೆಗೆ ಸೋಲಾರ್ ಸಾಧನ ಅಳವಡಿಕೆ ಸಾಧ್ಯ; 800 ಅಡಿವರೆಗಿನ ಬಾವಿಗೆ ಸೂಕ್ತ ● ರೈತರು ತಮ್ಮ ಪಾಲಿನ 1.50 ಲಕ್ಷ ನೀಡಿದರೆ ಉಳಿದದ್ದನ್ನು ಸರ್ಕಾರ ಭರಿಸಲಿದೆ ● ಮೊದಲ ಹಂತದಲ್ಲಿ 10 ಸಾವಿರ ಕೃಷಿ ಪಂಪ್‌ಸೆಟ್‌ಗಳಿಗೆ ಸೋಲಾರ್ ಅಳವಡಿಕೆ



ಬೆಂಗಳೂರು, ಜೂ.29(ಕೆಎಂಶಿ)–ಕೃಷಿ ಪಂಪ್‌ಸೆಟ್‌ಗಳಿಗೆ ಭಾರೀ ರಿಯಾಯಿತಿ ದರದಲ್ಲಿ ಸೋಲಾರ್ ಸಂಪರ್ಕ ಕಲ್ಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಇಂಧನ ಖಾತೆ ಸಚಿವ ವಿ.ಸುನೀಲ್‌ಕುಮಾರ್, 7.5 ಹೆಚ್‌ಪಿವರೆಗಿನ ಕೃಷಿ ಪಂಪ್‌ಸೆಟ್‌ಗಳಿಗೆ ಸೋಲಾರ್ ಅಳವಡಿಕೆ ಮಾಡಲಾಗುವುದು. ಪ್ರತಿ ಯುನಿಟ್‌ಗೆ ಐದು ಲಕ್ಷ ರೂ. ತಗಲಲಿದ್ದು, ರೈತರು ತಮ್ಮ ಪಾಲಿನ 1.50 ಲಕ್ಷ ನೀಡಿದರೆ, ಉಳಿದ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಕುಸುಮ್–ಬಿ ಯೋಜನೆಯಡಿ ಭರಿಸಲಾಗುವುದು. 800 ಅಡಿ ಆಳಕ್ಕಿಂತ ಹೆಚ್ಚಿನ ಕೊಳವೆ ಬಾವಿಗಳಿಗೆ ಇದು ಸಾಧ್ಯ ಆಗದು ಎಂದು ಸುನಿಲ್‌ಕುಮಾರ್ ಸ್ಪಷ್ಟಪಡಿಸಿದರು.

ಮೊದಲ ಹಂತದಲ್ಲಿ 10 ಸಾವಿರ ಪಂಪ್‌ಸೆಟ್‌ಗಳಿಗೆ ಸೋಲಾರ್ ಅಳವಡಿಸಲಾಗುವುದು. ಆಸಕ್ತಿಯುಳ್ಳ ರೈತರು ಸ್ವಯಂಪ್ರೇರಿತವಾಗಿ ರಾಜ್ಯದ ಯಾವುದೇ ಭಾಗದಲ್ಲಿ ▶ 8ನೇ ಪುಟಕ್ಕೆ

“ ರಾಜ್ಯದಲ್ಲಿ ಹೊಸತಾಗಿ ಎಂಟು ಲಕ್ಷ ಮಂದಿ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಅರ್ಜಿ ಹಾಕಿಕೊಂಡಿದ್ದಾರೆ. ಇಂತಹ ರೈತರು ಕಾಯುವ ಬದಲು ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಳ್ಳಬಹುದು. ಹೀಗೆ ಸೋಲಾರ್ ಪಂಪ್‌ಸೆಟ್ ಅಳವಡಿಸಿಕೊಂಡರೆ ರೈತರಿಗೂ ಅನುಕೂಲವಾಗಲಿದೆ. ಸದರಿ ಯೋಜನೆಯಡಿ ಪ್ರಸಕ್ತ ವರ್ಷ ಹತ್ತು ಸಾವಿರ ಮಂದಿ ರೈತರಿಗೆ ಏಳು ಅಶ್ವಶಕ್ತಿವರೆಗಿನ ಸೋಲಾರ್ ಪಂಪ್‌ಸೆಟ್‌ಗಳನ್ನು ಒದಗಿಸಲಾಗುವುದು. **–ಸುನೀಲ್‌ಕುಮಾರ್, ಇಂಧನ ಸಚಿವ**

ಬಿಎಸ್‌ವೈ ಬಿಜೆಪಿಗೆ ಕೈಕೊಟ್ಟರೆ ಮಾತ್ರ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಅಧಿಕಾರ ಸಾಧ್ಯ

● ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್‌ಗೆ ರಾಹುಲ್ ಗಾಂಧಿ ಗೆಲುವಿನ ಪಾಠ ● ಪ್ರಸಕ್ತ ಪರಿಸ್ಥಿತಿಯಲ್ಲಿ ಸಿದ್ದರಾಮಯ್ಯರ ನಾಯಕತ್ವದಲ್ಲಿ 90ರ ಗಡಿ ತಲುಪಿದರೆ, ಡಿಕೆಶಿ ನಾಯಕತ್ವದಲ್ಲಿ 65ರಿಂದ 70 ಸ್ಥಾನ ಗಳಿಕೆ ಸಾಧ್ಯತೆ: ಸಮೀಕ್ಷಾ ವರದಿ ಆಧರಿಸಿ ಮನವರಿಕೆ ● ಇಬ್ಬರು ಜೊತೆಯಾಗಿ ಹೋದರೆ ಕಾಂಗ್ರೆಸ್‌ಗೆ ಅಧಿಕಾರಕ್ಕೇರುವ ಅವಕಾಶ

ಬೆಂಗಳೂರು,ಜೂ.29(ಕೆಎಂಶಿ)–ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಿಜೆಪಿಗೆ ಕೈಕೊಟ್ಟರೆ ಮಾತ್ರ ನಾವು ಕರ್ನಾಟಕದಲ್ಲಿ ಸ್ವತಂತ್ರವಾಗಿ ಅಧಿಕಾರ ಹಿಡಿಯಲು ಸಾಧ್ಯ ಎಂದು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಭವಿಷ್ಯ ನುಡಿದಿದ್ದಾರೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಡುವಿನ ಮನಸ್ತಾಪ ಬಗೆಹರಿಸಲು ಕಳೆದ ಎರಡು ದಿನಗಳಿಂದ ನಡೆಸುತ್ತಿರುವ ಸರಣಿ ಸಭೆಯಲ್ಲಿ ಕರ್ನಾಟಕದ ವಾಸ್ತವ ಸ್ಥಿತಿ ಬಹಿರಂಗ ಪಡಿಸಿದ್ದಾರೆ.

2023ರಲ್ಲಿ ರಾಜ್ಯ ವಿಧಾನಸಭೆಗೆ ನಡೆಯುವ ಚುನಾವಣೆಗೆ ಸಂಬಂಧಿಸಿದಂತೆ ಎಐಸಿಸಿ ಪ್ರತ್ಯೇಕವಾಗಿ ನಡೆಸಿರುವ ಸಮೀಕ್ಷಾ ವರದಿಯನ್ನು ಮುಂದಿಟ್ಟುಕೊಂಡು ರಾಹುಲ್, ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರ ಜೊತೆ ಚರ್ಚೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಉಪಸ್ಥಿತರಿದ್ದರು. ಸಿದ್ದರಾಮಯ್ಯ ನಾಯಕತ್ವದಲ್ಲಿ ಚುನಾವಣೆಗೆ ಹೋಗೋಣ. ಹಾಗೆ ಹೋದರು ಪಕ್ಷಕ್ಕೆ ಪೂರ್ಣ ಬಹುಮತ



ಇಲ್ಲ. ಆದರೆ, 90ರ ಗಡಿ ಮುಟ್ಟುವ ಸಾಧ್ಯತೆ ಸದ್ಯಕ್ಕಿರುವ ಮಾಹಿತಿ. ನಿಮ್ಮ (ಶಿವಕುಮಾರ್) ನಾಯಕತ್ವದಲ್ಲಿ ಹೋದರೆ 65– 70ರ ಗಡಿ ಮುಟ್ಟುವುದಿಲ್ಲ.ಇದು ವಾಸ್ತವ ಮತ್ತು ಸತ್ಯ.

ಜೆಡಿಎಸ್ ಅನ್ನು ನೀವು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಈಗಿನ ಮಾಹಿತಿ ಪ್ರಕಾರ 40–45 ಸ್ಥಾನ ಗಳಿಸುವ ಸಾಮರ್ಥ್ಯ ಹೊಂದಿದೆ. ಯಡಿಯೂರಪ್ಪ, ಹಿಂದಿನಂತೆ ಬಿಜೆಪಿ ಕೈಕೊಟ್ಟಿದ್ದೇ ಆದರೆ, 120–125 ಸ್ಥಾನ ಗಳಿಸಿ ಅಧಿಕಾರಕ್ಕೆ ಬರಬಹುದು. ಮಲ್ಲಿಕಾರ್ಜುನ ಖರ್ಗೆ ನಾಯಕತ್ವದಲ್ಲಿ ಹೋದರೂ ಶಿವಕುಮಾರ್ ಸ್ಥಿತಿಗಿಂತ ಭಿನ್ನವಾಗಿಲ್ಲ. ನೀವಿಬ್ಬರೂ ಒಟ್ಟಾಗಿ ▶ 8ನೇ ಪುಟಕ್ಕೆ

ಮೈಸೂರಿನಲ್ಲೊಂದು ಹೈಡ್ರಾಮಾ

ಬಿಜೆಪಿ–ಕಾಂಗ್ರೆಸ್ ಅಭಿವೃದ್ಧಿ ಕ್ರೆಡಿಟ್‌ಗಾಗಿ ಬೀದಿ ರಂಪಾಟ

ಪ್ರತ್ಯೇಕ ಪ್ರತಿಭಟನೆಗಿಳಿದ ಬಿಜೆಪಿಯ 40, ಕಾಂಗ್ರೆಸ್‌ನ 15ಕ್ಕೂ ಹೆಚ್ಚು ಮಂದಿ ಪೊಲೀಸರ ವಶಕ್ಕೆ



ಪೊಲೀಸರ ವಶಕ್ಕೆ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು.



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅವರನ್ನು ವಶಕ್ಕೆ ಪಡೆದ ಪೊಲೀಸರು.

ಮೈಸೂರು, ಜೂ.29 (ಆರ್‌ಕೆಬಿ)– ಮೈಸೂರು ಅಭಿವೃದ್ಧಿಗೆ ನೀಡಿದ ಕೊಡುಗೆಗಳ ಕುರಿತು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಮೇಲಾಟ ತಾರಕಕ್ಕೇರಿದೆ. ಬುಧವಾರ ವಾಗ್ವಾದ ತಾರಕಕ್ಕೇರಿದ್ದು, ಎರಡೂ ಪಕ್ಷಗಳು ಪ್ರತಿಭಟನೆಯ ಹೈಡ್ರಾಮಾ ನಡೆಸಿದವು.

ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಬೆಳಗ್ಗೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ಮತ್ತು ದಾಸಪ್ಪ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಜೆಎಲ್‌ಬಿ ರಸ್ತೆಯಲ್ಲಿ ಹಾಕಿದ್ದ ಬ್ಯಾರಿಕೇಡ್ ಭೇದಿಸಿ ಮುನ್ನಡೆಯಲು ಯತ್ನಿಸಿದ ಎರಡೂ ಪಕ್ಷದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಈ ವೇಳೆ ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ, ರಾಜ್ಯ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ದೇವರಾಜ್, ಕೆ.ಎಂ.ನಿಶಾಂತ್ ಸೇರಿದಂತೆ 40ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರೆ, ಇತ್ತ ದಾಸಪ್ಪ ವೃತ್ತದಲ್ಲಿ ಸಂಸದರ ಕಚೇರಿಯತ್ತ ಮೆರವಣಿಗೆಯಲ್ಲಿ ತೆರಳುತ್ತಿದ್ದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸೇರಿದಂತೆ 15ಕ್ಕೂ ಅಧಿಕ ಮಂದಿ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಮೈಸೂರಿನ ಅಭಿವೃದ್ಧಿಗೆ ಕಾಂಗ್ರೆಸ್‌ನ ಕೊಡುಗೆ ಏನು? ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಪ್ರಶ್ನಿಸಿದ್ದರು. ಇದಕ್ಕೆ ಪ್ರತಿಯಾಗಿ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಪತ್ರಿಕಾಗೋಷ್ಠಿ ನಡೆಸಿ ಮೈಸೂರಿನ ಅಭಿವೃದ್ಧಿಗೆ ಸಂಸದ ಪ್ರತಾಪ್‌ಸಿಂಹರ ಕೊಡುಗೆ ಏನು? ಎಂದು ಎದಿರೇಟು ನೀಡಿದ್ದರು. ಹೀಗೆ ಪರಸ್ಪರ ಆರೋಪ–ಪ್ರತ್ಯಾರೋಪ ನಡೆಯುತ್ತಾ ಬಂದಿದ್ದವು.

ಮೈಸೂರಿನ ಅಭಿವೃದ್ಧಿ ಬಗ್ಗೆ ಕಾಂಗ್ರೆಸ್ ಕೊಡುಗೆ ಏನೂ ಇಲ್ಲ. ಎಲ್ಲವನ್ನು ಬಿಜೆಪಿ ಸರ್ಕಾರವೇ ಮಾಡಿದ್ದು ಎಂದು ಸಂಸದ ಪ್ರತಾಪ್‌ಸಿಂಹ ಪದೇ ಪದೇ ಹೇಳಿಕೆ ನೀಡುತ್ತಲೇ ಬಂದಿದ್ದರು. ಇದಕ್ಕೆ ಪ್ರತಿಯಾಗಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸಂಸದರ ಹೇಳಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಮೈಸೂರಿಗೆ ಸಂಸದರ ಕೊಡುಗೆ ಏನಿದೆ, ಚರ್ಚೆಗೆ ಬರಲಿ. ಜಲದರ್ಶಿನಿಯಲ್ಲಿರುವ ಸಂಸದರ ▶ 8ನೇ ಪುಟಕ್ಕೆ

ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯಗಳು ಕಣ್ಣಿಗೆ ಕಾಣುತ್ತಿವೆ; ಮಾತಿನಲ್ಲೇ ಕಾಲ ಕಳೆಯುವ ಕಾಂಗ್ರೆಸ್ ಗಂಧದೊಂದಿಗೆ ಗುದ್ದಾಡಬೇಕೇ ಹೊರತು ಹಂದಿಯೊಂದಿಗಲ್ಲ: ಪ್ರತಾಪ್ ಸಿಂಹ ವ್ಯಂಗ್ಯೋಕ್ತಿ

ಮೈಸೂರು,ಜೂ.29(ಆರ್‌ಕೆಬಿ)–ಬಿಜೆಪಿ ಸರ್ಕಾರ ಕಳೆದ 8 ವರ್ಷಗಳಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳು ಕಣ್ಣಿಗೆ ಕಾಣುವಂತಿದೆ. ಆದರೆ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದಿರುವವರು ಬರೀ ಮಾತಿನಲ್ಲೇ ಕಾಲ ಕಳೆಯುತ್ತಿದ್ದಾರೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.



ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನುದಾನ ನೀಡಿದ್ದಾರೆ. ರೈಲು ನಿಲ್ದಾಣದಲ್ಲಿ ಹೆಚ್ಚುವರಿ ಫ್ಲಾಟ್‌ಫಾರಂಗಳ ನಿರ್ಮಿಸಿ ಪ್ರಮುಖ ನಗರಗಳಿಗೆ ರೈಲು ಸಂಪರ್ಕ ಕಲ್ಪಿಸಿದ್ದು ಯಾರು ಎಂದು ಪ್ರಶ್ನಿಸಿದರು.

ಮೈಸೂರು–ಬೆಂಗಳೂರು ನಡುವಿನ ದಶಪಥ ರಸ್ತೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಸಂಪೂರ್ಣ ಅನುದಾನ ಬಿಡುಗಡೆ ಮಾಡಿದೆ. ಹೆಚ್ಚುವರಿಯಾಗಿ 1,200 ಕೋಟಿ ರೂ. ಬಿಡುಗಡೆ ಮಾಡಿದೆ. ಈ ಮಾರ್ಗಗಳಲ್ಲಿ ಬರುವ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವುದಕ್ಕೂ ಅನುಕೂಲ ಮಾಡಿಕೊಡುವ ಕಾರ್ಯ ನಡೆದಿದೆ. ಕೆಲವರು ಗೊತ್ತಿಲ್ಲದೆ ಮಾತನಾಡುತ್ತಾರೆ. ಅವರಿಗೆ ಉತ್ತರ ಕೊಡದೆ ನಿರ್ಲಕ್ಷಿಸುವುದು ಸೂಕ್ತ ಎಂದು ವ್ಯಂಗ್ಯವಾಡಿದರು.

ಮೈಸೂರು ಅಭಿವೃದ್ಧಿ ಕುರಿತು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಚರ್ಚೆಗೆ ಆಹ್ವಾನಿಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಗುದ್ದಾಡಿದರೆ ಗಂಧದ ಜೊತೆಗೆ ಗುದ್ದಾಡಬೇಕೇ ಹೊರತು ಹಂದಿಯ ಜೊತೆಯಲ್ಲಿ ಅಲ್ಲ. ಹಾಗಾಗಿ ತಾವು ಹಂದಿ ಹೊಡೆಯುವವರನ್ನೇ ಕಳಿಸಿದ್ದಾಗಿ ಯುವ ಮೋರ್ಚಾ ಕಾರ್ಯಕರ್ತರನ್ನು ಹಂದಿ ಹೊಡೆಯುವವರಿಗೆ ಹೋಲಿಸಿ ಎದುರಾಳಿಗಳಿಗೆ ಟಾಂಗ್ ನೀಡಿದರು. ▶ 8ನೇ ಪುಟಕ್ಕೆ

ರಾಜಸ್ತಾನದಲ್ಲಿ ಹಿಂದೂ ಟೈಲರ್ ಹತ್ಯೆಗೆ ಪ್ರತಿಕ್ರಿಯೆ ನೀಡದ ಕಾಂಗ್ರೆಸ್

ಸಂಸದ ಪ್ರತಾಪ್ ಸಿಂಹ ವಾಗ್ದಾಳಿ



ಮೈಸೂರು,ಜೂ.29(ಆರ್‌ಕೆಬಿ)–ರಾಜಸ್ತಾನದಲ್ಲಿ ನಡೆದ ಹಿಂದೂ ಟೈಲರ್ ಹತ್ಯೆ ಘಟನೆಗೆ ಸಂಬಂಧಿಸಿದಂತೆ ಯಾವುದೇ ಪ್ರತಿಕ್ರಿಯೆ ನೀಡದ ಕಾಂಗ್ರೆಸ್ ನಾಯಕರ ಬಗ್ಗೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಇಂದಿಲ್ಲಿ ವಾಗ್ದಾಳಿ ನಡೆಸಿದರು.

ಮಾಧ್ಯಮಗಳೊಂದಿಗೆ ಪ್ರತಿಕ್ರಿಯಿಸಿದ ಅವರು, ಗೋಕಳ್ಳರಿಗೆ ಏಟು ಬಿದ್ದರೆ ಬೊಬ್ಬೆ ಹೊಡೆಯುವ ಕಾಂಗ್ರೆಸ್ ನಾಯಕರು ರಾಜಸ್ತಾನದ ಹತ್ಯೆ ಘಟನೆಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡದೆ ಯಾವ ಬಿಲದಲ್ಲಿ ಅಡಗಿದ್ದಾರೆ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ಗೆ ಅಧಿಕಾರ ನೀಡಿದರೆ ಕರ್ನಾಟಕದಲ್ಲೂ ಇದೇ ಪರಿಸ್ಥಿತಿ ಉಂಟಾಗುತ್ತದೆ. ಇದು ರಾಜ್ಯದ ಜನರಿಗೆ ಎಚ್ಚರಿಕೆಯ ಗಂಟೆಯಾಗಿದೆ. ರಾಜಸ್ತಾನ ಸರ್ಕಾರದ ಮೇಲೆ ನನಗೆ ವಿಶ್ವಾಸವಿಲ್ಲ. ಹಿಂದೂಗಳ ಧ್ವನಿ ಅಡಗಿಸಲು ಈ ಕೃತ್ಯ ನಡೆದಿದೆ. ಇದರ ಹಿಂದೆ ಕಾಂಗ್ರೆಸ್ ಇದೆ. ಕಾಂಗ್ರೆಸ್‌ನವರ ಮುಸ್ಲಿಂ ಓಲೈಕೆಯಿಂದ ಇಂತಹ ಘಟನೆಗಳು ನಡೆಯುತ್ತಿವೆ ಎಂದು ಆರೋಪಿಸಿದರು. ಒಳ್ಳೆಯ ಮುಸ್ಲಿಮರು ಯಾಕೆ ಈಗ ಮಾತಾಡ್ತಿಲ್ಲ? ಈ ಕೊಲೆ ತಪ್ಪು ಅಂತಾ ಆರೋಪಿಗಳ ವಿರುದ್ಧ ಫತ್ವಾ ಹೊರಡಿಸಲಿ ಎಂದ ಅವರು, ಶುಕ್ರವಾರ ಪ್ರಾರ್ಥನೆಯಾದ ಬಳಿಕ ಕಲ್ಲು ತೂರುವಂತೆ ಹೇಳುವುದು ನಿಮ್ಮ ಕೆಲಸವೇ? ಎಂದು ಪ್ರತಾಪ್ ಸಿಂಹ ಕಿಡಿಕಾರಿದ್ದಾರೆ.

ಗೋಕಳ್ಳರಿಗೆ ಎರಡೇಟು ಬಿದ್ದರೆ ಬೊಬ್ಬೆ ಹೊಡೆಯುವವರು ಈಗ ಎಲ್ಲಿದ್ದಾರೆ? ಏನು ಮಾಡುತ್ತಿದ್ದಾರೆ? ಟ್ವೀಟ್ ಮಾಡಿ ಮನೆಯೊಳಗೆ ಕುಳಿತರೆ ಮುಗಿಯಿತೇ ನಿಮ್ಮ ಕೆಲಸ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ಪ್ರತಾಪ್ ಸಿಂಹ ಕಿಡಿಕಾರಿದರು.

ಸಾಧಕರಿಗೆ ನಿವೇಶನ: ಮುಡಾ ಚಿಂತನೆ

ಮೈಸೂರು, ಜೂ.29(ಆರ್‌ಕೆ)–ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಲಭ್ಯವಿರುವ ಬಿಡಿ ನಿವೇಶನಗಳ ಪೈಕಿ ಶೇ.25ರಷ್ಟನ್ನು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಅರ್ಹ ವ್ಯಕ್ತಿಗಳಿಗೆ ಲಾಟರಿ ಮೂಲಕ ಹಂಚಿಕೆ ಮಾಡಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿರ್ಧರಿಸಿದೆ.



> ಬಿಡಿ ನಿವೇಶನಗಳ ಹಂಚಿಕೆ ಮತ್ತು ಹರಾಜು ಸಂಬಂಧ 2000ನೇ ಸಾಲಿನಲ್ಲಿ ಸರ್ಕಾರ ಹೊರಡಿಸಿರುವ ಸುತ್ತೋಲೆಯನ್ವಯ, ಕಳೆದ ಹಂಚಿಕೆ ಪ್ರಕ್ರಿಯೆಯಲ್ಲಿ ನಿಗದಿ ಮಾಡಿದ್ದ ದರಕ್ಕೆ ಶೇ.10ರಷ್ಟು ಹೆಚ್ಚುವರಿ ದರದಲ್ಲಿ ಪ್ರೋತ್ಸಾಹದಾಯಕವಾಗಿ ಸಾಧಕರಿಗೆ ಬಿಡಿ ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲು ಸಭೆ ಒಪ್ಪಿಗೆ ಸೂಚಿಸಿದೆ.

ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅಧ್ಯಕ್ಷತೆಯಲ್ಲಿ ನಡೆದ ಬಿಡಿ ನಿವೇಶನ ಉಪ ಸಮಿತಿ ಸಭೆಯಲ್ಲಿ ದರ ನಿಗದಿ ಬಗ್ಗೆ ಚರ್ಚಿಸಿ ನಿರ್ಣಯ ಮಾಡಲಾಯಿತು.

ಮೈಸೂರಿನ ಲಲಿತಾದ್ರಿನಗರ, ದೇವನೂರು, ವಸಂತನಗರ, ದಟ್ಟಗಳ್ಳಿ, ಲಾಲ್‌ಬಹದ್ದೂರ್ ಶಾಸ್ತ್ರಿನಗರ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಲಭ್ಯವಿರುವ 20X30, 30X40, 40X60, 50X80 ಅಡಿ ಅಳತೆಯ ಒಟ್ಟು 1,255 ಬಿಡಿ ನಿವೇಶನಗಳ ಪೈಕಿ 180 (ಶೇ.25) ನಿವೇಶನಗಳನ್ನು ಕಲೆ, ಸಾಹಿತ್ಯ ಸಮಾಜ ಸೇವೆ, ಸಂಗೀತ, ಕ್ರೀಡೆ ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿ ಗಳಿಸಿರುವ ಹಾಗೂ ಅರ್ಹ ಮಾಜಿ ಸೈನಿಕರ ಕುಟುಂಬದವರಿಗೆ ಹಂಚಿಕೆ ಮಾಡಲು ಸಭೆಯು ನಿರ್ಧರಿಸಿದೆ. ನಿರ್ಧರಿಸಿರುವ ದರ, ಲಭ್ಯವಿರುವ ನಿವೇಶನಗಳು, ಯಾರ್ಯಾರು ಅರ್ಜಿ ಸಲ್ಲಿಸಬಹುದೆಂಬುದರ ಬಗ್ಗೆ ಅರ್ಹತೆ, ಮಾಹಿತಿಗಳೊಂದಿಗೆ ಅಧಿಸೂಚನೆ ಹೊರಡಿಸಿ 180 ನಿವೇಶನಗಳ ಹಂಚಿಕೆಗೆ ಅರ್ಜಿ ಆಹ್ವಾನಿಸಿ ಪ್ರಕ್ರಿಯೆ ನಡೆಸಲು ಉಪ ಸಮಿತಿ ಸಭೆಯು ಸಮ್ಮತಿಸಿತು. ಶಾಸಕರಾದ ತನ್ವೀರ್ ಸೇಠ್, ಎಲ್.ನಾಗೇಂದ್ರ, ಸದಸ್ಯ ಲಿಂಗಣ್ಣ, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಕಾರ್ಯದರ್ಶಿ ವೆಂಕಟರಾಜು ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಯೋಗ ವ್ಯೂಹ ರಚನಾ ಸ್ಪರ್ಧೆಗೆ ಆಹ್ವಾನ



ಮೈಸೂರು,ಜೂ.29(ಆರ್‌ಕೆಬಿ)–ಯೋಗಾಭ್ಯಾಸಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕ್ರೀಡಾ ಭಾರತಿ ಸಂಘಟನೆಯು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ 'ಯೋಗ ವ್ಯೂಹ' ರಚನಾ ಸ್ಪರ್ಧೆ ಆಯೋಜಿಸಿದ್ದು, ಆಸಕ್ತರು ಪಾಲ್ಗೊಳ್ಳಬಹುದಾಗಿದೆ ಎಂದು ಆಯೋಜಕ ಮಹೇಂದ್ರ ಪ್ರಸಾದ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪರ್ಧೆಗೆ ಜು.10ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ. ಯಾವುದೇ ವಯೋಮಿತಿಯಿಲ್ಲ. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಬಹುದಾಗಿದೆ. ಆದರೆ ಸ್ಪರ್ಧೆಯಲ್ಲಿ ಕನಿಷ್ಠ 50 ಮಂದಿ ಪಾಲ್ಗೊಳ್ಳಬೇಕು. ಕನಿಷ್ಠ ಐದು ನಿಮಿಷದಿಂದ ಗರಿಷ್ಠ ಎಂಟು ನಿಮಿಷದವರೆಗೆ ಯೋಗ ವ್ಯೂಹ ರಚಿಸಬೇಕಾಗುತ್ತದೆ ಎಂದರು.

ವಿಜೇತರ ಹೆಸರನ್ನು ಆ.29ರ ರಾಷ್ಟ್ರೀಯ ಕ್ರೀಡಾ ದಿನದಂದು ಪ್ರಕಟಿಸಲಾಗುವುದು. ಮಾಹಿತಿಗೆ ದೂ. 81474 72333 ಮೂಲಕ ಸಂಪರ್ಕಿಸಬಹುದು. ಗೋಷ್ಠಿಯಲ್ಲಿ ಸಂಘಟನೆಯ ರಂಗನಾಥ್, ಪ್ರಶಾಂತ್, ಸುಬ್ರಹ್ಮಣ್ಯ, ವಿನೋದ್ ಕದಂ ಉಪಸ್ಥಿತರಿದ್ದರು.

ಡಾ.ಎಲ್.ಯೋಗಾನರಸಿಂಹಚಾರ್ ಅವರಿಗೆ ಡಾ.ಬಿ.ಸಿ.ರಾಯ್ ಸದ್ಭಾವನಾ ಪ್ರಶಸ್ತಿ ಪ್ರದಾನ

ಮೈಸೂರು,ಜೂ.29–ಮೈಸೂರಿನ ವಿದ್ಯಾರಣ್ಯಪುರಂನ ಬ್ರಹ್ಮೀಭೂತ ಶ್ರೀ ವಾಸುದೇವ



ಮಹಾರಾಜ್ ಫೌಂಡೇಷನ್ ವತಿಯಿಂದ ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಜುಲೈ 1ರಂದು ಬೆಳಗ್ಗೆ 11 ಗಂಟೆಗೆ ತ್ಯಾಗರಾಜ ರಸ್ತೆಯಲ್ಲಿರುವ ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿರಿಯ ಕೀಲುಮೂಳೆ ತಜ್ಞ ಡಾ.ಎಲ್.ಯೋಗಾನರಸಿಂಹಚಾರ್ ಅವರಿಗೆ ಡಾ.ಬಿ.ಸಿ. ರಾಯ್ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಿದೆ.

ಭಾನವಿ ಆಸ್ಪತ್ರೆ ಸಂಸ್ಥಾಪಕ ಡಾ.ವಿಜಯ ಚೆಲುವರಾಜ್, ಡಾ.ಬಿ.ಸಿ. ರಾಯ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಸಿಇಓ ಕೆ.ಆರ್.ಯೋಗಾನರಸಿಂಹನ್, ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು ಉಪಸ್ಥಿತರಿರುವರು ಎಂದು ಸಂಚಾಲಕ ಎನ್.ಅನಂತ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಬೆಂಕಿ' ಚಲನಚಿತ್ರ ಜು.15ಕ್ಕೆ ಬಿಡುಗಡೆ

ಮೈಸೂರು, ಜೂ.29 (ಆರ್‌ಕೆಬಿ)– ತಾವು ನಿರ್ದೇಶಿಸಿ ಅನೀಶ್ ನಾಯಕ ನಟರಾಗಿ ನಟಿಸಿರುವ 'ಬೆಂಕಿ' ಚಲನಚಿತ್ರ ಜು.15 ರಂದು ಬಿಡುಗಡೆಗೊಳ್ಳಲಿದ್ದು, ಇದೊಂದು ವಿಶಿಷ್ಟ ಕಥಾ ಹಂದರದ ಚಲನಚಿತ್ರವಾಗಿರುವ ಕಾರಣ ಪ್ರೇಕ್ಷಕರು ಪ್ರೋತ್ಸಾಹಿಸಬೇಕೆಂದು ನಿರ್ದೇಶಕರಾದ ಶಾನು ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಣ್ಣ ಹಾಗೂ ತಂಗಿಯ ನಡುವಿನ ಬಾಂಧವ್ಯದ ಕಥೆ ಆಧರಿಸಿರುವ ಚಲನಚಿತ್ರವಾಗಿದ್ದು, ಇಂತಹ ಕಥೆಯನ್ನೊಳಗೊಂಡ ಚಲನಚಿತ್ರ ಇತ್ತೀಚಿನ ವರ್ಷಗಳಲ್ಲಿ ತೆರೆ ಕಂಡಿಲ್ಲ. ಗ್ರಾಮೀಣ ಕಥೆಯನ್ನು ಒಳಗೊಂಡಿರುವ ಚಿತ್ರ ಸಂಪೂರ್ಣ ಗ್ರಾಮೀಣ ಭಾಗದಲ್ಲಿಯೇ ಚಿತ್ರೀಕರಣಗೊಂಡಿದೆ. ಇಡೀ ಕುಟುಂಬ ಸಮೇತ ನೋಡಬಹುದಾದ ಚಿತ್ರವಾಗಿದೆ ಎಂದರು. ಗೋಷ್ಠಿಯಲ್ಲಿ ನಟ ಅನೀಶ್, ಕಲಾವಿದರಾದ ಹುಲಿ ಕಾರ್ತಿಕ್, ಉಗ್ರಂ ಮಂಜು ಇದ್ದರು.

ಪತ್ರಕರ್ತರ ವಾರ್ಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.29–ಜಿಲ್ಲಾ ಪತ್ರಕರ್ತರ ಸಂಘವು 2021–22ನೇ ಸಾಲಿನ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳ ವರದಿ, ಅತ್ಯುತ್ತಮ ಛಾಯಾಚಿತ್ರ ಮತ್ತು ಅತ್ಯುತ್ತಮ ವಿದ್ಯುನ್ಮಾನ ವರದಿಗಳ ವಾರ್ಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ. 2021ರ ಜೂ.1ರಿಂದ 2022 ಮೇ 31ರ ಅವಧಿಯಲ್ಲಿ ವರದಿ, ಛಾಯಾಚಿತ್ರ ಪ್ರಕಟವಾಗಿರಬೇಕು. ದೃಶ್ಯ ಮಾಧ್ಯಮದಲ್ಲಿ ವರದಿ ಪ್ರಸಾರವಾಗಿರಬೇಕು. ಒಬ್ಬರು ಒಂದೇ ವರದಿ ಸಲ್ಲಿಸಬೇಕು. ಸಂಘದ ಪದಾಧಿಕಾರಿ, ಕಾರ್ಯಕಾರಿಣಿ ಸಮಿತಿ ಸದಸ್ಯರು ಪ್ರಶಸ್ತಿಗೆ ಅರ್ಜಿ ಸಲ್ಲಿಸುವಂತಿಲ್ಲ. ಜು.4ರೊಳಗೆ ಜಿಲ್ಲಾ ಪತ್ರಕರ್ತರ ಸಂಘ, 5ನೇ ಕ್ರಾಸ್, ತ್ಯಾಗರಾಜ ರಸ್ತೆ, ಅಗ್ರಹಾರ ಇಲ್ಲಿಗೆ ವರದಿ ಸಲ್ಲಿಸಬೇಕು. ಮಾಹಿತಿಗೆ ವ್ಯವಸ್ಥಾಪಕ ಕೆ.ನಾಗೇಶ್ ಮೊ. 9740557277 ಸಂಪರ್ಕಿಸಬಹುದು.

ಜಿಲ್ಲಾ ಅಭಿವೃದ್ಧಿ ಸಮನ್ವಯ, ದಿಶಾ ಸಮಿತಿ ಸಭೆ

ಮೈಸೂರು, ಜೂ.29–ಲೋಕಸಭಾ ಸದಸ್ಯ ಪ್ರತಾಪ್ ಸಿಂಹ ಅಧ್ಯಕ್ಷತೆಯಲ್ಲಿ 2022–23 ನೇ ಸಾಲಿನ ಮೊದಲನೇ ಮಾಸಿಕದ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ (ದಿಶಾ ಸಮಿತಿ) ಸಭೆಯನ್ನು ಜುಲೈ 7 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸಾಮಾಜಿಕ ಸಾಮರಸ್ಯವಿಲ್ಲದೆ ದೇಶ ಇಂದಿಗೂ ಅಭಿವೃದ್ಧಿಶೀಲ ರಾಷ್ಟ್ರ

ಕುದ್ಮುಲ್ ರಂಗರಾವ್ ಅವರಂತಹವರ ಚಿಂತನೆಗಳ ಮೂಲಕ ಸಾಮರಸ್ಯ ಮೂಡಿಸಬೇಕು; ಸಂಸದ ವಿ.ಶ್ರೀನಿವಾಸ ಪ್ರಸಾದ್

ಮೈಸೂರು,ಜೂ.29(ಪಿಎಂ)–ಸಾಮಾಜಿಕ ಸಾಮರಸ್ಯ ಇಲ್ಲದ ಕಾರಣ ದೇಶ ಇಂದಿಗೂ ಅಭಿವೃದ್ಧಿಶೀಲ ರಾಷ್ಟ್ರವಾಗಿಯೇ ಉಳಿದಿದೆ. ದಲಿತರ ಉದ್ಧಾರಕ್ಕೆ ಶ್ರಮಿಸಿದ ಕುದ್ಮುಲ್ ರಂಗರಾವ್ ಸೇರಿದಂತೆ ಅವರಂತಹವರ ಚಿಂತನೆಗಳ ಮೂಲಕ ದೇಶದಲ್ಲಿ ಸಾಮಾಜಿಕ ಸಾಮರಸ್ಯ ನೆಲೆಸುವಂತೆ ಮಾಡಬೇಕಿದೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಸಾಮಾಜಿಕ ನ್ಯಾಯ ವೇದಿಕೆ ಮತ್ತು ಸಾಮರಸ್ಯ ವೇದಿಕೆ ಜಂಟಿ ಆಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕುದ್ಮುಲ್ ರಂಗರಾವ್ ಅವರ 163ನೇ ಜನ್ಮ ದಿನಾಚರಣೆಯಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಜಗತ್ತಿನ ಎಲ್ಲಾ ರಾಷ್ಟ್ರಗಳಿಗಿಂತಲೂ ನಮ್ಮ ದೇಶದಲ್ಲಿ ಮಾನವ ಹಾಗೂ ನೈಸರ್ಗಿಕ ಸಂಪನ್ಮೂಲ ಯಥೇಚ್ಛವಾಗಿದೆ. ಆದರೆ ಸಾಮಾಜಿಕ ಸಾಮರಸ್ಯದ ಕೊರತೆಯಿಂದ ಇಂದಿಗೂ ಅಭಿವೃದ್ಧಿಶೀಲ ರಾಷ್ಟ್ರವಾಗಿಯೇ ಉಳಿದಿದೆ. ಸಾಮಾಜಿಕ ಸಾಮರಸ್ಯದಿಂದ ಮಾತ್ರ ಜಗತ್ತಿನ ಅಭಿವೃದ್ಧಿ ರಾಷ್ಟ್ರಗಳ ಸಾಲಿನಲ್ಲಿ ಭಾರತವೂ ಸೇರ್ಪಡೆಯಾಗಲಿದೆ ಎಂದು ಅವರು ಪ್ರತಿಪಾದಿಸಿದರು.

ಪ್ರಪಂಚದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಸಂಸ್ಥೆಯಾದ ನಮ್ಮ ಸಂಸತ್‌ನಲ್ಲಿ ಇಂದಿಗೂ ಬಡತನ, ಹಸಿವು ಹಾಗೂ ಅನಕ್ಷರತೆ ನಿವಾರಿಸುವ ಬಗ್ಗೆ ಚರ್ಚೆಯಾಗುತ್ತಲೇ ಇದೆ. ಇದಕ್ಕೆಲ್ಲಾ ಕಾರಣ ಸಾಮಾಜಿಕ ಸಾಮರಸ್ಯದ ಕೊರತೆ. ದೇಶ ಅತ್ಯುತ್ತಮ ಸಂವಿಧಾನ ಹೊಂದಿದ್ದರೂ ಇಂತಹ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಸಂವಿಧಾನ ವಿಮರ್ಶೆಗಾಗಿ (ಸಂವಿಧಾನ ಪುನರ್ ಪರಿಶೀಲನಾ ಸಮಿತಿ) ನ್ಯಾ.ಎಂ.ಎನ್.ವೆಂಕಟಾಚಲಯ್ಯ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿತ್ತು. ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆ ಕಾಣಲಾಗದ ಹಿನ್ನೆಲೆಯಲ್ಲಿ ಈ ಕ್ರಮ ವಹಿಸಲಾಗಿತ್ತು. ಈ ಸಮಿತಿ ರಚನೆಯ ಉದ್ದೇಶ ಸಂವಿಧಾನದ ಪುನರ್ ಬರಹವಲ್ಲ ಎಂಬುದನ್ನು ನೆನಪಿಡಬೇಕು ಎಂದರು.

ಅಸ್ಪೃಶ್ಯತೆ ನಮ್ಮಲ್ಲಿ ಬಿಟ್ಟು ಪ್ರಪಂಚದಲ್ಲಿ ಎಲ್ಲಿಯೂ ಇಲ್ಲ. ಒಂದೂವರೆ ಶತಮಾನಗಳ ಹಿಂದೆಯೇ ಕುದ್ಮುಲ್ ರಂಗರಾವ್ ಅಸ್ಪೃಶ್ಯತೆ ನಿವಾರಿಸಿ, ದಲಿತರ ಉದ್ಧಾರಕ್ಕೆ ಶ್ರಮಿಸಿದರು. ಇಂತಹ ಹಲವು ಮಹನೀಯರ ಪ್ರಯತ್ನದ ನಡುವೆ ಇಂದಿಗೂ ಅಸ್ಪೃಶ್ಯತೆ ಜೀವಂತವಾಗಿದೆ. ಬಡತನ ಸಹಿಸಬಹುದು. ಆದರೆ ಅಸ್ಪೃಶ್ಯತೆ ಸಹಿಸಲು ಸಾಧ್ಯವಿಲ್ಲ. ಗೌಡ ಸಾರಸ್ವತ ಬ್ರಾಹ್ಮಣ ಸಮುದಾಯದ ರಂಗರಾವ್ ಅವರು ಕೆಳಸ್ತರದ ಜನಾಂಗದ ಉದ್ಧಾರದ ಬಗ್ಗೆ ಚಿಂತನೆ ಮಾಡಿದರು ಎಂದು ಸ್ಮರಿಸಿದರು.

ಬ್ರಿಟಿಷರು ಆಳುವ ಕಾಲದಲ್ಲಿ ಅವರು ಮತ್ತು ಮೇಲ್ವರ್ಗದವರು ಹೊರತಾಗಿ ಕೆಳಸ್ತರದವರ ಜೀವನದ ಮಹತ್ವವನ್ನೇ ಪರಿಗಣಿಸಿರಲಿಲ್ಲ. ಸ್ವಾತಂತ್ರ್ಯೋತ್ಸವದ 50ನೇ ವರ್ಷಾಚರಣೆ ವೇಳೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಯಾರಾದರೂ ದಲಿತರು ಇದ್ದಾರೆಯೇ? ಎಂಬ ಪ್ರಶ್ನೆ ಉದ್ಭವಿಸಿತು. ದಲಿತ ವರ್ಗದಲ್ಲಿ ಸ್ವಾತಂತ್ರ್ಯದ ಪ್ರಜ್ಞೆಯೇ ಇರಲಿಲ್ಲ. ಹಾಗಾಗಿ ಹೇಗೆ ತಾನೇ ಇರಲು ಸಾಧ್ಯ? ವಿದ್ಯೆ–ಬುದ್ಧಿ, ಅಧಿಕಾರ ಇಲ್ಲದೆ ಇದ್ದ ದಲಿತರಿಗೆ ಮೇಲ್ವರ್ಗದವರು ಮತ್ತು ಬ್ರಿಟಿಷರು ಇಬ್ಬರೂ ಒಂದೇ ಆಗಿದ್ದರು ಎಂದರು.

ನಾನು ಓದುತ್ತಿದ್ದ ಸಂದರ್ಭದಲ್ಲಿ ಇಲ್ಲಿನ ಗೋಪಾಲಸ್ವಾಮಿ ಅಯ್ಯರ್ ಅವರು ಯಾರಾದರೂ ದಲಿತರು ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿದ್ದಾರಾ? ಎಂದು ಹುಡುಕುತ್ತಿದ್ದರು. ಪತ್ರಿಕೆಯಲ್ಲಿ ಅಂತಹ ಮಾಹಿತಿ ಕಲೆ ಹಾಕಿ, ಅಂತಹವರಿಗೆ ಮುಂದಿನ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿದ್ದರು. ಅದಕ್ಕಿಂತಲೂ ಹಿಂದೆಯೇ ರಂಗರಾವ್ ಅವರು ನಿಮ್ನ ವರ್ಗದವರನ್ನು ಮುಖ್ಯವಾಹಿನಿಗೆ ತರಲು ಸತತ ಪ್ರಯತ್ನ ಮಾಡಿದರು ಎಂದು ಸ್ಮರಿಸಿದರು.

ನಾನು 4ನೇ ತರಗತಿಯಲ್ಲಿ ಓದುತ್ತಿದ್ದ ಸಂದರ್ಭದಲ್ಲಿ ಕೇಂದ್ರ ಸಚಿವರಾಗಿದ್ದ ಬಾಬು ಜಗಜೀವನ ರಾಮ್ ನಮ್ಮ ಅಶೋಕಪುರಂಗೆ ಬಂದಿದ್ದರು. ಆಗ ಅವರ ಎದುರು ನೆಲದ ಮೇಲೆ ಕುಳಿತಿದ್ದೆ. ಮುಂದೆ ನಾನು ಸಂಸದನಾಗಿ ಅವರನ್ನು ಸಂಸತ್‌ನಲ್ಲಿ ನೋಡಲು ಅವಕಾಶ ದೊರೆಯಿತು. ಅವರೂ ಅಸ್ಪೃಶ್ಯತೆ ನೋವುಂಡು ಬಂದವರು. ಪರಿಶಿಷ್ಟರಲ್ಲಿ ಯಾವುದೇ ಸಮುದಾಯದವರಿರಲಿ. ಒಡಕು ಮೂಡಬಾರದು. ಒಗ್ಗಟ್ಟು ಇದ್ದರಷ್ಟೇ ನಾವು ಮುಖ್ಯವಾಹಿನಿಗೆ ಬರಲು ಸಾಧ್ಯ. ಯಾವುದೋ ಕ್ಷಣಿಕ ಆಸೆಗಳಿಂದ ಒಡಕು ಮೂಡುವಂತೆ ಆಗಬಾರದು ಎಂದರು. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಕುದ್ಮುಲ್ ರಂಗರಾವ್ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಬೆಂಗಳೂರು ವಿವಿಯ ಡಾ.ಬಾಬೂ ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ.ಬಿ.ಗಂಗಾಧರ್, ಸಾಮಾಜಿಕ ನ್ಯಾಯ ವೇದಿಕೆ ಅಧ್ಯಕ್ಷರೂ ಆದ ಖ್ಯಾತ ಹಿರಿಯ ನ್ಯಾಯವಾದಿ ಓ.ಶಾಮಭಟ್ ಮತ್ತಿತರರು ಹಾಜರಿದ್ದರು.



ಮೈಸೂರು ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕುದ್ಮುಲ್ ರಂಗರಾವ್ ಜನ್ಮದಿನಾಚರಣೆಯಲ್ಲಿ ರಂಗರಾವ್ ಹಾಗೂ ಅಂಬೇಡ್ಕರ್ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ಕುದ್ಮುಲ್ ರಂಗರಾವ್ ವಿಚಾರಕ್ಕೆ ಗಾಂಧಿ ಕೂಡ ಪ್ರಭಾವಿತರು

ಮೈಸೂರು: ಕುದ್ಮುಲ್ ರಂಗರಾವ್ ವಿಚಾರಧಾರೆಗಳಿಗೆ ಗಾಂಧಿ ಕೂಡ ಪ್ರಭಾವಿತರಾಗಿದ್ದರು. ಆ ಮೂಲಕ ಗಾಂಧಿಯವರಲ್ಲೂ ದೊಡ್ಡ ವೈಚಾರಿಕ ಬದಲಾವಣೆಗಳು ಆಗಿದ್ದವು ಎಂದು ಬೆಂಗಳೂರು ವಿವಿಯ ಡಾ.ಬಾಬೂ ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ.ಬಿ.ಗಂಗಾಧರ್ ಹೇಳಿದರು.

ರಂಗರಾವ್ ಕಾಲವಾದ ನಂತರ 1934ರಲ್ಲಿ ಗಾಂಧಿಯವರು ರಂಗರಾವ್ ಅವರ ಸಂಸ್ಥೆಗೆ ಭೇಟಿ ನೀಡಿದ್ದರು. ಈ ವೇಳೆ ಇವರ ಎಲ್ಲಾ ಸಾಧನೆ ಬಗ್ಗೆ ತಿಳಿದ ಗಾಂಧಿ, ದಮನಿತರ ಉದ್ಧಾರದ ಹೋರಾಟದಲ್ಲಿ ನನಗೆ ರಂಗರಾವ್ ಗುರುಗಳು ಎಂದು ಹೇಳಿಕೊಂಡಿದ್ದರು. 1934ಕ್ಕೂ ಮೊದಲೇ ರಂಗರಾವ್ ಸಂಸ್ಥೆಗೆ ಗಾಂಧಿ ಭೇಟಿ ನೀಡಿದ್ದರೆ, ಡಾ.ಅಂಬೇಡ್ಕರ್ ಅವರು ಪೂನಾ ಒಪ್ಪಂದದ ವೇಳೆ ಕಣ್ಣೀರು ಹಾಕುವ ಸನ್ನಿವೇಶ ಬಹುಶಃ ಬರುತ್ತಿರಲಿಲ್ಲ. ರಂಗರಾವ್ ಪರಿಚಯದ ಬಳಿಕ ಗಾಂಧಿಯವರಲ್ಲೂ ದೊಡ್ಡ ವೈಚಾರಿಕ ಬದಲಾವಣೆಗಳು ಆಗಿವೆ. 1912ರ ಸುಮಾರಿನಲ್ಲಿ ರಂಗರಾವ್ ತಮ್ಮ ಮಗಳಿಗೆ ಅಂತರ್ಜಾತಿ ವಿವಾಹ ಮಾಡುತ್ತಾರೆ. ಜಾತಿ ವಿನಾಶಕ್ಕೆ ಅಂತರ್ಜಾತಿ ವಿವಾಹ ಮದ್ದು ಎನ್ನುವುದು ರಂಗರಾವ್ ಚಿಂತನೆಯಾಗಿತ್ತು. ಇದರಿಂದ ಪ್ರಭಾವಿತರಾಗಿ ಗಾಂಧಿಯವರು ತಮ್ಮ ಮಗನಿಗೆ ಅಂತರ್ಜಾತಿ ಮದುವೆ ಮಾಡಿದರು ಎಂದು ತಿಳಿಸಿದರು.

ಪಠ್ಯದಲ್ಲಿ ಕುದ್ಮುಲ್ ಕುರಿತು ಅಧ್ಯಾಯ ಸೇರಿಸಿದರೆ ಸಾರ್ಥಕ

ಮೈಸೂರು: ಪಠ್ಯದಲ್ಲಿ ಕುದ್ಮುಲ್ ರಂಗರಾವ್ ಅವರ ಜೀವನ ಮತ್ತು ಸಮಾಜ ಸುಧಾರಣೆ ಕುರಿತು ಸೇರ್ಪಡೆಗೊಳಿಸಬೇಕೆಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಸರ್ಕಾರವನ್ನು ಒತ್ತಾಯಿಸಿದರು.

ಪಠ್ಯ ಪುಸ್ತಕ ಪರಿಷ್ಕರಣೆ ಕೈಗೆತ್ತಿಕೊಂಡಿರುವ ಸರ್ಕಾರ ಇಂತಹವರ ವಿಚಾರಗಳನ್ನು ಸೇರ್ಪಡೆಗೊಳಿಸಿದರೆ ನಿಜಕ್ಕೂ ಸಾರ್ಥಕ. ಆದರೆ ಸರ್ಕಾರ ನೇಮಿಸಿರುವ ಶಿಕ್ಷಣ ತಜ್ಞರಿಗೆ ಯಾವುದು ಬೇಕು, ಯಾವುದು ಬೇಡ ಎನ್ನುವ ಆಲೋಚನೆಯೇ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಅಸ್ಪೃಶ್ಯತೆ ಆಚರಣೆ ಮಾಡುತ್ತಿದ್ದ ಸಮುದಾಯದಲ್ಲೇ ಹುಟ್ಟಿದ ರಂಗರಾವ್ ಅಸ್ಪೃಶ್ಯತೆ ವಿರುದ್ಧ ಹೋರಾಟ ಮಾಡಿದರು. ಅವರು ಅಪರೂಪದ ವ್ಯಕ್ತಿ. ದಲಿತರ ಬಗ್ಗೆ ಮೇಲ್ವರ್ಗದಲ್ಲಿ ನಿಕೃಷ್ಟವಾದ ಭಾವನೆ ಇತ್ತು. ಪಶು–ಪಕ್ಷಿಗಳಿಗಿಂತ ಹೀನಾಯವಾಗಿ ಬದುಕುತ್ತಿದ್ದ ದಲಿತರ ಉದ್ಧಾರದ ಬಗ್ಗೆ ಚಿಂತನೆ ಮಾಡಿದವರು ರಂಗರಾವ್ ಎಂದು ಸ್ಮರಿಸಿದರು.

ಮಳಖೇಡದ ಜಯತೀರ್ಥರ ಮೂಲ ವೃಂದಾವನ ಕುರಿತ ತಪ್ಪು ಪ್ರಚಾರದಿಂದ ಗೊಂದಲ

ಇಂದು ಮೈಸೂರಲ್ಲಿ ಬ್ರಾಹ್ಮಣ ಸಂಘದಿಂದ ಪ್ರತಿಭಟನಾ ಮೆರವಣಿಗೆ

ಮೈಸೂರು,ಜೂ.29(ಆರ್‌ಕೆಬಿ)– ಮಳಖೇಡದ ಜಯತೀರ್ಥರ ಮೂಲ ವೃಂದಾವನ ಕುರಿತಾಗಿ ತಪ್ಪು ಪ್ರಚಾರ ಮಾಡುತ್ತ ಸಮಾಜದಲ್ಲಿ ಗೊಂದಲ ಸೃಷ್ಟಿಸುವುದನ್ನು ವಿರೋಧಿಸಿ ಜೂ.30ರಂದು ಮೈಸೂರಿನಲ್ಲಿ ಮೌನ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿಲ್ಲ, ಗಂಗಾವತಿ ತಾಲೂಕಿನ ಆನೆಗುಂದಿ ಗ್ರಾಮದ ನಡುಗಡ್ಡೆಯಾದ ನವ ವೃಂದಾವನದಲ್ಲಿದೆ. ಅಲ್ಲಿರುವ ಉತ್ತರಾದಿ ಮಠದ ರಘುವರ್ಯರ ವೃಂದಾವನವೇ ನವ ವೃಂದಾವನವಾಗಿದೆ ಎಂದು ಶ್ರೀ ರಾಯರ ಮಠ ಪ್ರಚಾರ ಮಾಡುತ್ತಿದೆ. ಇದನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ರಾಯರ ಮಠದ ಶ್ರೀಗಳಾದ ಸುಬುಧೇಂದ್ರ ತೀರ್ಥರು ಹಾಗೂ ಅವರ ಶಿಷ್ಯರು ಈ ಆಷಾಢ ಮಾಸದಲ್ಲಿ 3 ದಿನಗಳಲ್ಲಿ ಬರುವ ಜಯತೀರ್ಥರ ಆರಾಧನೆಯನ್ನು ನವ ವೃಂದಾವನದಲ್ಲಿ ವೈಭವೋಪೇತವಾಗಿ ಆಚರಿಸಲು ಭಕ್ತರಿಗೆ ಕರೆ ನೀಡಿದ್ದಾರೆ. ಇದು ಜಯತೀರ್ಥರ ಎಲ್ಲ ಭಕ್ತರಿಗೂ ನೋವುಂಟು ಮಾಡಿದೆ ಎಂದರು. ಗೋಷ್ಠಿಯಲ್ಲಿ ಅನಿರುದ್ಧಾಚಾರ್, ಹರೀಶಾಚಾರ್, ವಾಸುದೇವಮೂರ್ತಿ ಇದ್ದರು.



> "ಶ್ರೀರಾಯರ ಮಠದ ಪೂರ್ವ ಯತಿಗಳು, ಅಧಿಕೃತ ಏಜೆಂಟರು ನವ ವೃಂದಾವನದಲ್ಲಿ ಉತ್ತರಾದಿ ಮಠದ ರಘುವರ್ಯ ತೀರ್ಥರ ವೃಂದಾವನ ಇದೆ ಎಂದು ನ್ಯಾಯಾಲಯದಲ್ಲಿ ಅಧಿಕೃತ ಹೇಳಿಕೆ ನೀಡಿದ್ದಾರೆ. ಹೀಗಿದ್ದರೂ ರಘುವರ್ಯರ ವೃಂದಾವನಕ್ಕೆ ಜಯತೀರ್ಥರ ವೃಂದಾವನ ಎಂದು ಪ್ರಚಾರ ಮಾಡುತ್ತಿರುವುದು, ಅಲ್ಲಿ ಪೂಜಾ ಆರಾಧನೆ ಮಾಡುತ್ತಿರುವುದು ಬೇಸರ ತಂದಿದೆ. ಇದಕ್ಕೆ ತಡೆ ನೀಡಬೇಕೆಂದು ಆಗ್ರಹಿಸಿ, ಜೂ.30ರಂದು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಡಿಸಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. **–ಡಿ.ಟಿ.ಪ್ರಕಾಶ್**

ನಕಲಿ ಫೇಸ್‌ಬುಕ್ ಖಾತೆ ತೆರೆದು ಅನುಚಿತ ಸಂದೇಶ

ಸೆನ್ ಪೊಲೀಸ್ ಠಾಣೆಗೆ ನಟಿ ಪವಿತ್ರಾ ಲೋಕೇಶ್ ದೂರು

ಮೈಸೂರು, ಜೂ. 29 (ಆರ್‌ಕೆ)–ಅಪರಿಚಿತರು ತನ್ನ ಹೆಸರಲ್ಲಿ ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆದು ಅನುಚಿತ ಮೆಸೇಜ್‌ಗಳನ್ನು ಹಾಕಿ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ಚಿತ್ರನಟಿ ಪವಿತ್ರಾ ಲೋಕೇಶ್ ಅವರು ಮೈಸೂರಿನ ಸೈಬರ್, ಮಾದಕ ದ್ರವ್ಯ ಮತ್ತು ಆರ್ಥಿಕ ಅಪರಾಧ (ಸಿಇಎನ್) ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಫೇಸ್‌ಬುಕ್‌ನಲ್ಲಿ ನನ್ನ ಬಗ್ಗೆ ಮಾನಹಾನಿಯಾಗುವಂತೆ ಮೆಸೇಜ್‌ಗಳನ್ನು ಹಾಕಿರುವುದಲ್ಲದೆ, ಇತರ ಪೇಜ್‌ಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲೂ ಸುಳ್ಳು ಸುದ್ದಿಗಳು ಹಾಗೂ ಘನತೆಗೆ ಧಕ್ಕೆ ಬರುವ ರೀತಿಯಲ್ಲಿ ಸಂದೇಶಗಳನ್ನು ಹರಡುತ್ತಿದ್ದಾರೆ. ಇದರಿಂದ ನನಗೆ ಮಾನಸಿಕವಾಗಿ ಕಿರುಕುಳ ಉಂಟಾಗಿದ್ದು, ಈ ರೀತಿ ನಕಲಿ ಫೇಸ್‌ಬುಕ್ ತೆರೆದು, ಮಾನಹಾನಿ ಮಾಡಿರುವವರ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸುವಂತೆ ಪವಿತ್ರಾ ಲೋಕೇಶ್, ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಲಿಖಿತ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಸೌತ್ ಠಾಣೆ ಇನ್ಸ್‌ಪೆಕ್ಟರ್ ಜಯಕುಮಾರ್, ತಂತ್ರಜ್ಞಾನ ಬಳಸಿ ಗೂಗಲ್ ಸರ್ಚ್ ಮೂಲಕ ನಕಲಿ ಫೇಸ್‌ಬುಕ್ ತೆರೆದಿರುವ ಹಾಗೂ ತಂತ್ರಾಂಶದಲ್ಲಿ ಸಂದೇಶ ರವಾನಿಸಿರುವ ವ್ಯಕ್ತಿಗಳು ಯಾರೆಂಬುದನ್ನು ಪತ್ತೆ ಮಾಡಲು ಪ್ರಯತ್ನಿಸುತ್ತಿದ್ದಾರೆ.



ಮೈಸೂರು ನಗರದ ಮಹದೇಶ್ವರ ಬಡಾವಣೆ 2ನೇ ಕ್ರಾಸ್‌ನಲ್ಲಿ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಗೆ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಚಾಲನೆ ನೀಡಿದರು. ಈ ವೇಳೆ ದಳಪತಿ ರಮೇಶ್, ಕೃಷ್ಣಪ್ಪ, ರಾಮ್ ಪ್ರಸಾದ್, ಇನ್ನಿತರರಿದ್ದರು.

ಶಿವಾಜಿರಾವ್ ಜಾಧವ್‌ಗೆ ಸಿಜಿಕೆ ರಂಗ ಪುರಸ್ಕಾರ


ಮೈಸೂರು, ಜೂ. 29–ರಂಗಕರ್ಮಿ ಪ್ರೊ. ಸಿಜಿಕೆ ರಂಗ ಅವರ ಜನ್ಮದಿನದಂದು ಪ್ರತಿ ವರ್ಷ ರಂಗಭೂಮಿಯಲ್ಲಿ ಅನನ್ಯ ಸೇವೆ ಸಲ್ಲಿಸಿದವರಿಗೆ ನೀಡುವ ಸಿಜಿಕೆ ರಂಗ ಪುರಸ್ಕಾರಕ್ಕೆ ರಂಗಕರ್ಮಿ, ಚಿತ್ರನಟ ಶಿವಾಜಿರಾವ್ ಜಾಧವ್‌ರನ್ನು ಆಯ್ಕೆ ಮಾಡಲಾಗಿದೆ.





ಮೈಸೂರು ಜನತಾನಗರದಲ್ಲಿ ರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ಪಾಲಿಕೆ ಸದಸ್ಯೆ ಸವಿತಾ ಸುರೇಶ್ ಚಾಲನೆ ನೀಡಿದರು. ಈ ವೇಳೆ ಇಂಜಿನಿಯರ್ ಕಿರಣ್, ಮುಖಂಡರಾದ ಲಿಂಗೇಗೌಡ, ಕುಮಾರ್, ಪ್ರಸಾದ್, ಮಂಜು, ರಮೇಶ್, ಮಂಚೇಗೌಡ, ಮಂಜು, ರಾಮಣ್ಣ, ಮಲ್ಲೇಶ್, ಸುನೀಲ್, ಮಾದೇವ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.06.2022 ಗುರುವಾರ, ಮಳೆ ನಕ್ಷತ್ರ : ಆರಿದ್ರೆ 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ಪ್ರತಿಪತ್, ನಕ್ಷತ್ರ : ಪುನರ್ವಸು, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯುವರೆಗೆ

■ **ಬಾಸುದೇವ ಸೋಮಾನಿ ಕಾಲೇಜು:** ಸಂಭ್ರಮ ವಾರ್ಷಿಕ ಸಂಚಿಕೆ ಬಿಡುಗಡೆ ಹಾಗೂ ಪ್ರತಿಭಾನ್ವೇಷಣಾ ಕಾರ್ಯಕ್ರಮ, ಉದ್ಘಾಟನೆ: ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಸಂಭ್ರಮ ಸಂಚಿಕೆ ಬಿಡುಗಡೆ: ಸಾಹಿತಿ ರಾಮೇಶ್ವರಪ್ಪ, ಮುಖ್ಯ ಅತಿಥಿಗಳು: ಬೆಮೆಲ್ ಕಂಪಲಪ್ಪ, ಕುಬೇರ್ ಗೌಡ, ಪ್ರಭಾ ಪುಟ್ಟಸ್ವಾಮಿ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ :** ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಎಸ್.ಕೆ. ಸೈದಾಪುರ್ ಅವರಿಂದ ಮೇಜರ್ ಲ್ಯಾಂಡ್‌ಮಾರ್ಕ್ಸ್ ಇನ್ ಬಯೋಲಜಿ ಕುರಿತು ವಿಶೇಷ ಉಪನ್ಯಾಸ, ಅಧ್ಯಕ್ಷತೆ : ಬಟಾನಿಕಲ್ ಸೊಸೈಟಿ ಅಧ್ಯಕ್ಷ ಪ್ರೊ. ಕೆ.ಎನ್. ಅಮೃತೇಶ್, ಸ್ಥಳ: ಲೀನಿಯಸ್ ಹಾಲ್, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಬೆಳಗ್ಗೆ 10.15ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ನೇಹ ಸಿಂಚನ ಟ್ರಸ್ಟ್ :** ಪರಿಸರ ಮಾಸಾಚರಣೆ ಪ್ರಯುಕ್ತ ಪೌರಕಾರ್ಮಿಕರಿಗೆ ಸನ್ಮಾನ ಸಮಾರಂಭ ಹಾಗೂ ಪರಿಸರ ಗೀತ ಗಾಯನ ಕಾರ್ಯಕ್ರಮ, ಸಾನ್ನಿಧ್ಯ: ಮೇಲುಕೋಟೆ ಶ್ರೀ ವಂಗೀಪುರ ನಂಜಿಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಎಸ್.ರಾಮಪ್ರಸಾದ್, ಸಾಹಿತಿ ಡಾ.ಕೆ.ಲೀಲಾಪ್ರಕಾಶ್, ಕುಟುಂಬ ಸಲಹಾ ಕೇಂದ್ರದ ಡಾ.ಮಂಜುಳಾ ಉಮೇಶ್, ನಿವೃತ್ತ ಪ್ರಾಧ್ಯಾಪಕ ಡಾ.ಕಮಲಾ ಜೈನ್, ಸ್ನೇಹ ಸಿಂಚನ ಟ್ರಸ್ಟ್ ಅಧ್ಯಕ್ಷೆ ಮ.ನ.ಲತಾಮೋಹನ್, ಸ್ಥಳ: ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್, ಜಯನಗರ, ಬೆಳಗ್ಗೆ 10.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ತಿ. ನರಸೀಪುರದಲ್ಲಿಂದು

■ **ಜಾಗತಿಕ ಲಿಂಗಾಯತ ಮಹಾಸಭಾ :** ತಿ. ನರಸೀಪುರ ತಾಲೂಕು ಘಟಕ ಉದ್ಘಾಟನೆ ಹಾಗೂ ಪದಗ್ರಹಣ ಸಮಾರಂಭ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ಬಸವಯೋಗಿ ಸ್ವಾಮೀಜಿ, ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಉದ್ಘಾಟನೆ : ನ್ಯಾಯಮೂರ್ತಿ ಅರಳಿ ನಾಗರಾಜ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಘಟಕ ಅಧ್ಯಕ್ಷ ಶರಣ ಮಹಾದೇವಪ್ಪ, ಅತಿಥಿಗಳು: ವಿ.ಶಿವಮಲ್ಲಪ್ಪ ಎಂ.ಸೀಹಳ್ಳಿ, ಲಿಂಗರಾಜಪ್ಪ ಚೌಹಳ್ಳಿ, ಸ್ಥಳ: ಜಾಗತಿಕ ಲಿಂಗಾಯತ ಮಹಾಸಭಾ ಆವರಣ, ತಿ.ನರಸೀಪುರ.

ಕಾಮನಕೆರೆಹುಂಡಿ ಗ್ರಾಮದಲ್ಲಿಂದು

■ **ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಗೀತಾ ಶಿಶು ಶಿಕ್ಷಣ ಸಂಘ, ಮಹಿಳಾ ತಾಂತ್ರಿಕ ಮಹಾವಿದ್ಯಾಲಯ:** ಕೆಂಪೇಗೌಡರ ಜಯಂತಿ ಹಾಗೂ ಪರಿಸರ ದಿನಾಚರಣೆ, ಸಾನ್ನಿಧ್ಯ: ಶ್ರೀ ಸೋಮೇಶ್ವರ ನಾಥ ಸ್ವಾಮೀಜಿ, ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಕೆ.ಗೋವಿಂದರಾಜ್, ಸಹಾಯಕ ಕಾರ್ಮಿಕ ಆಯುಕ್ತೆ ನಾಜೀಯ ಸುಲ್ತಾನ, ಸ್ಥಳ: ಕಾಮನಕೆರೆಹುಂಡಿ ಗ್ರಾಮ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಎಂ.ರಾಘವೇಂದ್ರ, ಕೆ.ಬಿ. ಸುನೀತಾ ಆಚಾರ್ಯ ಮತ್ತು ಟಿ.ಎಸ್.ಸ್ನೇಹಾ, ವ್ಯಾಖ್ಯಾನ– ಡಾ.ಸಿ.ನಾಗಣ್ಣ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಮೈಸೂರು ಎಸ್.ರಾಜಲಕ್ಷ್ಮಿ –ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಎಂ.ವೆಂಕಟೇಶಾಚಾರ್, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ.ಮೀನಾ, 1.20 ಭಾವಗೀತೆ–ವೀಣಾ ಶ್ರೀನಿವಾಸ್, ಮಧುಲಿಕಾ ಶ್ರೀನಿವಾಸ್ ಮತ್ತು ಆರ್.ವಿ.ವಿದ್ಯಾ, 3.00ರಾಗಲಹರಿ, ಪ್ರಸ್ತುತಿ– ಜಿ.ಪುಷ್ಪಲತಾ, 4.00 ಹಳ್ಳಿ ಹಾಡು–ಭಾಗವಹಿಸುವವರು ಮಹದೇವಸ್ವಾಮಿ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ, 9.00 ಯುವವಾಣಿ "ಹಲೋ ಯುವವಾಣಿ", 10.00 ನಾಟಕ "ಹನೂಷ್", ಮೂಲ ಹಿಂದಿ–ಭೀಷ್ಮ ಸಾಹ್ನಿ, ಬಾನುಲಿ ರೂಪ– ಚಿರಂತಜೀತ್, ನಿರ್ವಾಣ ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು

ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯ 49ನೇ ವಾರ್ಷಿಕೋತ್ಸವ; ಸಂಸ್ಥಾಪಕರ ದಿನಾಚರಣೆ

● ಆಯಂದಿರು ಮತ್ತು ವಾರ್ಡ್ ಬಾಯ್ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ● ಮುಂದಿನ ವರ್ಷ ಅಮೃತ ಮಹೋತ್ಸವಕ್ಕೆ ಸಜ್ಜು ● ಮೈಸೂರಿನ ಬೆಸ್ಟ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಪ್ರಶಸ್ತಿಗೆ ಭಾಜನ




ಮೈಸೂರಿನ ಕುವೆಂಪುನಗರದ ಕಾಮಾಕ್ಷಿ ಆಸ್ಪತ್ರೆಯ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಆಸ್ಪತ್ರೆಯ 49ನೇ ವಾರ್ಷಿಕೋತ್ಸವ ಹಾಗೂ ಸಂಸ್ಥಾಪಕರ ದಿನಾಚರಣೆಯಲ್ಲಿ ಮೈಸೂರಿನ ಬೆಸ್ಟ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಪ್ರಶಸ್ತಿಯನ್ನು ಪ್ರದರ್ಶಿಸಲಾಯಿತು. ಈ ವೇಳೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಆಸ್ಪತ್ರೆಯ ವ್ಯವಸ್ಥಾಪಕ ಟ್ರಸ್ಟಿ ಮಹೇಶ್ ಶೆಣೈ, ಜಂಟಿ ವ್ಯವಸ್ಥಾಪಕ ಟ್ರಸ್ಟಿ ಅಶೋಕ್ ಶೆಣೈ, ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ವೈದ್ಯಕೀಯ ಅಧೀಕ್ಷಕ ಡಾ.ಉಮೇಶ್‌ಕಾಮತ್, ಆಸ್ಪತ್ರೆಯ ಟ್ರಸ್ಟಿ ವಿಶ್ವನಾಥರಾವ್ ಮತ್ತು ಅವರ ಪತ್ನಿ ಜಯಂತಿ ವಿಶ್ವನಾಥರಾವ್, ಮತ್ತೊಬ್ಬ ಟ್ರಸ್ಟಿ ಸುರೇಶ್‌ರಾವ್, ರಘುಲಾಲ್ ಕಂಪನಿಯ ರಾಘವನ್ ಇದ್ದರು. ಮತ್ತೊಂದು ಚಿತ್ರದಲ್ಲಿ ಆಸ್ಪತ್ರೆಯಲ್ಲಿ ಕಳೆದ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ವೈದ್ಯೆ ಡಾ.ಅನುರಾಧ ಪ್ರಭು ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜೂ.29(ಪಿಎಂ)– ಮೈಸೂರಿನ ಕುವೆಂಪುನಗರದ ಕಾಮಾಕ್ಷಿ ಆಸ್ಪತ್ರೆಯ 49ನೇ ವಾರ್ಷಿಕೋತ್ಸವ ಹಾಗೂ ಸಂಸ್ಥಾಪಕರ ದಿನವನ್ನು ಬುಧವಾರ ಆಸ್ಪತ್ರೆ ಆವರಣದಲ್ಲಿ ಆಚರಿಸಲಾಯಿತು.

ಪ್ರತಿವರ್ಷದಂತೆ ಈ ಬಾರಿಯೂ ಆಸ್ಪತ್ರೆಯ ಆಯಂದಿರು ಮತ್ತು ವಾರ್ಡ್ ಬಾಯ್ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದ ನಾಲ್ವರಿಗೆ ಅವರ ಮುಂದಿನ ವ್ಯಾಸಂಗಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ನಗದು ಬಹುಮಾನ, ಪ್ರತಿಭಾ ಪುರಸ್ಕಾರ ನೀಡಲಾಯಿತು.

ಅಲ್ಲದೆ, ಕಳೆದ 25 ವರ್ಷಗಳಿಂದ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯೆ ಡಾ.ಅನುರಾಧ ಪ್ರಭು ಅವರನ್ನು ಸನ್ಮಾನಿಸಲಾಯಿತು. ಕೈಗೆಟಕುವ ದರದಲ್ಲಿ ವೈದ್ಯಕೀಯ ಸೇವೆ ನೀಡುವ ಸದಾಶಯದೊಂದಿಗೆ ಕುವೆಂಪು ನಗರದಲ್ಲಿ 1973ರ ಏಪ್ರಿಲ್‌ನಲ್ಲಿ ಪ್ರಾರಂಭವಾದ ಕಾಮಾಕ್ಷಿ ಆಸ್ಪತ್ರೆ, ಮುಂದಿನ ವರ್ಷ ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಅಮೃತ ಮಹೋತ್ಸವ ಆಚರಿಸಿಕೊಳ್ಳಲು ಸಜ್ಜಾಗುತ್ತಿದೆ.

ದಿವಂಗತ ಮಾಧವಶೆಣೈ ಮತ್ತು ದಿವಂಗತ ಸುಲೋಚನಾ ಮಾಧವಶೆಣೈ ದಂಪತಿಯ ಸೇವಾ ಮನೋಭಾವದ ಕನಸಿನ ಕೂಸಾಗಿ ಸ್ಥಾಪನೆಯಾದ ಆಸ್ಪತ್ರೆಯು, ಕಳೆದ ಎರಡು ವರ್ಷಗಳ ಹಿಂದೆ ಮೈಸೂರಿನ ಜೆಪಿ ನಗರದಲ್ಲಿ ತನ್ನ ಎರಡನೇ ಶಾಖೆಯನ್ನು ಪ್ರಾರಂಭಿಸಿತು.

ಕುವೆಂಪುನಗರದ ಮುಖ್ಯ ಶಾಖೆಯಲ್ಲಿ ಎಲ್ಲಾ ವೈದ್ಯಕೀಯ ಸೌಲಭ್ಯಗಳೊಂದಿಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಹೊರಹೊಮ್ಮಿದ್ದು, ಇಲ್ಲಿ 250 ಹಾಸಿಗೆಗಳನ್ನು ಹೊಂದಿದೆ. ಅದೇ ರೀತಿ ಎಲ್ಲಾ ಸೌಲಭ್ಯದೊಂದಿಗೆ ಜೆಪಿ ನಗರದ ಆಸ್ಪತ್ರೆ ಶಾಖೆಯು 110 ಹಾಸಿಗೆಗಳ ಸಾಮರ್ಥ್ಯದೊಂದಿಗೆ ಸ್ಥಳೀಯರಿಗೆ ಗುಣ ಮಟ್ಟದ ವೈದ್ಯಕೀಯ ಸೇವೆ ನೀಡುತ್ತಿದೆ.

ಕನ್ನಡದ ಸುದ್ದಿ ವಾಹಿನಿಯೊಂದು ಇತ್ತೀಚೆಗೆ ನಡೆಸಿದ ಸರ್ವೇಯಲ್ಲಿ ಮೈಸೂರಿನ ಬೆಸ್ಟ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಪ್ರಶಸ್ತಿಗೆ ಕಾಮಾಕ್ಷಿ ಆಸ್ಪತ್ರೆ ಭಾಜನವಾಗಿದೆ. ಆಸ್ಪತ್ರೆ ಸಂಸ್ಥಾಪಕರಾದ ಮಾಧವಶೆಣೈ ಅವರ ಮೊಮ್ಮಗ ಮಹೇಶ್ ಶೆಣೈ (ಆಸ್ಪತ್ರೆಯ ವ್ಯವಸ್ಥಾಪಕ ಟ್ರಸ್ಟಿ) ಮತ್ತು ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್ ಅವರ ಪರಿಶ್ರಮದಿಂದ ಆಸ್ಪತ್ರೆ ಉತ್ತಮ ವೈದ್ಯಕೀಯ ಸೇವೆಯೊಂದಿಗೆ ಮುನ್ನಡೆದಿದೆ. ಆಸ್ಪತ್ರೆ ಆರಂಭಗೊಂಡ ದಿನದಿಂದ ಈವರೆಗೆ ಒಂದು ದಿನವೂ ರಜೆ ಇಲ್ಲದೆ ಕೆಲಸ ಮಾಡುತ್ತಿರುವ ಹಿರಿಮೆಗೆ ಡಾ.ಕೆ.ಆರ್. ಕಾಮತ್ ಭಾಜನರಾಗಿದ್ದಾರೆ.

ಸಂಸ್ಥಾಪಕರಲ್ಲಿ ಒಬ್ಬರಾದ ಮಾಧವಶೆಣೈ ಅವರ ಜನ್ಮದಿನದಂದು (ಜೂ.29) ಪ್ರತಿವರ್ಷ ವಾರ್ಷಿಕೋತ್ಸವ ಹಾಗೂ ಸಂಸ್ಥಾಪಕರ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಇಂದು ನಡೆದ ವಾರ್ಷಿಕೋತ್ಸವ ಹಾಗೂ ಸಂಸ್ಥಾಪಕರ ದಿನಾಚರಣೆಯಲ್ಲಿ ಅತಿಥಿಗಳಾಗಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಮತ್ತು ಅವರ ಪತ್ನಿ ರ್‍ಯಾಲಿ ಗಣಪತಿ ಪಾಲ್ಗೊಂಡಿದ್ದರು. ಆಸ್ಪತ್ರೆಯ ವ್ಯವಸ್ಥಾಪಕ ಟ್ರಸ್ಟಿ ಮಹೇಶ್ ಶೆಣೈ, ಜಂಟಿ ವ್ಯವಸ್ಥಾಪಕ ಟ್ರಸ್ಟಿ ಅಶೋಕ್ ಶೆಣೈ, ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ವೈದ್ಯಕೀಯ ಅಧೀಕ್ಷಕ ಡಾ.ಉಮೇಶ್ ಕಾಮತ್, ಆಸ್ಪತ್ರೆಯ ಟ್ರಸ್ಟಿ ವಿಶ್ವನಾಥರಾವ್ ಮತ್ತು ಅವರ ಪತ್ನಿ ಜಯಂತಿ ವಿಶ್ವ ನಾಥರಾವ್, ಮತ್ತೊಬ್ಬ ಟ್ರಸ್ಟಿ ಸುರೇಶ್‌ರಾವ್, ರಘುಲಾಲ್ ಕಂಪನಿಯ ರಾಘವನ್ ಮತ್ತಿತರರು ಹಾಜರಿದ್ದರು.

ಗಂಡನ ಮನೆಯವರ ಕಿರುಕುಳ: ವಿಷ ಸೇವಿಸಿ ಮಹಿಳೆ ಆತ್ಮಹತ್ಯೆ

ಮೈಸೂರು, ಜೂ.29(ಆರ್‌ಕೆ)–ವಿಷ ಸೇವಿಸಿ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರು ತಾಲೂಕು, ಕಾಮನಕೆರೆ ಹುಂಡಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ಸಂಭವಿಸಿದೆ. ಗ್ರಾಮದ ಆರ್.ಮಹದೇವ ಅವರ ಪತ್ನಿ ಪಾರ್ವತಿ(35) ಆತ್ಮಹತ್ಯೆ ಶರಣಾದವರಾಗಿದ್ದು, ಪತಿ ಹಾಗೂ ಕುಟುಂಬದವರ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಟುಂಬದವರು ಆರೋಪಿಸಿ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಇಂದು ದೇಹ ಹಸ್ತಾಂತರಿಸಿದರು.

'ನನ್ನ ಸಾವಿಗೆ ಗಂಡ ಮತ್ತು ಅವರ ಮನೆಯವರ ಕಿರುಕುಳ ಕಾರಣವಾಗಿದ್ದು, ಮಕ್ಕಳನ್ನು ಅನಾಥಾಶ್ರಮಕ್ಕೆ ಸೇರಿಸಿಬಿಡಿ' ಎಂದು ಪಾರ್ವತಿ ಅವರು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೊಟ್ಟೆ ಖರೀದಿಯಲ್ಲಿ ಕೇರಳದ ವ್ಯಕ್ತಿಯಿಂದ ವಂಚನೆ ಆರೋಪ

ಮೈಸೂರು, ಜೂ.29–ಮೈಸೂರಿನ ಸಗಟು ಮೊಟ್ಟೆ ವ್ಯಾಪಾರಿಯಿಂದ ಮೊಟ್ಟೆ ಖರೀದಿಸಿ ಕೇರಳದ ವ್ಯಕ್ತಿಯೋರ್ವ 1.12 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಗಾಂಧಿನಗರ ನಿವಾಸಿ ಇಕ್ಬಾಲ್ ಷರೀಫ್ ವಂಚನೆಗೊಳಗಾದವರಾಗಿದ್ದು, ಇವರು ಸೌತ್ ಇಂಡಿಯನ್ ಎಗ್ ಸೆಂಟರ್ ಎಂಬ ಹೆಸರಿನಲ್ಲಿ ವ್ಯವಹಾರ ನಡೆಸುತ್ತಿದ್ದು, ಕರ್ನಾಟಕದ ಹಲವು ಜಿಲ್ಲೆಗಳು ಮತ್ತು ಕೇರಳಾಗೆ ಮೊಟ್ಟೆ ಸರಬರಾಜು ಮಾಡುತ್ತಿದ್ದಾರೆ. ಕಳೆದ ಮೇ 27ರಂದು ಕೇರಳದ ವೈನಾಡು ಜಿಲ್ಲೆಯ ಹರ್ಷದ್ ಎಂಬಾತ ಇವರ ಬಳಿಗೆ ಬಂದು 1,12,440 ರೂ. ಮೌಲ್ಯದ 30 ಸಾವಿರ ಮೊಟ್ಟೆಗಳನ್ನು ಖರೀದಿಸಿ, ಅದನ್ನು ವೈನಾಡಿಗೆ ಡೆಲಿವರಿ ಕೊಟ್ಟರೆ, ಅಲ್ಲೇ ಹಣ ನೀಡುವುದಾಗಿ ತಿಳಿಸಿದ್ದಾನೆ. ಅದರಂತೆ ಇಕ್ಬಾಲ್ ಷರೀಫ್ ಜೂನ್ 1ರಂದು ಗೂಡ್ಸ್ ವಾಹನದಲ್ಲಿ ಮೊಟ್ಟೆ ಕಳುಹಿಸಿದ್ದರು. ಮೊಟ್ಟೆ ಪಡೆದುಕೊಂಡ ಹರ್ಷದ್, ತಾನು ಇಕ್ಬಾಲ್ ಷರೀಫ್ ಅವರ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಿರುವುದಾಗಿ ಮೊಟ್ಟೆ ತೆಗೆದುಕೊಂಡು ಹೋಗಿದ್ದ ಚಾಲಕ ಪ್ರವೀಣ್‌ಗೆ ಡೆಪಾಸಿಟ್ ಚಲನ್ ನೀಡಿದ್ದ. ಆದರೆ ಷರೀಫ್ ಖಾತೆಗೆ ಹಣ ಜಮೆ ಆಗಿರಲಿಲ್ಲ. ಈ ಸಂಬಂಧ ಅವರು ಸುಲ್ತಾನ್ ಬತೇರಿಯ ಎಸ್‌ಬಿಐಗೆ ತೆರಳಿ ವಿಚಾರಿಸಿದಾಗ ಹರ್ಷದ್ ನೀಡಿದ್ದ ಚೆಕ್‌ನಲ್ಲಿ ತಪ್ಪಾಗಿ ಬರೆದಿದ್ದರಿಂದ ಹಣ ಜಮೆ ಆಗಿಲ್ಲ ಎಂದು ತಿಳಿಸಿದ ಅಧಿಕಾರಿಗಳು, ಷರೀಫ್ ಹೆಸರಿನಲ್ಲಿ ಹರ್ಷದ್ ನೀಡಿದ್ದ ಚೆಕ್ ಅನ್ನು ಅವರಿಗೆ ಕೊಟ್ಟರು. ಆನಂತರ ವಂಚಕ ಹರ್ಷದ್, ಷರೀಫ್ ಸಂಪರ್ಕಕ್ಕೆ ಸಿಗಲಿಲ್ಲ. ಈ ಸಂಬಂಧ ನರಸಿಂಹರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಲಾರಿ ಹರಿದು ಮಹಿಳೆ ಸಾವು

ಬನ್ನೂರು, ಜೂ.29–ಲಾರಿ ಹರಿದು ಮಹಿಳೆ ಸಾವನ್ನಪ್ಪಿದ ಘಟನೆ ತಿ.ನರಸೀಪುರ ತಾಲೂಕು ಕಾಡುಕೊತ್ತನಹಳ್ಳಿ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಗೃಹಿಣಿ ಸಾವಿತ್ರಮ್ಮ(50) ಎಂಬುವರು ಜೂನ್ 26ರಂದು ಬೆಳಗ್ಗೆ 11 ಗಂಟೆಗೆ ರಾಗಿ ತೆನೆ ಹೊತ್ತುಕೊಂಡು ತೆರಳುತ್ತಿದ್ದಾಗ ವೇಗವಾಗಿ ಬಂದ ಲಾರಿ(ಕೆಎ 02 ಎಹೆಚ್ 9021) ಅವರಿಗೆ ಡಿಕ್ಕಿ ಹೊಡೆದಿದೆ. ಕೆಳಗೆ ಬಿದ್ದ ಅವರ ತಲೆಯ ಮೇಲೆ ಲಾರಿಯ ಚಕ್ರ ಹರಿದು ಸ್ಥಳದಲ್ಲೇ ಗೃಹಿಣಿ ಸಾವನ್ನಪ್ಪಿದ್ದಾರೆ. ಅಪಘಾತದ ನಂತರ ಚಾಲಕ ಲಾರಿಯನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದು, ಈ ಸಂಬಂಧ ಮೃತ ಗೃಹಿಣಿಯ ಪತಿ ಪುಟ್ಟಬಸವೇಗೌಡ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಬನ್ನೂರು ಠಾಣೆ ಪೊಲೀಸರು ಲಾರಿ ವಶಪಡಿಸಿಕೊಂಡು ಚಾಲಕನಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ತೋಟಗಾರಿಕೆ ಇಲಾಖೆಯಲ್ಲಿ ಕೆಲಸದ ಆಮಿಷ ತೋರಿ ತಾಳಿ ಕದ್ದ ವಂಚಕ

ಮೈಸೂರು, ಜೂ.29–ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಗೃಹಿಣಿಯೋರ್ವರ ತಾಳಿ ಕಸಿದ ಬಗ್ಗೆ ವರದಿಯಾಗಿದೆ.

ಮೈಸೂರು ತಾಲೂಕು ಉದ್ಬೂರು ಗ್ರಾಮದ ತಾಯಮ್ಮ ತಾಳಿ ಕಳೆದುಕೊಂಡವರಾಗಿದ್ದು, ಇವರ ಅಕ್ಕನ ಮಗಳು ಗೀತಾ ಎಂಬಾಕೆಗೆ ಅಪರಿಚಿತ ವ್ಯಕ್ತಿಯೋರ್ವ ಪರಿಚಯವಾಗಿ ತೋಟಗಾರಿಕಾ ಇಲಾಖೆಯಲ್ಲಿ ಕೆಲಸ ಕೊಡಿಸುತ್ತೇನೆ. ತಿಂಗಳಿಗೆ 15 ಸಾವಿರ ರೂ. ಸಂಬಳ ಸಿಗುತ್ತದೆ ಎಂದು ಹೇಳಿದ್ದಾನೆ. ಆಗ ಆಕೆ ನನಗೆ ಕೆಲಸವಿದೆ. ನಮ್ಮ ಸಂಬಂಧಿಕರಿಗೆ ಕೆಲಸ ಕೊಡಿಸಿ ಎಂದು ಹೇಳಿದ್ದಾರೆ. ಗೀತಾ ನೀಡಿದ ಮಾಹಿತಿ ಮೇರೆಗೆ ತಾಯಮ್ಮ ಜೂನ್ 25ರಂದು ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ನಗರ ಬಸ್ ನಿಲ್ದಾಣದ ಶೌಚಾಲಯದ ಬಳಿ ಕಾಯುತ್ತಿದ್ದಾಗ ಅಲ್ಲಿಗೆ ಬಂದ ಅಪರಿಚಿತ ವ್ಯಕ್ತಿ ಅವರನ್ನು ಗಾಂಧಿ ವೃತ್ತದ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಬಳಿಗೆ ಕರೆದೊಯ್ದು, ತೋಟಗಾರಿಕಾ ಇಲಾಖೆ ಕೆಲಸಕ್ಕೆ ಅರ್ಜಿ ಹಾಕಲು ಇಂದೇ ಕೊನೆಯ ದಿನವಾಗಿದ್ದು, ಬ್ಯಾಂಕ್ ಅಕೌಂಟ್‌ಗೆ 3 ಸಾವಿರ ರೂ. ಕಟ್ಟಬೇಕಾಗಿದೆ ಎಂದು ತಿಳಿಸಿ ಅವರ ಕೊರಳಿನಲ್ಲಿದ್ದ ತಾಳಿಯನ್ನು ಬಿಚ್ಚಿಸಿಕೊಂಡು ಹೋದವನು ಮತ್ತೆ ವಾಪಸ್ಸಾಗಿಲ್ಲ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದಯ್‌ಪುರ ಟೈಲರ್ ಕನ್ಹಯ್ಯಲಾಲ್ ಹತ್ಯೆ ಪ್ರಕರಣ

ಬಿಗಿಭದ್ರತೆ ನಡುವೆ ಅಂತ್ಯಕ್ರಿಯೆ: ಸಾವಿರಾರು ಜನರು ಭಾಗಿ



ಕುಟುಂಬಸ್ಥರ ಆಕ್ರಂಧನ

ಯುಎಪಿಎ ಅಡಿಯಲ್ಲಿ ಪ್ರಕರಣ ದಾಖಲಿಸಿದ ಎನ್‌ಐಎ

ನವದೆಹಲಿ, ಜೂ.29– ಉದಯ್ ಪುರದಲ್ಲಿ ಟೈಲರ್ ಕನ್ಹಯ್ಯ ಲಾಲ್ ಭೀಕರ ಹತ್ಯೆ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಯುಎಪಿಎ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದು, ದೇಶದ ಜನರಲ್ಲಿ ಭಯ ಉಂಟುಮಾಡುವುದು ಈ ಹತ್ಯೆಯ ಉದ್ದೇಶವಾಗಿತ್ತು ಎಂದು ಹೇಳಿದೆ.

ಸಂಸ್ಥೆಯ ವಕ್ತಾರರು ಮಾತನಾಡಿ, ತನಿಖಾ ತಂಡ ಉದಯ್‌ಪುರಕ್ಕೆ ಈಗಾಗಲೇ ತೆರಳಿದ್ದು ತ್ವರಿತ ತನಿಖೆಗೆ ಕ್ರಮ ಕೈಗೊಳ್ಳಲಾಗಿದೆ. ಹಂತಕರು ಸಾಮಾಜಿಕ ಜಾಲತಾಣದಲ್ಲಿ ಹತ್ಯೆಗೆ ತಾವೇ ಹೊಣೆ ಹೊತ್ತಿದ್ದು, ಜನರಿಗೆ ಭಯ ಮೂಡಿಸಲು ಯತ್ನಿಸಿದ್ದಾರೆ ಎಂದು ಹೇಳಿದ್ದಾರೆ. ಯುಎಪಿಎ ತಡೆ ಕಾಯ್ದೆಯ ಹಲವು ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪ್ರಾರಂಭದಲ್ಲಿ ಪ್ರಕರಣವನ್ನು ಧನ್ಮಂಡಿ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿತ್ತು. ಕನ್ಹಯ್ಯ ಲಾಲ್ ಭೀಕರ ಹತ್ಯೆಗೆ ಯೋಜನೆ ರೂಪಿಸಿದ ಆರೋಪದಡಿ ಐಪಿಸಿ ಸೆಕ್ಷನ್ 452, 302, 152 (ಎ) 153 (ಬಿ), 295 (ಂ) 34ರ ಅಡಿಯಲ್ಲಿ ಹಾಗೂ ಯುಎಪಿಎಯ ಸೆಕ್ಷನ್ 16,18, 20ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಉದಯಪುರ(ರಾಜಸ್ಥಾನ್), ಜೂ.29– ಇಬ್ಬರು ದುಷ್ಕರ್ಮಿಗಳಿಂದ ಬರ್ಬರವಾಗಿ ಹತ್ಯೆಯಾದ ಟೈಲರ್ ಕನ್ಹಯ್ಯ ಲಾಲ್ ಅವರ ಅಂತ್ಯಕ್ರಿಯೆ ಬುಧವಾರ ಉದಯಪುರದ ಅಶೋಕ ನಗರದ ಸ್ಮಶಾನದಲ್ಲಿ ಭಾರಿ ಬಿಗಿಭದ್ರತೆಯಲ್ಲಿ ನಡೆಯಿತು.



ಕನ್ಹಯ್ಯ ಲಾಲ್

ಅಂತ್ಯಕ್ರಿಯೆಗೂ ಮೊದಲು ನಗರದಲ್ಲಿ ನಡೆದ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆ ಯಲ್ಲಿ ಜನಸ್ತೋಮವೇ ಸೇರಿತ್ತು. ಮಾರ್ಗದುದ್ದಕ್ಕೂ ಕಾರು ಮತ್ತು ಬೈಕ್‌ಗಳಲ್ಲಿ ಬಂದ ಜನರು ಮೆರವಣಿಗೆ ಯಲ್ಲಿ ಕೂಡಿಕೊಂಡರು. ಕೆಲವು ಉದ್ರಿಕ್ತ ಜನರು, ಅಶೋಕ ನಗರದ ಸ್ಮಶಾನದ ಸಮೀಪವೇ ಇರುವ ಮುಸ್ಲಿಮರ ಸ್ಮಶಾನದತ್ತ ಕಲ್ಲು ತೂರಿ, ಪ್ರವೇಶದ್ವಾರದ ಗೇಟ್ ಮುರಿಯಲು ಯತ್ನಿಸಿದ ಘಟನೆ ನಡೆಯಿತು.

ಇದಕ್ಕೂ ಮುನ್ನ ಮರಣೋತ್ತರ ಪರೀಕ್ಷೆಯ ನಂತರ ಲಾಲ್ ಅವರ ಶವವನ್ನು ಕುಟುಂಬದವರಿಗೆ ಒಪ್ಪಿಸಲಾಯಿತು. ನಗರದ ಸೆಕ್ಟರ್ 14ರಲ್ಲಿರುವ ಲಾಲ್ ಅವರ ಮನೆ ಬಳಿ ಪಾರ್ಥಿವ ಶರೀರವನ್ನು ಕೆಲ ಕಾಲ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಲಾಲ್ ಮನೆ ಬಳಿ ಭಾರಿ ಸಂಖ್ಯೆಯಲ್ಲಿ ಸೇರಿದ ಜನರು ಕೈಯಲ್ಲಿ ಕೇಸರಿ ಬಾವುಟಗಳನ್ನು ಹಿಡಿದು **'ಭಾರತ್ ಮಾತಾಕಿ ಜೈ', 'ಕನ್ಹಯ್ಯ ಲಾಲ್ ಅಮರ್ ರಹೇ'** ಮತ್ತು **'ಕನ್ಹಯ್ಯ ಹಮ್ ಶರ್ಮಿಂದಾ ಹೈ ತೇರೆ ಕಾತಿಲ್ ಜಿಂದಾ ಹೈ'** (ಕನ್ಹಯ್ಯ ನಮಗೆ ನಾಚಿಕೆಯಾಗುತ್ತಿದೆ, ನಿನ್ನ ಹಂತಕರು ಬದುಕಿದ್ದಾರೆ) ಎಂಬ ಘೋಷಣೆಗಳನ್ನು ಕೂಗಿದರು. ಚಿತಾಗಾರದ ಆವರಣದಲ್ಲಿ ಜನರು 'ಮೋದಿ ಮೋದಿ' ಎಂಬ ಘೋಷಣೆಗಳನ್ನು ಕೂಗಿದರು.

ಕನ್ಹಯ್ಯ ಲಾಲ್ ಅವರ ಹತ್ಯೆಗೆ ತೀವ್ರ ದುಃಖ ಮತ್ತು ಆಕ್ರೋಶ ವ್ಯಕ್ತಪಡಿಸಿದ ಸ್ಥಳೀಯರು ಮತ್ತು ಸಂಬಂಧಿಕರು, ಹಂತಕರನ್ನು ಗಲ್ಲಿಗೇರಿಸಬೇಕು ಎಂದು ಒತ್ತಾಯಿಸಿದರು. ಜೀವ ಬೆದರಿಕೆ ಇದ್ದಿದ್ದರಿಂದ ಪತಿ ಭಯಭೀತರಾಗಿದ್ದರು. ಕಳೆದ ಆರು ದಿನಗಳಿಂದ ಅಂಗಡಿ ಬಾಗಿಲು ಕೂಡ ತೆರೆದಿರಲಿಲ್ಲ. ಬಾಗಿಲು ತೆರೆದ ತಕ್ಷಣವೇ ಅವರನ್ನು ದುಷ್ಕರ್ಮಿಗಳು ಕೊಂದಿದ್ದಾರೆ ಎಂದು ಕನ್ಹಯ್ಯ ಪತ್ನಿ ಜಸೋದಾ ಅವರು ವರದಿಗಾರರಿಗೆ ತಿಳಿಸಿದರು.

ಎಎಸ್‌ಐ ಅಮಾನತು: ಘಟನೆ ಸಂಬಂಧ ನಿರ್ಲಕ್ಷ್ಯ ತೋರಿದ ಆಪಾದನೆ ಮೇರೆಗೆ ಉದಯಪುರದ ಧನ್ ಮಂಡಿ ಪೊಲೀಸ್ ಠಾಣೆಯ ಎಎಸ್‌ಐ ಭನ್ವಾರ್ ಲಾಲ್ ಅವರನ್ನು ಬುಧವಾರ ಅಮಾನತುಗೊಳಿಸಿ ಐಜಿಪಿ ಹಿಂಗ್ಲಾಜ್ ದನ್ ಆದೇಶ ಹೊರಡಿಸಿದ್ದಾರೆ.

ನಾಯಕರ ಖಂಡನೆ: ಟೈಲರ್ ಹತ್ಯೆಯನ್ನು ಪ್ರಮುಖ ಮುಸ್ಲಿಂ ಸಂಘಟನೆ ಜಮಿಯತ್ ಉಲೆಮಾ ಎ ಹಿಂದ್ ತೀವ್ರವಾಗಿ ಖಂಡಿಸಿದೆ. ಪ್ರವಾದಿಯ ಅವಮಾನದ ನೆಪದಲ್ಲಿ ಇಂತಹ ಕ್ರೂರ ಹತ್ಯೆ ನಡೆಸಿರುವುದು ಯಾವುದೇ ರೀತಿಯಲ್ಲೂ ಸಮರ್ಥನೀಯವಲ್ಲ. ಇದನ್ನು ಇಸ್ಲಾಂ ಧರ್ಮ ಕೂಡ ಒಪ್ಪುವುದಿಲ್ಲ ಎಂದು ಸಂಘಟನೆ ಪ್ರಧಾನ ಕಾರ್ಯದರ್ಶಿ ಹಕೀಮುದ್ದಿನ್ ಖಾಸ್ಮಿ ಹೇಳಿದ್ದಾರೆ. ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿ ಎಲ್‌ಬಿ) ಕೂಡ ಘಟನೆಯನ್ನು ತೀವ್ರವಾಗಿ ಖಂಡಿಸಿದೆ. ಈ ಕೃತ್ಯ ಇಸ್ಲಾಮ್‌ಗೆ ವಿರುದ್ಧವಾದುದು. ಹೇಡಿತನದ ಕೃತ್ಯ ಎಂದು ದೆಹಲಿ ಜಾಮಾ ಮಸೀದಿ ಶಾಹಿ ಇಮಾವಮ್ ಸೈಯದ್ ಅಹ್ಮದ್ ಬುಖಾರಿ ಟೀಕಿಸಿದ್ದಾರೆ.

ಕಾಂಗ್ರೆಸ್ ಆಡಳಿತದಲ್ಲಿ ರಾಜಸ್ಥಾನವು ತಾಲಿಬಾನ್ ರಾಜ್ಯವಾಗುವ ಹಾದಿಯಲ್ಲಿದೆ. ಕಾಂಗ್ರೆಸ್‌ನ ಮುಸ್ಲಿಂ ಓಲೈಕೆ ನೀತಿಯಿಂದ ಜಿಹಾದಿಗಳಿಗೆ ಧೈರ್ಯ ಬಂದಿದೆ. ಹಾಗಾಗಿ ಹಿಂದೂಗಳನ್ನು ಬಹಿರಂಗವಾಗಿ ಹತ್ಯೆ ಮಾಡುತ್ತಿದ್ದಾರೆ. ಪ್ರಧಾನ ಮಂತ್ರಿಗೂ ಜೀವ ಬೆದರಿಕೆ ಹಾಕುತ್ತಿದ್ದಾರೆ ಎಂದು ಬಿಜೆಪಿ ಸಂಸದ ರಾಜ್ಯವರ್ಧನ್ ರಾಥೋಡ್ ಕಿಡಿಕಾರಿದ್ದಾರೆ. ಹಂತಕರು ಹೀನ ಕೃತ್ಯ ಎಸಗಿ, ಕ್ಯಾಮೆರಾ ಮುಂದೆ ಕತ್ತಿ ಝಳಪಿಸಿ ಪ್ರಧಾನಿಗೂ ಜೀವ ಬೆದರಿಕೆ ಹಾಕುವ ಧೈರ್ಯ ತೋರಿದ್ದಾರೆ ಎಂದು ವಿಶ್ವ ಹಿಂದೂ ಪರಿಷತ್ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ವಿಡಿಯೋ ಸಂದೇಶದಲ್ಲಿ ತಿಳಿಸಿದ್ದಾರೆ.

ಕತ್ತು ಸೀಳಿ ಹತ್ಯೆ ಮಾಡಿರುವ ಕೃತ್ಯವನ್ನು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಎಐಎಂಐಎಂ ಅಧ್ಯಕ್ಷ ಅಸಾದುದ್ದಿನ್ ಓವೈಸಿ ಸೇರಿ ಹಲವು ನಾಯಕರು ತೀವ್ರವಾಗಿ ಖಂಡಿಸಿದ್ದಾರೆ.

ಹಂತಕರನ್ನು ಗಲ್ಲಿಗೇರಿಸಿ ಇಲ್ಲದಿದ್ದರೆ ಇಂದು ನನ್ನ ಗಂಡ, ನಾಳೆ ಮತ್ತೊಬ್ಬರು: ಕನ್ನಯ್ಯಲಾಲ್ ಪತ್ನಿ ರೋಧನ!



ಉದಯಪುರ, ಜೂ.29– ರಾಜಸ್ಥಾನದ ಉದಯಪುರದಲ್ಲಿ ಕನ್ಹಯ್ಯಾಲಾಲ್ ಹತ್ಯೆಗೆ ದೇಶಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. ಇಂದು ಮಧ್ಯಾಹ್ನ ಉದಯಪುರದಲ್ಲಿ ಕನ್ಹಯ್ಯಾಲಾಲ್ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು. ನಗರದಲ್ಲಿ ಕರ್ಫ್ಯೂ ವಿಧಿಸಿದ ಬಳಿಕವೂ ಅಂತಿಮ ಯಾತ್ರೆಗೆ ಅಪಾರ ಜನಸ್ತೋಮ ನೆರೆದಿತ್ತು. ಟೇಲರ್ ಕನ್ಹಯ್ಯಾ ಲಾಲ್ ಸಾಹು ಅವರ ಅಂತಿಮ ಸಂಸ್ಕಾರದ ವೇಳೆ ಭಾರೀ ಪೊಲೀಸ್ ಭದ್ರತೆಯನ್ನು ಏರ್ಪಡಿಸಲಾಗಿತ್ತು. ಕನ್ಹಯ್ಯಾಲಾಲ್ ಅವರ ಮೃತ ದೇಹದ ಅಂತಿಮಯಾತ್ರೆ ಹೊರಟಾಗ ಅವರ ಪತ್ನಿ ಮತ್ತು ಕುಟುಂಬದವರು ದುಃಖ ಇಮ್ಮಡಿಗೊಂಡಿತ್ತು. ಕನ್ಹಯ್ಯಾಲಾಲ್ ಸಾಹು ಅವರ ಪತ್ನಿ, 'ಆರೋಪಿಯನ್ನು ಗಲ್ಲಿಗೇರಿಸಿ, ಇಂದು ನನ್ನ ಗಂಡನನ್ನು ಕೊಂದಿದ್ದಾರೆ, ನಾಳೆ ಇತರರನ್ನು ಕೊಲ್ಲುತ್ತಾರೆ' ಎಂದು ಆಕ್ರೋಶ ಹೊರ ಹಾಕಿದರು.

ಕನ್ಹಯ್ಯಾಲಾಲ್ ಅವರ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಆಘಾತಕಾರಿ ಸಂಗತಿಗಳು ಬೆಳಕಿಗೆ ಬಂದಿವೆ. ಮರಣೋತ್ತರ ಪರೀಕ್ಷೆಯ ವರದಿಯ ಪ್ರಕಾರ ಆರೋಪಿಯು 26 ಬಾರಿ ಹರಿತವಾದ ಆಯುಧಗಳಿಂದ ಕನ್ಹಯ್ಯಾ ಮೇಲೆ ಹಲ್ಲೆ ಮಾಡಿದ್ದಾರೆ. ಆತನ ಮೈಮೇಲೆ 13 ಗಾಯಗಳಾಗಿವೆ. ಇವುಗಳಲ್ಲಿ ಹೆಚ್ಚಿನವು ಕುತ್ತಿಗೆಯ ಸುತ್ತ ಇದ್ದವು. ಇದೇ ಸಮಯದಲ್ಲಿ, ಆರೋಪಿಗಳು ದೇಹದಿಂದ ಕುತ್ತಿಗೆಯನ್ನು ಬೇರ್ಪಡಿಸಲು ಪ್ರಯತ್ನಿಸಿದ್ದರು ಎಂದು ಮರಣೋತ್ತರ ಪರೀಕ್ಷೆಯ ರಿಪೋರ್ಟ್‌ನಲ್ಲಿ ತಿಳಿಸಲಾಗಿದೆ.

ಶಾಲೆಗಳ ಮಾನ್ಯತೆ ನವೀಕರಣಕ್ಕೆ ವಿನಾಯ್ತಿ

ಮೈಸೂರು, ಜೂ.29(ಎಸ್‌ಪಿಎನ್)– ರಾಜ್ಯದ ಅನುದಾನಿತ, ಅನುದಾನ ರಹಿತ ಶಾಲೆಗಳ 2022–23ನೇ ಸಾಲಿನ ಮಾನ್ಯತೆ ನವೀಕರಣಕ್ಕೆ ವಿನಾಯಿತಿ ನೀಡಿ ರಾಜ್ಯ ಸರ್ಕಾರ ಆದೇಶಿಸಿದೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಉಲ್ಲೇಖದಲ್ಲಿನ ಟಿಪ್ಪಣಿ ಮೇರೆಗೆ ರಾಜ್ಯದಲ್ಲಿ ಖಾಸಗಿ ಅನುದಾನಿತ, ಅನುದಾನ ರಹಿತ ಶಾಲೆಗಳ 2022–23ನೇ ಸಾಲಿನ ಪ್ರಥಮ ಮಾನ್ಯತೆ ನೀಡಲು ಶಾಲಾ ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆ ಅಳವಡಿಸುವ ಪ್ರಮಾಣ ಪತ್ರ ಸಲ್ಲಿಸುವ ಷರತ್ತಿನೊಂದಿಗೆ ಮುಚ್ಚಳಿಕೆ ಬರೆಸಿಕೊಂಡು ಒಂದು ವರ್ಷದ ಅವಧಿಗೆ ನೀಡಲು ಬೆಂಗಳೂರು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಸೂಚನೆ ನೀಡಿದ್ದಾರೆ.

ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಭಕ್ತಾದಿಗಳಿಗೆ ವಿತರಿಸಲು

35 ಸಾವಿರ ಹಾರ್ಲಿಕ್ಸ್ ಮೈಸೂರು ಪಾಕ್ ಸಿದ್ಧ

▸ ಚಾಮುಂಡಿ ಬೆಟ್ಟದಲ್ಲಿ ಭಕ್ತಾದಿಗಳಿಗೆ ಆಷಾಢ ಶುಕ್ರವಾರ ವಿತರಣೆ ▸ 30 ಬಾಣಸಿಗರಿಂದ ಸಿಹಿ ತಯಾರಿಕೆ



ಮೈಸೂರು, ಜೂ.29(ಜಿಎ)– ಈ ಬಾರಿಯ ಆಷಾಢ ಶುಕ್ರವಾರದಂದು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವ ಭಕ್ತಾದಿಗಳಿಗೆ ವಿತರಿಸಲು ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ 'ಹಾರ್ಲಿಕ್ಸ್ ಮೈಸೂರು ಪಾಕ್' ತಯಾರಾಗಿದೆ.

ಮೈಸೂರಿನ ಜೆಪಿ ನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ಮೊದಲನೇ ಆಷಾಢ ಶುಕ್ರವಾರಕ್ಕಾಗಿ 35 ಸಾವಿರ ಹಾರ್ಲಿಕ್ಸ್ ಮೈಸೂರು ಪಾಕ್ ಅನ್ನು 30 ಬಾಣಸಿಗರಿಂದ ಮಾಡಲಾಗುತ್ತಿದೆ. ಕಳೆದ 17 ವರ್ಷಗಳಿಂದ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿಯು ಪ್ರತಿ ಆಷಾಢ ಮಾಸದ ಮೊದಲನೇ ಶುಕ್ರವಾರಕ್ಕೆ ವಿಭಿನ್ನ ರೀತಿಯ ಪ್ರಸಾದವನ್ನು ನೀಡುತ್ತ ಬಂದಿದ್ದು, ಈ ಬಾರೀ ವಿಶೇಷವಾಗಿ ಹಾರ್ಲಿಕ್ಸ್ ಮೈಸೂರು ಪಾಕ್ ನೀಡಲು ಮುಂದಾಗಿದೆ.

ಈ ಹಿಂದೆ ಎರಡು ವರ್ಷ ಕೊರೊನಾ ಹಿನ್ನಲೆ ಪ್ರಸಾದ ವಿತರಣೆ ಸ್ಥಗಿತವಾಗಿತ್ತು. ಪ್ರತಿ ವರ್ಷದಂತೆ ಈ ಬಾರಿ ಲಡ್ಡು ಬದಲಾಗಿ 35 ಸಾವಿರ ಹಾರ್ಲಿಕ್ಸ್ ಮೈಸೂರ್ ಪಾಕ್ ವಿತರಿಸಲೂ ಮುಂದಾಗಿದ್ದೇವೆ ಎಂದು ಸಮಿತಿ ಸದಸ್ಯ ನಾಗೇಶ್,ಅರುಣ್ ಕುಮಾರ್ ಜೈನ್ ' ಮೈಸೂರು ಮಿತ್ರ'ನಿಗೆ ತಿಳಿಸಿದರು. ಸಮಿತಿಯ 18 ನೇ ವರ್ಷದ ಆಶಾಢ ಶುಕ್ರವಾರ ಪ್ರಯುಕ್ತ ಹಾರ್ಲಿಕ್ಸ್ ಮೈಸೂರು ಪಾಕ್ ತಯಾರಿಸುವಂತೆ ಹೇಳಿದ್ದರು. ಆತಿಥ್ಯ ಕ್ಯಾಟ್ರೀನ್‌ನಿಂದ 30 ಜನ ಬಾಣಸಿಗರು 3 ದಿನಗಳಿಂದ ಸಿಹಿ ತಯಾರಿ ಮಾಡುತ್ತಿದ್ದಾರೆ. ಇದಕ್ಕಾಗಿ 600 ಕೆ.ಜಿ ಸಕ್ಕರೆ, 175 ಕೆ.ಜಿ ಕಡಲೆಹಿಟ್ಟು, 30 ಟಿನ್ ಅಡುಗೆ ಎಣ್ಣೆ, 16 ಟಿನ್ ನಂದಿನಿ ತುಪ್ಪ, 3 ಕೆಜಿ ಏಲಕ್ಕಿ, 30 ಕೆಜಿ ಹಾರ್ಲಿಕ್ಸ್ ಬಳಕೆ ಮಾಡಲಾಗಿದೆ ಎಂದು ಸಮಿತಿ ಅವರು ತಿಳಿಸಿದರು.

ನಾಪತ್ತೆಯಾಗಿದ್ದ ತಾಯಿ–ಮಗಳು ಶವವಾಗಿ ಪತ್ತೆ: ಕೊಲೆ ಪ್ರಕರಣ ದಾಖಲು

ಇಬ್ಬರು ಆರೋಪಿಗಳಿಗೆ ಶೋಧ

ನಂಜನಗೂಡು, ಜೂ.29–ತಾಲೂಕಿನ ಬಿಳುಗುಲಿ ಗ್ರಾಮದಲ್ಲಿ ನಾಪತ್ತೆಯಾಗಿದ್ದ ತಾಯಿ–ಮಗಳು ಶವವಾಗಿ ಪತ್ತೆಯಾದ ಪ್ರಕರಣಕ್ಕೆ ತಿರುವು ದೊರೆತಿದ್ದು, ಅದೇ ಗ್ರಾಮದ ಇಬ್ಬರ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ.

ವಿವರ: ಬಿಳುಗುಲಿ ಗ್ರಾಮದ ಪುಟ್ಟರಂಗಮ್ಮ(50) ಮತ್ತು ಅವರ ಮಗಳು ಮಣಿ(31) ಜೂನ್ 15ರಂದು ಬೆಳಗ್ಗೆ 8.30ರ ಸುಮಾರಿನಲ್ಲಿ ಗದ್ದೆಗೆ ಹೋಗುವುದಾಗಿ ತಿಳಿಸಿ ಹೋದವರು ನಾಪತ್ತೆಯಾಗಿದ್ದರು. ಅವರ ಚಪ್ಪಲಿಗಳು ಗದ್ದೆ ಬಳಿ ದೊರೆತಿದ್ದು, ತಾಯಿ–ಮಗಳು ಚಪ್ಪಲಿ ಬಿಟ್ಟು ಎಲ್ಲೋ ಹೋಗಿರಬಹುದೆಂದು ಭಾವಿಸಿದ ಪುಟ್ಟರಂಗಮ್ಮ ಪತಿ ರಂಗಶೆಟ್ಟಿ ಬಿಳಿಗೆರೆ ಠಾಣೆಗೆ ಮೌಖಿಕವಾಗಿ ತಿಳಿಸಿದ್ದಲ್ಲದೇ, ನೆಂಟರಿಷ್ಟರ ಮನೆಯಲ್ಲಿ ಹುಡುಕಾಟ ನಡೆಸುತ್ತಿದ್ದರು. ಆದರೆ ಜೂನ್ 19ರಂದು ಗ್ರಾಮದ ಅಡ್ಡಹಳ್ಳದಲ್ಲಿ ತಾಯಿ ಮತ್ತು ಮಗಳ ಮೃತದೇಹಗಳು ದೊರೆತಿದ್ದವು. ಇಬ್ಬರ ಸೊಂಟವನ್ನು ಸೇರಿಸಿ ಸೀರೆಯಲ್ಲಿ ಕಟ್ಟಲಾಗಿತ್ತು. ಅಲ್ಲದೇ ಮಗಳು ಮಣಿಯ ಎರಡು ಕಾಲುಗಳನ್ನು ಸೇರಿಸಿ ಕಟ್ಟಿದ ಸ್ಥಿತಿಯಲ್ಲಿ ಮೃತದೇಹಗಳು ಪತ್ತೆಯಾಗಿದ್ದವು. ಅದೇ ವೇಳೆ ಪುಟ್ಟರಂಗಮ್ಮನ ಕತ್ತಿನಲ್ಲಿದ್ದ 50 ಗ್ರಾಂ ತೂಕದ ಚಿನ್ನದ ಸರ ಮತ್ತು ಮಣಿ ಕಿವಿಯಲ್ಲಿದ್ದ ಓಲೆ ಹಾಗೂ ಸರ ಸೇರಿದಂತೆ 30 ಗ್ರಾಂ ಚಿನ್ನಾಭರಣ ನಾಪತ್ತೆಯಾಗಿತ್ತು.

ಈ ಸಂಬಂಧ ಬಿಳಿಗೆರೆ ಠಾಣೆ ಪೊಲೀಸರು ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರು. ಈ ಮಧ್ಯೆ ಅದೇ ಗ್ರಾಮದ ಯೋಗೇಶ ಎಂಬಾತ ತಾಯಿ–ಮಗಳನ್ನು ತಾನೇ ಕೊಲೆ ಮಾಡಿ ಶವ ಮೇಲೆ ಬರಬಾರದೆಂದು ಇಬ್ಬರನ್ನು ಒಟ್ಟಿಗೇ ಕಟ್ಟಿಹಾಕಿ ಪೊದೆಗಳಿಂದ ಕೂಡಿದ್ದ ಹಳ್ಳದ ನೀರಿಗೆ ಹಾಕಿರುವುದಾಗಿ ಬಹಿರಂಗವಾಗಿಯೇ ಹೇಳಿಕೊಂಡಿದ್ದಾನೆ. ಹೀಗಾಗಿ ಚಿಕ್ಕಂಡಯ್ಯನ ಮಗ ಯೋಗೇಶ ಮತ್ತು ಕರಿಶೆಟ್ಟಿ ಮಗ ರಂಗಸ್ವಾಮಿ ಸೇರಿ ತನ್ನ ಪತ್ನಿ ಮತ್ತು ಮಗಳನ್ನು ಕೊಲೆ ಮಾಡಿದ್ದಾರೆ ಎಂದು ಜೂನ್ 26ರಂದು ರಂಗಶೆಟ್ಟಿ ನೀಡಿದ ದೂರನ್ನು ಬಿಳಿಗೆರೆ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ. ಆರೋಪಿಗಳ ಪತ್ತೆಗಾಗಿ ನಂಜನಗೂಡು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ ತಳವಾರ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ.

ವೃದ್ಧೆಯ ಸರ ಕಳವು

ಮೈಸೂರು, ಜೂ.29– ಸ್ಕೂಟರ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ವೃದ್ಧೆಯ ಚಿನ್ನದ ಸರ ಕಿತ್ತುಕೊಂಡು ಹೋದ ಘಟನೆ ಹೆಬ್ಬಾಳ್‌ನ ಅನ್ನಪೂರ್ಣೇಶ್ವರಿ ದೇವಸ್ಥಾನದ ಆರ್ಚ್ ಬಳಿ ಜೂನ್ 27ರಂದು ರಾತ್ರಿ ನಡೆದಿದೆ.

ಹೆಬ್ಬಾಳ್ ಒಂದನೇ ಹಂತದ ನಿವಾಸಿ ಪಾರ್ವತಿ(62) ಅವರು ಅಂದು ರಾತ್ರಿ 8.45ರ ವೇಳೆಯಲ್ಲಿ ಹೆಬ್ಬಾಳ್ ಒಂದನೇ ಹಂತದ ಎಸ್‌ಬಿಐ ಮುಖ್ಯ ರಸ್ತೆಯಲ್ಲಿ ತಳ್ಳುಗಾಡಿಗಳಿಂದ ತರಕಾರಿ ಖರೀದಿಸಿ, ನಂದಿನಿ ಬೂತ್‌ನಲ್ಲಿ ಹಾಲನ್ನು ತೆಗೆದುಕೊಂಡು ಅನ್ನಪೂರ್ಣೇಶ್ವರಿ ಆರ್ಚ್ ಬಳಿ ಹೋಗುತ್ತಿದ್ದಾಗ ಕಪ್ಪು ಬಣ್ಣದ ಸ್ಕೂಟರ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು, ಗೃಹಿಣಿ ಧರಿಸಿದ್ದ 50 ಗ್ರಾಂ ತೂಕದ ಸರ ಕಸಿದುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ... ಹೋಗಿ ನನ್ನ ಮುಖ ಚೆನ್ನಾಗಿ ಕಾಣುವ ಒಳ್ಳೆಯ ಕನ್ನಡಿ ತನ್ನಿ ಎಂದರೆ ಬರಿಗೈಲಿ ಬಂದಿದ್ದೀರಲ್ಲಾ?

ಪತಿ : ಎಲ್ಲಾ ಅಂಗಡಿಯಲ್ಲಿ ಹುಡುಕಿದೆ. ಎಲ್ಲದರಲ್ಲೂ ನನ್ನ ಮುಖವೇ ಕಾಣುತ್ತಿತ್ತು. ನಿನ್ನ ಮುಖ ಕಾಣೋ ಕನ್ನಡಿ ಎಷ್ಟು ಹುಡುಕಿದರೂ ಸಿಗಲೇ ಇಲ್ಲ!

ಮೈಸೂರು ಮಿತ್ರ

ಗುರುವಾರ, 30 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಿನ್ನ ಆಸೆ, ಇಚ್ಛೆಗಳನ್ನು ದಮನಗೊಳಿಸುವುದು ಪುಣ್ಯ. ನಿರಪರಾಧಿಗಳನ್ನು ಸತಾಯಿಸುವುದು ಮಹಾಪಾಪ. –ಭಗವಾನ್ ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮುಖ ನೋಡಿ ಮನಸ್ಸು ತಿಳಿದಂತೆ

ನಿಮ್ಮ ಪತ್ರಗಳು

ಪಠ್ಯಪುಸ್ತಕ ರಗಳೆ ಇನ್ನಾದರೂ ನಿಲ್ಲಲಿ

ಮಾನ್ಯರೆ.

ಬಿಜೆಪಿಯಿಂದ ಆಯ್ಕೆ ಆಗಿರುವ ಎಂ.ಎಲ್.ಸಿ ವಿಶ್ವನಾಥ್‌ರವರು ಗೌರವಾನ್ವಿತರು. ಕನ್ನಡ ಮನಸ್ಸು ಉಳ್ಳವರು. ಆದರೆ ಒಳ್ಳೆಯದಕ್ಕೂ ಬಂಡಾಯ!, ಕೆಟ್ಟದಕ್ಕೂ ಬಂಡಾಯ. ಬಂಡಾಯ ಅವರ ಸ್ಥಾಯಿಭಾವ. ವಿಶ್ವನಾಥ್‌ರವರು ಡಾ.ಎಸ್.ಎಲ್. ಭೈರಪ್ಪನವರು ಪಠ್ಯಪುಸ್ತಕ ಪರಿಷ್ಕರಣೆ ಬಗ್ಗೆ ನೀಡಿರುವ ಹೇಳಿಕೆಯಲ್ಲಿ ರಾಜಕೀಯ ವಾಸನೆ ಇದೆ ಎಂದಿದ್ದಾರೆ. ಇದಕ್ಕೆ ತೀವ್ರವಾಗಿ ನಾನು ಆಕ್ಷೇಪಿಸುತ್ತೇನೆ.

ದೇವನೂರು ಮಹದೇವರವರದ್ದು ಕೂಡ ರಾಜಕೀಯ ಹೇಳಿಕೆ, ನಡೆಗಳು ಇತ್ತೀಚೆಗೆ ಆಗುತ್ತಲೇ ಇದೆ. ಬರಗೂರು ರಾಮಚಂದ್ರಪ್ಪ ಮಾಡಿರುವ ಪರಿಷ್ಕರಣೆ ರಾಜಕೀಯ ಪ್ರೇರಿತವಾಗಿಯೇ ಇತ್ತು. ಎಲ್ಲೆಲ್ಲಿ ಭಾರತೀಯತೆ, ಹಿಂದೂ, ದೇಶಭಕ್ತಿ, ರಾಷ್ಟ್ರೀಯತೆ ಎಂಬ ಶಬ್ದಗಳು ಕಂಡು ಬರುತ್ತವೆಯೋ ಅಲ್ಲಿ ಎಲ್ಲಾ ಕತ್ತರಿ ಹಾಕಿದ್ದರು. ಬರಗೂರು ರಾಮಚಂದ್ರಪ್ಪ ಪರಿಷ್ಕರಣೆ ಮಾತ್ರ ಅಲ್ಲ, ಇತಿಹಾಸವನ್ನೇ ತಿರುಚಿ ಬಿಟ್ಟಿದ್ದಾರೆ. ಇದನ್ನು ವಿಶ್ವನಾಥ್‌ರವರು ಗ್ರಹಿಸದೇ ಅದೇ ಪಠ್ಯಗಳು ಇರಲಿ ಎನ್ನುತ್ತಿದ್ದಾರೆ. 'ಪಠ್ಯಪುಸ್ತಕ ರಗಳೆ' ಕೇವಲ ರಾಜಕೀಯ ಬೇಳೆ ಬೇಯಿಸಲು ವಿರೋಧಿಗಳ ತಂತ್ರವಷ್ಟೇ. ಇದೀಗ ಚುನಾವಣೆ ವರ್ಷವಾದುದರಿಂದ ಈ ಎಲ್ಲಾ ಕಸರತ್ತು ಒಂದು ವೇಳೆ ಬಿ.ಜೆ.ಪಿ ಸರ್ಕಾರ ಬಂದ ಆರಂಭದಲ್ಲೇ ಪರಿಷ್ಕರಣೆ ಮಾಡಿದ್ದರೆ ಯಾವುದೇ ತಕರಾರು ಇರುತ್ತಿರಲಿಲ್ಲ. ಎಲ್ಲವೂ ಚುನಾವಣೆಯ ಪ್ರಚಾರ ತಂತ್ರ ಅಷ್ಟೇ. ಇದೀಗ ಸರ್ಕಾರ ಪರಿಷ್ಕರಣೆ ತಿದ್ದುಪಡಿ ಮಾಡಿ ಆದೇಶ ನೀಡಿದೆ. ಈಗಾಗಲೇ ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಕೈ ಸೇರಿದೆ. ವಿವಾದಗಳು–ವಾದಗಳು ಎಲ್ಲವೂ ಮುಗಿದಿದೆ. ಇನ್ನಾದರೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎಲ್ಲರೂ ಪಠ್ಯಪುಸ್ತಕಗಳ ಬಗ್ಗೆ ಮೌನವಾಗಿರುವುದು ಒಳ್ಳೆಯದು.

–ಅಡ್ಡಂಡ ಸಿ.ಕಾರ್ಯಪ್ಪ, ರಂಗಾಯಣ ನಿರ್ದೇಶಕರು, ಮೈಸೂರು.

ಬಿಸಿಎಂ ಹಾಸ್ಟೆಲ್‌ಗಳಲ್ಲಿ ಮೂಲ ಸೌಕರ್ಯ ಒದಗಿಸಿ

ಮಾನ್ಯರೆ,

ಮೈಸೂರು ಜಿಲ್ಲೆಯ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು, ಹೊರ ಜಿಲ್ಲೆ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಮುಂದುವರೆಸಲು ಸರ್ಕಾರಿ ಬಿಸಿಎಂ ಹಾಸ್ಟೆಲ್‌ಗಳನ್ನು ಅವಲಂಭಿಸಿದ್ದಾರೆ. ಕೊರೊನಾ ಪ್ರಕರಣಗಳು ಇಳಿಕೆಯಾದ ನಂತರ ಹಾಸ್ಟೆಲ್‌ಗಳು ಪುನರ್ ಆರಂಭವಾಗಿ ಒಂದು ವರ್ಷ ಕಳೆದಿದೆ. ಆದರೆ ಇಂದಿನವರೆಗೆ ಒಂದು ತಿಂಗಳು ಸಹ ಯಾವುದೇ ಶುಚಿ ಕಿಟ್ ವಿತರಣೆಯಾಗಿಲ್ಲ. ಸರ್ಕಾರದ ಆದೇಶದ ಪ್ರಕಾರ ಕ್ರೀಡಾ ವಸ್ತುಗಳು (Sports Kit) ಯಾವುದೇ ಹಾಸ್ಟೆಲ್‌ಗಳಿಗೆ ವಿತರಿಸಿಲ್ಲ. ಬಿಸಿಎಂ ಹಾಸ್ಟೆಲ್ ವಿದ್ಯಾರ್ಥಿಗಳು ಸರ್ಕಾರದಿಂದ ಬರಬೇಕಾಗಿರುವ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ.

ಇದರ ಬಗ್ಗೆ ಇಲಾಖೆಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಇನ್ನಾದರೂ ಕೂಡಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಗಮನಹರಿಸಿ ಬರಬೇಕಾಗಿರುವ ಸೌಲಭ್ಯಗಳನ್ನು ಕಲ್ಪಿಸಲು ಮನವಿ.

– ವಿಜಯ್ ಕುಮಾರ್ ಟಿ.ಎಸ್, ಜಿಲ್ಲಾ ಸಂಚಾಲಕರು, ಜಿಲ್ಲಾ ಸಂಘಟನಾ ಸಮಿತಿ, ಮೈಸೂರು

ಈ ಮಾರ್ಗದಲ್ಲಿ ಬಸ್‌ಗಳು ಸಂಚರಿಸಲಿ

ಮಾನ್ಯರೆ,

ಮೈಸೂರು ನಗರದಲ್ಲಿ ಸಿಟಿ ಬಸ್ ನಿಲ್ದಾಣದಿಂದ ಕೆಲವು ಬಸ್‌ಗಳು ಕುವೆಂಪುನಗರ, ರಾಮಕೃಷ್ಣನಗರದ ಕಡೆ ಅಗ್ರಹಾರ ಮಾರ್ಗವಾಗಿ ಸಂಚರಿಸುತ್ತವೆ. ಆ ಬಸ್‌ಗಳು ಸಿದ್ದಪ್ಪ ಚೌಕದಿಂದ ಎಡಗಡೆ ತಿರುಗಿ ಸೀತಾರಂಗ ಆಸ್ಪತ್ರೆ, ನಂಜು ಮಳಿಗೆ ಮೂಲಕ ಚಾಮುಂಡಿಪುರಂ ವೃತ್ತಕ್ಕೆ ತೆರಳಿ ಅಲ್ಲಿಂದ ನೇರವಾಗಿ ಬಲ್ಲಾಳ್ ವೃತ್ತದ ಮೂಲಕ ಕುವೆಂಪುನಗರ, ರಾಮಕೃಷ್ಣನಗರ ತಲುಪಿದಲ್ಲಿ ವಿದ್ಯಾರ್ಥಿಗಳಿಗೆ, ಕಾರ್ಮಿಕರಿಗೆ, ಹಿರಿಯ ನಾಗರಿಕರಿಗೆ, ಆಸ್ಪತ್ರೆಗೆ ತೆರಳುವ ರೋಗಿಗಳಿಗೆ ಅನುಕೂಲವಾಗುತ್ತದೆ.

– ನೊಂದ ಪ್ರಯಾಣಿಕರು, ಹೊಸ ಬಂಡಿಕೇರಿ, ಮೈಸೂರು.

ಡಾ. ಪುನೀತ್‌ರಾಜ್‌ಕುಮಾರ್‌ಗೆ ಶೀಘ್ರವೇ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ ಮಾಡಲಿ

ಮಾನ್ಯರೆ,

ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಪುನೀತ್ ರಾಜ್‌ಕುಮಾರ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಿ 8 ತಿಂಗಳುಗಳಾಗಿದ್ದು, ಈವರೆಗೂ ಪ್ರಶಸ್ತಿ ಪ್ರಧಾನ ಮಾಡಿಲ್ಲ. ಆಗಾಗ ಈ ಬಗ್ಗೆ ಪುನರುಚ್ಚರಿಸುತ್ತಾ ಬಂದ ಮುಖ್ಯಮಂತ್ರಿಗಳು ಈವರೆಗೆ ಪ್ರಶಸ್ತಿ ಪ್ರದಾನ ಮಾಡದೇ ಇರುವುದು ಅಭಿಮಾನಿಗಳಾದ ನಮಗೆ ಬೇಸರ, ನಿರಾಶೆ ತರಿಸಿದೆ. ಕೆಲವು ತಿಂಗಳ ಹಿಂದೆ ರಾಜ್‌ಮೌಳಿ ನಿರ್ದೇಶನದ ಆರ್‌ಆರ್‌ಆರ್ ತೆಲುಗು ಸಿನಿಮಾದ ಪ್ರೀ ರಿಲೀಸ್ ಇವೆಂಟ್ ಚಿಕ್ಕಬಳ್ಳಾಪುರದಲ್ಲಿ ನಡೆದಾಗ ಸಿಎಂ ಬೊಮ್ಮಾಯಿಯವರು ನಟ ಶಿವರಾಜ್‌ಕುಮಾರ್ ಸಮ್ಮುಖದಲ್ಲಿ ಶೀಘ್ರದಲ್ಲಿಯೇ ಪುನೀತ್ ರಾಜ್‌ಕುಮಾರ್ ಅವರಿಗೆ ಲಕ್ಷಾಂತರ ಅಭಿಮಾನಿಗಳ ಸಮ್ಮುಖದಲ್ಲಿ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ ಮಾಡುವುದಾಗಿ ಕುಟುಂಬ ಸದಸ್ಯರೊಡನೆ ಸಮಯ, ದಿನಾಂಕ ಗೊತ್ತು ಮಾಡುವುದಾಗಿ ಹೇಳಿದರು. ಆದರೆ ಈವರೆಗೆ ಅದು ಈಡೇರಲಿಲ್ಲ.

ಇನ್ನು ಮುಂದೆ ಜಿಪಂ, ತಾಪಂ, ಬಿಬಿಎಂಪಿ ಚುನಾವಣೆ ಬಂದರೆ ನೀತಿ ಸಂಹಿತೆ ಜಾರಿಗೆ ಬರಲಿದ್ದು, ಇನ್ನೂ ಮುಂದೆ ಹೋಗುವ ಸಾಧ್ಯತೆ ಇದೆ. ಈ ಕೂಡಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಡಾ. ಪುನೀತ್ ರಾಜ್‌ಕುಮಾರ್ ಕುಟುಂಬದ ಸದಸ್ಯರಾದ ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ನಟರಾದ ಶಿವರಾಜ್‌ಕುಮಾರ್ ಸೇರಿದಂತೆ ಕುಟುಂಬ ಸದಸ್ಯರು ಹಾಗೂ ಪುನೀತ್ ಅಭಿಮಾನಿಗಳೊಡನೆ ಸಭೆ ನಡೆಸಿ ಲಕ್ಷಾಂತರ ಅಭಿಮಾನಿಗಳ ಸಮ್ಮುಖದಲ್ಲಿ ಬೆಂಗಳೂರಿನಲ್ಲಿ ಬೃಹತ್ ಕಾರ್ಯಕ್ರಮ ಆಯೋಜಿಸಿ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಲಿ ಎಂಬುದು ನಮ್ಮ ಆಕಾಂಕ್ಷೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಶೀಘ್ರ ಕ್ರಮಕ್ಕೆ ಮುಂದಾಗಲಿ ಎಂದು ಮನವಿ.

–ಜಿ. ನಾಗೇಂದ್ರ ಶರ್ಮ, ಕುವೆಂಪುನಗರ, ಮೈಸೂರು.

ಗುದ್ದು

ಮಾನ್ಯರೆ,

ಶಾಸಕ ರಾಮದಾಸರ ಬೆನ್ನಿಗೆ ಪ್ರಧಾನಿ ಗುದ್ದು!

ಹೊಟ್ಟೆಯುರಿಂಯೋ ಉರಿ 'ಸಿದ್ದು'– ಪರಿವಾರಕ್ಕೆ?

ಮರ್ಮ

ರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿ ದ್ರೌಪದಿ ಮುರ್ಮು:

ಇದರ ಹಿಂದೆ ಏನಿದ್ದೀತು ಮರ್ಮ? – ಸಿಪಿಕೆ, ಮೈಸೂರು.



ಪ್ರೊ. ಆರ್. ಇಂದಿರಾ

ಸಮಾಜ ಶಾಸ್ತ್ರಜ್ಞೆ

ramaraoindira@gmail.com

ಸಮಾಜಮುಖಿ

ವರದಕ್ಷಿಣೆ ನಿಷೇಧ ಕಾಯಿದೆಗೆ ತುಂಬಿತು 60 ವರ್ಷ: ಜೀವ ಹಿಂಡುತ್ತಿದೆ ವರದಕ್ಷಿಣೆ ಬಾಧೆ

ರಾಜಾಸ್ಥಾನದ ಗ್ರಾಮವೊಂದರಲ್ಲಿ ಇತ್ತೀಚೆಗೆ ಮೂವರು ಸಹೋದರಿಯರು ತಮ್ಮ ಕುಟುಂಬದ ಇಬ್ಬರು ಮಕ್ಕಳೊಡನೆ ಸಾಮೂಹಿಕ ಆತ್ಮಹತ್ಯೆ ಮಾಡಿಕೊಂಡಿದ್ದು ಈ ನಿರ್ಧಾರಕ್ಕೆ ಕಾರಣವಾಗಿದ್ದು ಅವರು ನಿರಂತರವಾಗಿ ಒಳಗಾಗುತ್ತಿದ್ದ ವರದಕ್ಷಿಣೆ ಕಿರುಕುಳ. ಮೂವರು ಸಹೋದರರನ್ನು ವಿವಾಹವಾಗಿದ್ದ ಈ ಸಹೋದರಿಯರ ತಂದೆ ಓರ್ವ ಬಡ ರೈತ. ವಿವಾಹದ ಸಮಯದಲ್ಲಿ ಹಾಗೂ ನಂತರದ ದಿನಗಳಲ್ಲಿ ನಿರಂತರವಾಗಿ ತನ್ನ ಅಳಿಯಂದಿರ ಬೇಡಿಕೆಗಳನ್ನು ಈಡೇರಿಸಿ ಆತ ಹೈರಾಣಗಿದ್ದ. ತಮ್ಮ ಬೇಡಿಕೆಗಳ ಪೂರೈಕೆ ಆಗದಿದ್ದಾಗ ಪತ್ನಿಯರ ಮೇಲೆ ಅವರ ದೌರ್ಜನ್ಯ ಅತೀ ಘೋರವಾಗಿತ್ತು. ನಾವಿನ್ನು ಈ ಹಿಂಸೆಯನ್ನು ತಡೆಯಲಾರೆವು, ನಮ್ಮ ಸಾವಿಗೆ ನಮ್ಮ ಪತಿಯಂದಿರೇ ಕಾರಣ ಎಂದು ಬರೆದಿಟ್ಟು ಈ ಸಹೋದರಿಯರು ಬಾವಿಗೆ ಬಿದ್ದರು. ಪೊಲೀಸಿನವರೇನೋ ಅವರ ಪತಿಯಂದಿರು, ಅವರ ಪೋಷಕರು ಮತ್ತು ಸಹೋದರಿಯನ್ನು ಬಂಧಿಸಿದರು. ದಿನವೂ ಸಾಯುವ ಬದಲು ಒಂದೇ ಬಾರಿ ಸಾಯುವುದು ಒಳಿತು ಎಂಬುದು ಈ ಸಹೋದರಿಯರು ಬಿಟ್ಟು ಹೋದ ಮರಣ ಪತ್ರದಲ್ಲಿ ಮೂಡಿ ಬಂದಂಥಾ ಭಾವನೆ. ಇದು ಆಗಬೇಕಿತ್ತೆ? ವಿದ್ಯಾವಂತರಾಗಿದ್ದ ಈ ಸಹೋದರಿಯರು ಕಾನೂನಿನ ಮೊರೆ ಹೋಗುವುದರ ಬದಲು ತಮ್ಮ ಜೀವವನ್ನು ತಾವೇ ತೆಗೆದುಕೊಂಡಿದ್ದೇಕೆ? ಹಾಗಾದರೆ 60 ವರ್ಷಗಳ ಇತಿಹಾಸವನ್ನು ಹೊಂದಿರುವ ವರದಕ್ಷಿಣೆ ನಿಷೇಧ ಕಾಯಿದೆಗೆ ಏನಾಗ್ತಾ ಇದೆ?

ಕಳೆದ ವರ್ಷವಷ್ಟೇ ರಾಷ್ಟ್ರೀಯ ಅಪರಾಧ ದಾಖಲಾತಿ ಪ್ರಾಧಿಕಾರ ವರದಕ್ಷಿಣೆ ಪ್ರೇರಿತ ದೌರ್ಜನ್ಯಗಳ ಬಗ್ಗೆ ಬಿಡುಗಡೆ ಮಾಡಿದ ಅಂಕಿ–ಅಂಶಗಳ ಪ್ರಕಾರ ಪ್ರತಿ ದಿನವೂ 21 ಮಹಿಳೆಯರು ವರದಕ್ಷಿಣೆಯನ್ನು ಸುತ್ತುವರೆದಿರುವ ಕಾರಣಗಳಿಗಾಗಿ ಸಾವನ್ನಪ್ಪುತ್ತಿದ್ದಾರೆ. ಮಹಾರಾಷ್ಟ್ರ ಒಂದೇ ರಾಜ್ಯದಲ್ಲಿ ಪ್ರತಿ ವರ್ಷವೂ 200 ವರದಕ್ಷಿಣೆ ಸಾವುಗಳು ಸಂಭವಿಸುತ್ತವೆ. ನಂಬಲರ್ಹ ಮೂಲಗಳಿಂದ ಪಡೆಯಲಾಗಿರುವ ಮಾಹಿತಿಯ ಪ್ರಕಾರ 2016–17,2017–18 ಮತ್ತು 2018–19ರಲ್ಲಿ ಅನುಕ್ರಮವಾಗಿ 248, 234 ಮತ್ತು 214 ವರದಕ್ಷಿಣೆ ಸಾವುಗಳು ಸಂಭವಿಸಿದ್ದವು. ಆದರೆ ಈ ಅಂಕಿ–ಅಂಶಗಳು ಸಂಪೂರ್ಣ ಸತ್ಯವನ್ನು ಹೊರತರುತ್ತಿಲ್ಲ. ವರದಿಯಾಗುವ ಪ್ರಕರಣಗಳ ಸಂಖ್ಯೆ ಯಾವಾಗಲೂ ಮುಚ್ಚಿದ ಪರದೆಗಳ ಹಿಂದೆ ನಡೆಯುವ ಕೊಡುವ–ತೆಗೆದುಕೊಳ್ಳುವ ವ್ಯವಹಾರಗಳಿಂದ ಮರೆಮಾಚುತ್ತದೆ. ಪುರುಷ ಪ್ರಧಾನ ಮೌಲ್ಯಾಚರಣೆಗಳಿಂದ ಆವೃತ್ತವಾಗಿರುವ ವಿವಾಹ ವ್ಯವಸ್ಥೆಯಲ್ಲಿ ಸಂಬಂಧ ಏರ್ಪಡುವಾಗಲೇ ಗಂಡಾದವನು ತಾನು ಗಂಡು ಎಂಬ ಏಕೈಕ ಕಾರಣಕ್ಕಾಗಿ ವಿವಾಹಕ್ಕೆ ಒಪ್ಪಿಗೆ ನೀಡಬೇಕಾದರೆ ಹೆಂಡತಿಯಾಗುವವಳ ಕುಟುಂಬ ತನಗೆ ವಿವಾಹ ಸಮಯದಲ್ಲಿ ನೀಡಬೇಕಾದ ಧನ–ಕನಕ–ವಸ್ತು–ವಾಹನಗಳ ಪಟ್ಟಿಯನ್ನು ಇತ್ತು, ಈ ಕುಟುಂಬದೊಡನೆ ಸಂಬಂಧ ಬೆಳೆಸುವುದೇ ಅವರಿಗೆ ಮಾಡುವ ದೊಡ್ಡ ಉಪಕಾರವೇನೋ ಎಂಬಂತೆ ನಡೆದುಕೊಳ್ಳುವುದು ಒಂದು ಬಗೆಯ ಸ್ವೀಕೃತ ನಡವಳಿಕೆಯಾಗಿ ಬಿಟ್ಟಿದೆ.

ಅನೇಕ ಹೆಣ್ಣು ಮಕ್ಕಳೂ, ಎಷ್ಟೇ ವಿದ್ಯಾವಂತರಾಗಿದ್ದರೂ ಕೂಡ ತಮ್ಮನ್ನು ವಿವಾಹವಾಗಲು ಈ ಪುರುಷ ಒಪ್ಪಿದ್ದೇ ಜೀವನ ಸಾರ್ಥಕವಾಯಿತೇನೋ ಎಂಬಂತೆ ನಡೆದುಕೊಳ್ಳುತ್ತಾ ತನ್ನ ಆತ್ಮಾಭಿಮಾನವನ್ನು ಮಾರಾಟಕ್ಕಿಟ್ಟುಕೊಂಡ ಪುರುಷನನ್ನು ತಿರಸ್ಕರಿಸುವ ಬದಲು ಒಪ್ಪಿಕೊಳ್ಳುತ್ತಾರಲ್ಲ ಇದಕ್ಕೆ ಯಾರನ್ನು ಹೊಣೆ ಮಾಡಬೇಕು? ವಿವಾಹವೇ ಜೀವನದ ಅಂತಿಮ ಗುರಿ ಎಂಬಂತೆ ಹೆಣ್ಣು ಮಕ್ಕಳನ್ನು ಬೆಳೆಸಿದ ಪೋಷಕರನ್ನೋ? ಗಂಡು ಮಕ್ಕಳಿಗೆ ಆತ್ಮಾಭಿಮಾನದ ಪಾಠವನ್ನು ಕಲಿಸುವುದನ್ನು ಬಿಟ್ಟು ಪುರುಷತ್ವವನ್ನು ಮೆರೆಸುವ ತಪ್ಪು ಪಾಠಗಳನ್ನು ಹೇಳಿಕೊಡುವ ಅವರ ತಂದೆ–ತಾಯಿಗಳನ್ನೋ?

“ವರದಕ್ಷಿಣೆ ನಿಷೇಧ ಕಾಯಿದೆ ಮೊದಲು ಜಾರಿಗೆ ಬಂದದ್ದು 1961ನೇ ಇಸವಿಯಲ್ಲಿ. ವಿವಾಹ ಸಂಬಂಧವನ್ನು ಬೆಳೆಸಲು ಭಾವಿ ವರ ತಾನು ವರಿಸಲಿರುವ ಹೆಣ್ಣು ಮಗಳ ಕುಟುಂಬದಿಂದ ನಿರೀಕ್ಷಿಸುವ ಹಣ ಅಥವಾ ಇನ್ನ್ಯಾವುದೇ ಬಗೆಯ ಚರ–ಅಸ್ತಿರ ಆಸ್ತಿಯನ್ನು ವರದಕ್ಷಿಣೆ ಎಂದು ಗುರುತಿಸಲಾಯಿತು. ಒತ್ತಾಯಪೂರ್ವಕವಾಗಿ ವರದಕ್ಷಿಣೆಯನ್ನು ತೆಗೆದುಕೊಳ್ಳುವವರಿಗೆ ನಿಗದಿತವಾಗಿದ್ದ ಶಿಕ್ಷೆಯಾದರೂ ಏನು? ಆರು ತಿಂಗಳಿಂದ ಹಿಡಿದು ಎರಡು ವರ್ಷಗಳವರೆಗೆ ಜೈಲುವಾಸ ಅಥವಾ ಹತ್ತು ಸಾವಿರ ರೂಪಾಯಿಗಳ ದಂಡ. ಈ ಕಾಯಿದೆಗೆ 1984 ಮತ್ತು 1986ರಲ್ಲಿ ಬಂದ ತಿದ್ದುಪಡಿಗಳು ಶಿಕ್ಷೆಯನ್ನು ಮತ್ತಷ್ಟು ಬಿಗಿ ಮಾಡಿದವೇನೋ ನಿಜ, ಆದರೆ ವರದಕ್ಷಿಣೆಯ ಪ್ರಮಾಣವಾಗಲೀ ವಿವಾಹದ ಗ್ರಾಹಕೀಕರಣವಾಗಲೀ ಕಡಿಮೆಯಾಗಲಿಲ್ಲ.

ವರದಕ್ಷಿಣೆ ಪ್ರೇರಿತ ಹಿಂಸೆ ಅಥವಾ ಸಾವುಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸದೆ ಕಾನೂನು ಕ್ರಮಗಳಿಂದ ಜಾರಿಕೊಂಡು ಹೋಗಲು ಆಸ್ಪದ ಮಾಡಿಕೊಡುವ ನ್ಯಾಯ ವ್ಯವಸ್ಥೆಯನ್ನೋ? ಒಂದೆಡೆ ಕಾಯಿದೆಗೆ ತಿದ್ದುಪಡಿಗಳನ್ನು ತಂದು ಅದನ್ನು ಬಿಗಿ ಮಾಡುತ್ತಾ ಮತ್ತೊಂದೆಡೆ ಅದನ್ನು ಕಠಿಣವಾಗಿ ಜಾರಿಗೊಳಿಸದೆ ಇಡೀ ಪ್ರಕರಣವನ್ನು ಅಪರಾಧಿಗಳ ಪರ ತಿರುಚಲು ಮಾರ್ಗಗಳನ್ನು ಸೃಷ್ಟಿಸುವ ಆಡಳಿತ ನಿರ್ವಹಣಾ ವ್ಯವಸ್ಥೆಯನ್ನೋ? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತ ಹೋದ ಹಾಗೆಲ್ಲ ತೀರಾ ಮುಜುಗರವನ್ನು ತರುವ ಕರಾಳ ಸತ್ಯವೊಂದು ನಮ್ಮ ಮುಂದೆ ಬಂದು ನಿಲ್ಲುತ್ತದೆ. ಅದೇನೆಂದರೆ ವರದಕ್ಷಿಣೆ ಕಾಯಿದೆಯಿಂದ ಶಿಕ್ಷೆಗಳಿಗೆ ಒಳಗಾದವರಿಗಿಂತ ತಪ್ಪಿಸಿಕೊಂಡವರ ಸಂಖ್ಯೆಯೇ ಹೆಚ್ಚು ಎಂಬುದು.

ವರದಕ್ಷಿಣೆ ನಿಷೇಧ ಕಾಯಿದೆ ಮೊದಲು ಜಾರಿಗೆ ಬಂದದ್ದು 1961ನೇ ಇಸವಿಯಲ್ಲಿ. ವಿವಾಹ ಸಂಬಂಧವನ್ನು ಬೆಳೆಸಲು ಭಾವಿ ವರ ತಾನು ವರಿಸಲಿರುವ ಹೆಣ್ಣು ಮಗಳ ಕುಟುಂಬದಿಂದ ನಿರೀಕ್ಷಿಸುವ ಹಣ ಅಥವಾ ಇನ್ನ್ಯಾವುದೇ ಬಗೆಯ ಚರ–ಅಸ್ತಿರ ಆಸ್ತಿಯನ್ನು ವರದಕ್ಷಿಣೆ ಎಂದು ಗುರುತಿಸಲಾಯಿತು. ಒತ್ತಾಯಪೂರ್ವಕವಾಗಿ ವರದಕ್ಷಿಣೆಯನ್ನು ತೆಗೆದುಕೊಳ್ಳುವವರಿಗೆ ನಿಗದಿತವಾಗಿದ್ದ ಶಿಕ್ಷೆಯಾದರೂ ಏನು? ಆರು ತಿಂಗಳಿಂದ ಹಿಡಿದು ಎರಡು ವರ್ಷಗಳವರೆಗೆ ಜೈಲುವಾಸ ಅಥವಾ ಹತ್ತು ಸಾವಿರ ರೂಪಾಯಿಗಳ ದಂಡ. ಈ ಕಾಯಿದೆಗೆ 1984 ಮತ್ತು 1986ರಲ್ಲಿ ಬಂದ ತಿದ್ದುಪಡಿಗಳು ಶಿಕ್ಷೆಯನ್ನು ಮತ್ತಷ್ಟು ಬಿಗಿ ಮಾಡಿದವೇನೋ ನಿಜ, ಆದರೆ ವರದಕ್ಷಿಣೆಯ ಪ್ರಮಾಣವಾಗಲೀ ವಿವಾಹದ ಗ್ರಾಹಕೀಕರಣವಾಗಲೀ ಕಡಿಮೆಯಾಗಲಿಲ್ಲ.

ವರದಕ್ಷಿಣೆಗೆ ಈ ದೇಶದಲ್ಲಿ ಒಂದು ದೀರ್ಘ ಇತಿಹಾಸವೇ ಇದೆ. ಸುಮಾರು ಮೂರು ಶತಮಾನಗಳ ಹಿಂದೆಯೇ ಮಾಲ್ವಾ ರಾಜ್ಯದ ಮಹಾರಾಣಿ ಅಹಲ್ಯಾಬಾಯಿ ಹೋಳ್ಕರ್ ವರದಕ್ಷಿಣೆ ನಿಷೇಧ ಕಾಯಿದೆಯನ್ನು ಜಾರಿಗೊಳಿಸಿದ್ದರಂತೆ. ಕಾಲ ಕಳೆಯುತ್ತಾ ಹೋದ ಹಾಗೆ, ಆಧುನಿಕ ಜ್ಞಾನ ಪ್ರಸರಣವಾಗುತ್ತ ಹೋದ ಹಾಗೆ ಹೃದಯ ವೈಶಾಲ್ಯತೆ ಬೆಳೆಯುತ್ತಾ ಹೋಗುತ್ತದೆ. ವಿವಾಹದ ವ್ಯಾಪಾರೀಕರಣ ಸಂಪೂರ್ಣವಾಗಿ ನಿಲ್ಲದೆ ಹೋದರೂ ಗಮನಾರ್ಹವಾಗಿ ಕಡಿಮೆಯಾಗುತ್ತದೆ ಎಂಬ ಆಶಾಭಾವನೆ ಹುಸಿಯಾಗಿ, ನೇರವಾಗಿಯೇ ವಿವಾಹ ಮಾರುಕಟ್ಟೆಯಲ್ಲಿ ವ್ಯಾಪಾರಕ್ಕಿಟ್ಟ ವಸ್ತುವಾಗಿ ಪರಿವರ್ತಿತವಾಯಿತು.

ವಿವಾಹ ಎನ್ನುವುದು ತೀವ್ರವಾಗಿ ಶ್ರೇಣೀಕೃತವಾಗಿರುವ ಭಾರತೀಯ ಸಮಾಜದಲ್ಲಿ ಎಂದೂ ಸಮಾನರ ನಡುವೆ ಏರ್ಪಡುವ ಸಂಬಂಧವಾಗಿಲ್ಲ. ಇಲ್ಲಿ ವಿವಾಹ, ಜಾತಿ–ಧರ್ಮ–ಅಂತಸ್ತು ಮುಂತಾದ ಮುಚ್ಚಿದ ಗುಂಪುಗಳ ಒಳಗೆ ಏರ್ಪಾಡಾಗುವಂಥಹ ಒಳ ಬಾಂಧವ್ಯ ವ್ಯವಸ್ಥೆಯಾಗಿದ್ದು ಗುಂಪಿನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಅದೊಂದು ಪ್ರಬಲ



ಸಾಧನವಾಗಿದೆ. ಗುಂಪು ಅಥವಾ ಕುಟುಂಬದ ಒಳಗೆಯೇ ವೈವಾಹಿಕ ಸಂಗಾತಿಗಳನ್ನು ಶೋಧಿಸುತ್ತಾ ಹೊರಟಾಗ ಸಹಜವಾಗಿಯೇ ಆಯ್ಕೆಗಳು ಸೀಮಿತವಾಗ ತೊಡಗಿ, ಅನೇಕ ಪೋಷಕರು ತಮ್ಮ ಹೆಣ್ಣು ಮಕ್ಕಳೊಡನೆ ವಿವಾಹ ಸಂಬಂಧವನ್ನು ಬೆಳೆಸಲು, ಭಾವಿ ವರ ಇಂತಹುದೇ ಜಾತಿ, ಉಪ ಜಾತಿ ಅಥವಾ ಕುಲ, ಇದೇ ಡಿಗ್ರಿಯನ್ನು ಪಡೆದಿರುವವನು ಇಂತಹುದೇ ಕೆಲಸದಲ್ಲಿ ಇರುವವನು, ವಿದೇಶದಲ್ಲೇ ಇರುವವನು ಅಥವಾ ಅಪಾರ ಖಾಸಗಿ ಆಸ್ತಿಯನ್ನು ಹೊಂದಿರುವವನು ಮುಂತಾದ ನಿರ್ಬಂಧಗಳನ್ನು ಹಾಕಿಕೊಳ್ಳುತ್ತಾ ಹೋದ ಹಾಗೆಲ್ಲ ಮದುವೆ ಗಂಡುಗಳ ಬೇಡಿಕೆಗಳೂ ಬೆಳೆಯುತ್ತಾ ಹೋದವು. ಮನುಷತ್ವ ಇರುವ ವ್ಯಕ್ತಿ ಅಥವಾ ಕುಟುಂಬದೊಡನೆ ಸಂಬಂಧ ಬೆಳೆಸುವುದಕ್ಕಿಂತಾ ಆಸ್ತಿ–ಅಂತಸ್ತುಗಳ ಪ್ರದರ್ಶನವೇ ಮುಖ್ಯವಾದಾಗ ವರದಕ್ಷಿಣೆಯಂಥ ಲಜ್ಜಾಹೀನ ಪದ್ಧತಿಗೆ ನೇರ ಕುಮ್ಮಕ್ಕು ದೊರೆಯಿತು.

ಕೇವಲ ವಿವಾಹದ ಸಮಯದಲ್ಲಿ ಹಣ ಅಥವಾ ಐಷಾರಾಮಿ ವಸ್ತುಗಳಿಗೆ ಬೇಡಿಕೆ ಇಡುತ್ತಿದ್ದ ವರ ಹಾಗೂ ಆತನ ಕುಟುಂಬ ಬರಬರುತ್ತಾ ಈ ಬೇಡಿಕೆಯನ್ನು ವಿವಾಹಾನಂತರವೂ ಮುಂದುವರೆಸಿಕೊಂಡು ಹೋಗುವುದು ಸರ್ವಸಾಮಾನ್ಯವಾದ ಪ್ರವೃತ್ತಿಯಾಯಿತು. ಅನೇಕರಿಗೆ ವಿದ್ಯೆ, ಡಿಗ್ರಿ ಅಥವಾ ಒಳ್ಳೆ ಕೆಲಸಗಳನ್ನು ಒದಗಿಸಿತೇ ಹೊರತು ಮಾನವೀಯ ಗುಣಗಳನ್ನು ಬೆಳೆಸಲಿಲ್ಲ. ನಮ್ಮ ಕಾಲಘಟ್ಟದ ಅತೀ ದೊಡ್ಡ ದುರಂತಗಳಲ್ಲಿ ಒಂದೆಂದರೆ ವರದಕ್ಷಿಣೆಯ ಮೌಲ್ಯ, ವರನಾಗುವವನು ಪಡೆದ ಶಿಕ್ಷಣದ ಮಟ್ಟ, ಗಳಿಸಿದ ಪದವಿಯ ಗುಣಮಟ್ಟ ಹಾಗೂ ಆತ ಎಲ್ಲಿ ಈ ಪದವಿಯನ್ನು ಗಳಿಸಿದ–ಇವೇ ಮುಂತಾದ ಅಂಶಗಳಿಂದ ನಿರ್ಧಾರಿತವಾಗುತ್ತ ಹೋದದ್ದು. ಯಾವ ಶಿಕ್ಷಣ ಲಿಂಗ ಸಮಾನತೆಯ ತತ್ವಕ್ಕೆ ಗೌರವ ಕೊಟ್ಟು, ಹೆಣ್ಣಿನ ಅಪಮೌಲೀಕರಣವನ್ನು ನಿಲ್ಲಿಸುತ್ತದೆ ಎಂದು ನಂಬಲಾಗಿತ್ತೋ, ಆ ಶಿಕ್ಷಣವೇ ವಿವಾಹದ ವಾಣಿಜ್ಯೀಕರಣಕ್ಕೆ ಕಾರಣವಾದದ್ದು ವಿಷಾದನೀಯ. ವರದಕ್ಷಿಣೆಯ ಬೇಡಿಕೆ ವರನಿಗೆ ಮಾತ್ರ ಸೀಮಿತವಾಗದೆ ಆತನ ಕುಟುಂಬದ ಎಲ್ಲ ಸದಸ್ಯರು, ಬಂಧುಗಳು ಮುಂತಾದವರಿಗೂ ವಿಸ್ತೃತವಾಗಿ, ಜೀವನವಿಡೀ ಒಂದರ ನಂತರ ಮತ್ತೊಂದು ಬೇಡಿಕೆಯನ್ನು ಇಡುತ್ತಾ ಹೋಗುವ ಮಟ್ಟಕ್ಕೆ ತಲುಪಿ, ಈ ಬೇಡಿಕೆಯನ್ನು ಪೂರೈಸಲು ಆಗದಿದ್ದಾಗ ದೈಹಿಕ ಹಿಂಸೆಯನ್ನು ಆ ಹೆಣ್ಣುಮಗಳಿಗೆ ನೀಡಿ ಅವಳನ್ನು ಕೊಲೆ ಮಾಡಲೂ ಹೇಸದ ಮಟ್ಟಕ್ಕೆ ತಲುಪಿ ನಾಗರಿಕ ಸಮಾಜ ತಲೆತಗ್ಗಿಸುವಂಥ ಸ್ಥಿತಿಗೆ ತಲುಪಿದೆ.

ಹಾಗಾದರೆ ವರದಕ್ಷಿಣೆಯಂಥ ಅಮಾನವೀಯ ಪದ್ಧತಿಗೆ ಕೊನೆ ಯಾವಾಗ? ಎಲ್ಲಿಯವರೆಗೂ ಗಂಡು ಮಕ್ಕಳು ತಮ್ಮ ಗೌರವ–ಘನತೆ ಇರುವುದು ತಮ್ಮ ಆತ್ಮಾಭಿಮಾನವನ್ನು ಮಾರುಕಟ್ಟೆಯಲ್ಲಿ ಒತ್ತೆ ಇಡುವುದರಿಂದ ಅಲ್ಲ, ಸರಳ–ಸುಸಂಸ್ಕೃತ ವಿವಾಹದ ಆಚರಣೆಯಲ್ಲಿ ಎಂಬ ಸತ್ಯವನ್ನು ಮನಗಾಣುವುದಿಲ್ಲವೋ, ಅಲ್ಲಿಯವರೆಗೂ ವರದಕ್ಷಿಣೆ ನಿಷೇಧ ಕಾಯಿದೆಯ ವಜ್ರ ಮಹೋತ್ಸವದ ಆಚರಣೆಯಲ್ಲ, ಶತಮಾನೋತ್ಸವದ ಸಂದರ್ಭ ತಲುಪಿದರೂ ಈ ಪಿಡುಗು ನಶಿಸುವುದಿಲ್ಲ. ●

30-06-2022ರ ಪಾಡ್ಯದಿಂದ 28-07-2022ರ ಭೀಮನ ಅಮಾವಾಸ್ಯೆವರೆಗಿನ ಆಷಾಢ ಮಾಸದ ಆಚರಣೆ. ಭಾರತೀಯ ಪುರಾಣ ಪುಣ್ಯಕಥೆ ಹಾಗೂ ಸಂಸ್ಕೃತಿಯಲ್ಲಿ ಅಮಾವಾಸ್ಯೆಗೆ ವಿಶೇಷತೆ ಇದೆ. ತನ್ನಿಮಿತ್ತ ಈ ಲೇಖನ.

ಆಷಾಢ ಅಶುಭವೇನಲ್ಲ...

ವೈಜ್ಞಾನಿಕವಾಗಿ ಹೇಳುವುದಾದರೆ ಆಷಾಢ ಮಾಸದಲ್ಲಿ ನಿರಂತರ ಮಳೆ ಮತ್ತು ರಭಸದ ಗಾಳಿಯಿಂದ ಸಂಚಾರಕ್ಕೆ ಹಾಗೂ ಜನರ ಕಾರ್ಯಗಳಿಗೆ ನಾನಾ ಅಡೆತಡೆಯಿಂದಾಗಿ ಕೆಲಸಗಳು ಕುಂಠಿತವಾಗುತ್ತವೆ. ಅಲ್ಲದೇ ಹೊಲಗದ್ದೆಗಳಲ್ಲಿನ ವಿಪರೀತ ಕೃಷಿ ಕೆಲಸಗಳಿಗೆ ಅನಾನುಕೂಲಗಳು ಉಂಟಾಗುತ್ತವೆ. ಆಷಾಢ ಮಾಸವು ಶುಭವೋ ಅಶುಭವೋ ಎಂಬ ಜಿಜ್ಞಾಸೆ ಆಸ್ತಿಕರಲ್ಲಿ ಕಾಣುವುದುಂಟು. ಆದರೆ ಆಷಾಢ ಮಾಸವು ಅಶುಭ ಎಂದು ಯಾವ ಶಾಸ್ತ್ರದಲ್ಲೂ ಉಲ್ಲೇಖವಿರುವುದಿಲ್ಲ. ಆದರೆ ಶುಭ ಕಾರ್ಯಗಳಿಗೆ ಶಾಸ್ತ್ರದಲ್ಲಿ ಮನ್ನಣೆ ಇಲ್ಲ ಎಂಬುದು ಅನಿಸಿಕೆ.

ಭಾರತೀಯ ಸಂಸ್ಕೃತಿಗೆ ತನ್ನದೇ ಆದ ಹಿರಿಮೆಯಿದೆ. ಅದರ ನೆಲವೆಲ್ಲಾ ಕ್ಷೇತ್ರವಾದಂತೆ, ಜಲವೆಲ್ಲಾ ತೀರ್ಥವೂ ಆಗಿದೆ. ತ್ಯಾಗ–ವೈರಾಗ್ಯಗಳ ತಳಹದಿಯೂ ಇದೆ. ವೈಭೋಗಕ್ಕಾಗಿ ವೈರಾಗ್ಯವನ್ನು ಬಿಟ್ಟಿಲ್ಲ. ತ್ಯಾಗ–ಭೋಗಗಳ ಹಸನಾದ ಸಮ್ಮಿಶ್ರಣವೇ ಹಬ್ಬ–ಹರಿದಿನ, ವ್ರತಾಚರಣೆಯಾಗಿದೆ. ಇದೀಗ ತಾನೆ ಜೇಷ್ಠ ಮುಗಿದು ಆಷಾಢ ಮಾಸ ಪ್ರಾರಂಭವಾಗಿದ್ದು, ಅದರೊಂದಿಗೆ ಗಾಳಿಗೆ ಅಭಿಮಾನಿ ದೇವತೆಯಾದ ವಾಯು ದೇವರ ಪೂಜೆಯೂ ಆರಂಭವಾಗಿದೆ. ಇದರ ಅರ್ಥ ಆಷಾಢ ಮಾಸದಲ್ಲಿ ವಾಯು ದೇವರನ್ನು ಸ್ವಾಗತಿಸಿ ಮಳೆ ಮತ್ತು ಗಾಳಿಯಿಂದ ಪರಿಸರವನ್ನು ಶುಭ್ರಗೊಳಿಸಲಿ ಎಂಬುದಾಗಿದೆ. ಗ್ರೀಷ್ಮ ಋತು ಆಗಮನದಿಂದ ದೃಷ್ಟಶಕ್ತಿಯನ್ನು ಓಡಿಸಿ ನೆಮ್ಮದಿಯ ಬದುಕನ್ನು ಕಾಣಬೇಕಾಗಿದೆ. ಚೈತ್ರದಿಂದ ಆರಂಭವಾಗುವ ಹನ್ನೆರಡು ಚಾಂದ್ರಮಾನ ತಿಂಗಳುಗಳ ಪೈಕಿ ಆಷಾಢ ನಾಲ್ಕನೆಯದು. ಆಷಾಢ ಇಂದ್ರ ಲೋಕದ ದೇವತೆ. ಒಮ್ಮೆ ಆಷಾಢ, ಶಿವನನ್ನು ನೋಡುವ ಬಯಕೆಯಿಂದ ನಾಗಕನ್ಯೆಯ ರೂಪವನ್ನು ತಾಳಿ ಕೈಲಾಸವನ್ನು ಪ್ರವೇಶಿಸುತ್ತಾಳೆ. ಆಗ ಶಿವನು ಧ್ಯಾನಸಕ್ತನಾಗಿರುತ್ತಾನೆ. ಶಿವನನ್ನು ಕಂಡೊಡನೆ ಆಕೆ ಪಾರ್ವತಿಯ ರೂಪವನ್ನು ಧರಿಸಿ ಶಿವನ ಪಕ್ಕದಲ್ಲಿ ಆಸೀನಳಾಗುತ್ತಾಳೆ. ಎಲ್ಲವನ್ನೂ ಬಲ್ಲ ಆ ಮಹಾದೇವ ಆಕೆಯ ಕುತಂತ್ರವನ್ನು ತಿಳಿದು ಕೋಪನಿಷ್ಠನಾಗುತ್ತಾನೆ. ಕೋಪಾಗ್ನಿ ವೇಶದಿಂದ ಶಿವನು ತ್ರಿಶೂಲದಿಂದ ಆಕೆಯನ್ನು ದೂರ ಸರಿಯೆಂದು ತಿವಿಯುತ್ತಾನೆ. ತ್ರಿಶೂಲದಿಂದ ಹೊರಟ ಜ್ವಾಲಾಗ್ನಿಯು ಆಷಾಢಳನ್ನು ಪರಿಶುದ್ಧಳನ್ನಾಗಿಸುತ್ತದೆ. ಆದರೂ ಶಿವನ ಕೋಪ ಕಡಿಮೆಯಾಗುವುದಿಲ್ಲ. ಆಗ ಆಷಾಢ ಶಿವನಿಗೆ ತಲೆಬಾಗಿ ನಾನು ನಿಮ್ಮನ್ನು ಮೆಚ್ಚಿದ್ದರಿಂದ ಹೀಗೆ ಮಾಡಬೇಕಾಯಿತು. ನನ್ನ ತಪ್ಪನ್ನು ಮನ್ನಿಸಿ ಎಂದು ಶಿವನಲ್ಲಿ ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಆದರೂ ಶಿವ ಆಕೆಯ ತಪ್ಪನ್ನು ಕ್ಷಮಿಸುವುದಿಲ್ಲ. ಬದಲಿಗೆ ಭೂಲೋಕದಲ್ಲಿ ಕಹಿ ರುಚಿಯ ಬೇವಿನ ಮರವಾಗಿ ಜನಿಸು ಎಂದು ಶಾಪವನ್ನು ಕೊಡುತ್ತಾನೆ. ಆಗ ಆಷಾಢ ಶಾಪ ವಿಮೋಚನೆಗಾಗಿ ಬೇಡಿಕೊಳ್ಳುತ್ತಾಳೆ. ಆಗ ಶಿವನು ಭೂಲೋಕದಲ್ಲಿ ಬೇವಿನ ಮರವಾಗಿ ಜನಿಸಿದರೂ ಪೂಜೆಗೆ ಅರ್ಹಳಾಗು ಎಂದು ಆಶೀರ್ವದಿಸುತ್ತಾನೆ. ಆ ಕಾರಣ ಆಷಾಢ ಮಾಸದಲ್ಲಿ ಪಾರ್ವತಿ ಸ್ವರೂಪಳಾದ ಬೇವಿನ ಮರವನ್ನು ಪೂಜಿಸುವ ವಾಡಿಕೆ ಇದೆ. ಹೀಗೆ ಭೂಮಿಯ ಮೇಲೆ ಬೇವಿನ ಮರವಾಗಿ ಜನಿಸಿದ ಆಷಾಢ ಪೂಜಾರ್ಹಳಾದಳು. ಮತ್ತೊಂದು ಸಿದ್ಧಾಂತದಂತೆ ಆಷಾಢ ಮಾಸದ ಶುದ್ಧ ಏಕಾದಶಿಯಂದು ಪರಮಾತ್ಮ ಮಹಾ ವಿಷ್ಣುವು ಕ್ಷೀರಸಾಗರದಲ್ಲಿ ಆದಿಶೇಷನ ಮೇಲೆ ಮಲಗಿ ಯೋಗ ನಿದ್ರೆಯಲ್ಲಿ ತೊಡಗಿದ ಭಗವಂತನು ಕಾರ್ತಿಕ ಶುದ್ಧ ದ್ವಾದಶಿಯಂದು ಜಾಗೃತನೆಂದು ಜಗತ್ತಿಗೆ ತೋರುವನು ಎನ್ನಲಾಗಿದೆ. ಆದ್ದರಿಂದ ಭಗವಂತ ಮಲಗಿದರೂ ನಾವು ಎಚ್ಚೆತ್ತು




ಅವನನ್ನು ಮರೆಯದೆ ಸ್ಮರಿಸುತ್ತಾ ಸಾಧನೆಯನ್ನು ಮಾಡಿ ಸಾರ್ಥಕ್ಯವನ್ನು ಹೊಂದಬೇಕು. ಆಷಾಢ ಮಾಸದಲ್ಲಿ ವ್ರತಾಚರಣೆಗೆ, ದೇವರ ಸೇವೆಯನ್ನು ಆಚರಿಸುವುದರ ಮೂಲಕ ಆಷಾಢವನ್ನು ಭಕ್ತಿಗೆ ಹಾಗೂ ಸಮರ್ಪಣೆಗೆ ಮೀಸಲಿಡಲಾಗಿದೆ. ಹಾಗೂ ಆಷಾಢ ಮಾಸದಲ್ಲಿ ದಾನಕ್ಕೆ ಪ್ರಾಶಸ್ತ್ಯವಿದೆ. ಯಾವ ವಸ್ತುವನ್ನೇ ಆಗಲಿ ದಾನ ಮಾಡದೆ ಪುಣ್ಯ ಸಂಪಾದನೆಯಾಗದು.

ವೈಜ್ಞಾನಿಕವಾಗಿ ಹೇಳುವುದಾದರೆ ಆಷಾಢ ಮಾಸದಲ್ಲಿ ನಿರಂತರ ಮಳೆ ಮತ್ತು ರಭಸದ ಗಾಳಿಯಿಂದ ಸಂಚಾರಕ್ಕೆ ಹಾಗೂ ಜನರ ಕಾರ್ಯಗಳಿಗೆ ನಾನಾ ಅಡೆತಡೆಯಿಂದಾಗಿ ಕೆಲಸಗಳು ಕುಂಠಿತವಾಗುತ್ತವೆ. ಅಲ್ಲದೇ ಹೊಲಗದ್ದೆಗಳಲ್ಲಿನ ವಿಪರೀತ ಕೃಷಿ ಕೆಲಸಗಳಿಗೆ ಅನಾನುಕೂಲಗಳು ಉಂಟಾಗುತ್ತವೆ. ಆಷಾಢ ಮಾಸವು ಶುಭವೋ ಅಶುಭವೋ ಎಂಬ ಜಿಜ್ಞಾಸೆ ಆಸ್ತಿಕರಲ್ಲಿ ಕಾಣುವುದುಂಟು. ಆದರೆ ಆಷಾಢ ಮಾಸವು ಅಶುಭ ಎಂದು ಯಾವ ಶಾಸ್ತ್ರದಲ್ಲೂ ಉಲ್ಲೇಖವಿರುವುದಿಲ್ಲ. ಆದರೆ ಶುಭ ಕಾರ್ಯಗಳಿಗೆ ಶಾಸ್ತ್ರದಲ್ಲಿ ಮನ್ನಣೆ ಇಲ್ಲ ಎಂಬುದು ಅನಿಸಿಕೆ.

ಆಷಾಢ ಮಾಸದಲ್ಲಿ ನೂತನ ದಂಪತಿಗಳು ಬೇರೆ ಬೇರೆಯಾಗಿರುತ್ತಾರೆ. ಇದರ ಹಿಂದಿನ ಸಿದ್ಧಾಂತವೇ ಬೇರೆ ಇದೆ. ಈ ಅವಧಿಯಲ್ಲಿ ಹೆಣ್ಣು ಗರ್ಭ ಧರಿಸಿದರೆ ಆಕೆ ಚೈತ್ರ ಮಾಸದಲ್ಲಿ ಅಂದರೆ ಬೇಸಿಗೆ ಕಾಲದಲ್ಲಿ ಮಗುವಿಗೆ ಜನ್ಮ ನೀಡುತ್ತಾರೆ. ಬೇಸಿಗೆ ಅವಧಿಯಲ್ಲಿ ಆಕೆಗೆ ಹೆಚ್ಚು ತೊಂದರೆಯಾಗಬಹುದು ಎಂದು ಭಾವಿಸಿ ಈ ಆಚರಣೆಯನ್ನು ತರಲಾಯಿತೆಂದು ವೈಜ್ಞಾನಿಕ ವಾದವಿದೆ. ಬಲಿಚಕ್ರವರ್ತಿಯು ಶಾಂಡಿಲ್ಯ ವ್ರತವನ್ನು ಆಚರಿಸಿದ್ದು, ಮಹರ್ಷಿ ಗೌತಮರಿಂದ ಶಾಪ ಪಡೆದ ಇಂದ್ರನು ಆಷಾಢ ಮಾಸದ ನಾಲ್ಕು ಸೋಮವಾರ ಸೋಮೇಶ್ವರ ಜಯಂತಿ ವ್ರತವನ್ನು ಆಚರಿಸಿ ಶಾಪ ವಿಮೋಚನೆ ಪಡೆದ. ಆಷಾಢ ಮಾಸದಲ್ಲೇ ಅಮರನಾಥದಲ್ಲಿ ಪ್ರತೀ ವರ್ಷ ಹಿಮಲಿಂಗ ದರ್ಶನ ಆಗುವುದು. ಪರಶಿವನು ಪಾರ್ವತಿ ದೇವಿಗೆ ಅಮರತ್ವದ ರಹಸ್ಯ ಹೇಳಿರುವುದು, ಗಂಗೆ ಭೂಮಿಗೆ ಉತ್ತರಾಭಿಮುಖವಾಗಿ ಹರಿದು ಬಂದದ್ದು ಇದೇ ಮಾಸದಲ್ಲಿ. ಮಹಾ ಪತಿವ್ರತೆಯಾದ ಅನುಸೂಯ ದೇವಿಯು ನಾಲ್ಕು ಸೋಮವಾರ ಶಿವವ್ರತ ಆಚರಿಸಿದ್ದು ಇದೇ ಮಾಸದಲ್ಲಿ. ಲಕ್ಷ್ಮೀ ಪೂಜೆಯನ್ನು ವಿಶೇಷವಾಗಿ ಆಷಾಢ ಮಾಸದ ಶುಕ್ರವಾರಗಳಂದು ಆಚರಿಸಲಾಗುವುದು. ಸುಮಂಗಲಿಯರು ದೀರ್ಘ ಕಾಲದ ಮಾಂಗಲ್ಯ ಪ್ರಾಪ್ತಿಗಾಗಿ ಅಮಾವಾಸ್ಯೆ ಸಂಜೆಯಲ್ಲಿ ಜ್ಯೋತಿ ಭೀಮೇಶ್ವರ ವ್ರತವನ್ನು ಶ್ರದ್ಧಾಭಕ್ತಿಯಿಂದ ಆಚರಿಸುತ್ತಾರೆ. ಆಷಾಢ ಹುಣ್ಣಿಮೆಯ ದಿನದೊಂದು ಗುರು ಪೂರ್ಣಿಮೆಯನ್ನು ಎಲ್ಲಾ ಮಠ, ಮಂದಿರಗಳಲ್ಲೂ ಆಚರಿಸಿ ಯತಿಗಳು ಚಾತುರ್ಮಾಸ ವ್ರತವನ್ನು ಆಷಾಢ ಶುದ್ಧ ದಶಮಿಯಿಂದ ಪ್ರಾರಂಭವಾಗಿ ಕಾರ್ತಿಕ ಶುದ್ಧ ದಶಮಿಯವರೆಗೆ ನಾಲ್ಕು ತಿಂಗಳುಗಳ ಕಾಲ ವ್ರತವನ್ನು ಆಚರಿಸುತ್ತಾರೆ. ಮಳೆಗಾಲದ ಈ ಸಮಯದಲ್ಲಿ ಅನೇಕ ಸಣ್ಣಪುಟ್ಟ ಜಂತುಗಳು ಹುಟ್ಟಿಕೊಂಡು ಮಳೆಯ ನೀರಿನಲ್ಲಿ ಸಂಚಾರ ಮಾಡುತ್ತಿದ್ದು, ನಾವು ಅಡ್ಡಾಡುವಾಗ ನಮ್ಮ ಕಾಲಿಗೆ ನಮಗೇ ಅರಿವು ಆಗದಂತೆ ಸಿಕ್ಕು ಜೀವ ಕಳೆದುಕೊಳ್ಳುತ್ತದೆ. ಅವುಗಳನ್ನು ಕೊಂದ ಪಾಪಗಳು ಬರುವುದುಂಟು. ಈ ಕಾರಣದಿಂದ ಮಠಾಧಿಪತಿಗಳು ಚಾತುರ್ಮಾಸ ವ್ರತಾಚರಣೆಯ ಸಮಯದಲ್ಲಿ ಒಂದೇ ಸ್ಥಳದಲ್ಲಿದ್ದು ಅಧ್ಯಯನ, ಜಪ–ತಪಾದಿ ಮಾಡುವ ಸಂಕಲ್ಪದ ಉದ್ದೇಶವು ಆಗಿದೆ. ಆಷಾಢ ಶುಕ್ಲಪಕ್ಷದ ಪಂಚಮಿ ದಿನದೊಂದು ಅಮೃತ ಲಕ್ಷ್ಮೀ ವ್ರತವನ್ನು ಆಚರಿಸಲಾಗುವುದು. ವಿಶೇಷವೆಂದರೆ ಮೈಸೂರಿನ ನಾಡದೇವತೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಜನ್ಮ ದಿನೋತ್ಸವವು ಸಹ ಆಷಾಢದಲ್ಲೇ ಆಚರಿಸಲಾಗುವುದು. ಈ ಮಾಸದಲ್ಲಿ ಪವಿತ್ರ ನದಿಯಲ್ಲಿ ಸ್ನಾನ ಮಾಡಿದರೆ ಮಹಾಪಾತಕಗಳು ನಷ್ಟವಾಗುವುದು ಎಂಬುದು ನಂಬಿಕೆ.

ಪ್ರಥಮ ಏಕಾದಶಿಯಂದು ಮಕ್ಕಳಿಗಾಗಿಯೇ ಗಾಳಿಪಟದ ಹಬ್ಬವನ್ನು ಆಚರಿಸಲಾಗುವುದು. ಅಂದು ವೈವಿಧ್ಯಮಯ ವಿವಿಧ ಆಕಾರದ ಬಣ್ಣಗಳ ಗಾಳಿಪಟವನ್ನು ತಯಾರಿಸಿ ಸೂತ್ರವನ್ನು ಹಾಕಿ, ಗಾಳಿಪಟವನ್ನು ಗಗನಕ್ಕೆ ಹಾರಿಸಿ ಸಂಭ್ರಮಿಸುವರು. ಇತ್ತೀಚೆಗೆ ಗಾಳಿ ಪಟವನ್ನು ಒಂದು ಕ್ರೀಡೆ ಯಾಗಿಯು, ಕಲೆಯಾಗಿಯೂ ಹಾಗೂ ಅಂತರರಾಷ್ಟ್ರೀಯ ಗಾಳಿ ಪಟ ಉತ್ಸವ ವನ್ನು ಆಚರಿಸುತ್ತಿರುವುದು ಸಂತಸ ತಂದಿದೆ.



–ನಂ.ಶ್ರೀಕಂಠಕುಮಾರ್, ಮೈಸೂರು.

ಮೊ: 9481067333

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23



Sri Sharada Nikethana Vidyarthi Nilaya
Jhansi Lakshmibai Road, Chamundipuram, Mysore- 23
New Admission for 2022-23 Batch
(ತ್ರಿಮತಸ್ಥ ಬ್ರಾಹ್ಮಣರಿಗೆ ಮಾತ್ರ)
Girls and Boys Hostel
Facility: Breakfast & Lunch, Hot Water, Good Environment.
Contact: 9845110272, 9886642392, 9886654992

ಬೇಕಾಗಿದ್ದಾರೆ
Hootagalli Industrial Area ದಲ್ಲಿ ಕೆಲಸ ಮಾಡಲು ಮಹಿಳೆ ಕಂಪ್ಯೂಟರ್ Operator ಮತ್ತು ಪುರುಷ CNC Machine operator & Helpers ಬೇಕಾಗಿದ್ದಾರೆ
7996176555

ಬೇಕಾಗಿದ್ದಾರೆ
ಹೆಸರಾಂತ ಲ್ಯಾಂಡ್ ಡೆವೆಲಪರ್ಸ್ ಕಂಪನಿಗೆ ಮಂಡ್ಯನಗರದಿಂದ ಕೆಲಸ ಮಾಡಲು ಒಬ್ಬ ಅನುಭವವುಳ್ಳ ಡಿಜಿಟಲ್ ಮಾರ್ಕೆಟಿಂಗ್ ಎಕ್ಸಿಕ್ಯೂಟೀವ್ (ಹುಡುಗಿ) ಬೇಕಾಗಿದ್ದಾರೆ. ಸಂಪರ್ಕಿಸಿ.
9448042677

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಜ್ಞಾನಲಕ್ಷ್ಮೀ ಎಂಟರ್‌ಪ್ರೈಸಸ್
(ಬ್ಯಾಂಕ್, ಬ್ಯಾಂಕೇತರ ಸಂಸ್ಥೆಗಳ ಅಧಿಕೃತ ಸಹವರ್ತಿಗಳು)
ಆಕರ್ಷಕ ಬಡ್ಡಿದರದಲ್ಲಿ
ಗೃಹ ಸಾಲ
ಮತ್ತು ಇತರೆ ಸಾಲಗಳು, ಎಲ್ಲಾ ರೀತಿಯ ವಿಮಾ ಸೇವೆಗಳು, ಹೂಡಿಕೆಗಳು ಮತ್ತು ಆರ್ಥಿಕ ಸಲಹೆಗಾಗಿ ಸಂಪರ್ಕಿಸಿ:
9606888253
* ಷರತ್ತುಗಳು ಅನ್ವಯ

ಜಮೀನು ಮತ್ತು ನಿವೇಶನಗಳು ಮಾರಾಟಕ್ಕಿವೆ
ನಂಜನಗೂಡು ಸುತ್ತಮುತ್ತ ಜಮೀನುಗಳು ಮಾರಾಟಕ್ಕಿವೆ. ನಂಜನಗೂಡು ಪಟ್ಟಣದಲ್ಲಿ ಸೈಟು ಮತ್ತು ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ.
9448601899 / 9380058537

WANTED
HINDI TEACHER, SOCIAL TEACHER, RECEPTIONIST (Timings: 8.30 a.m. to 6 p.m.) SECURITY and HELPER (Family preferred. Accomodation will be provided) Contact:
9538787037 /9036844557

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ (30 ವರ್ಷ ಒಳಪಟ್ಟು) ನಮ್ಮಲ್ಲೇ ಉಳಿದುಕೊಂಡು ಮನೆ ಕೆಲಸ ಮಾಡಲು ಬೇಕಾಗಿದ್ದಾರೆ.
ಸ್ಥಳ: ಬನ್ನಿಮಂಟಪ
9036951272

ಶ್ರೀ ಮೂರ್ತಿ ಟೂರಿಸ್ಟ್
10.7.22 (1 ದಿನ) ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಹುಲಗಾದ್ರಿ ಬೆಟ್ಟ, ಬಿಳಿಗಿರಿರಂಗನಬೆಟ್ಟ. 17.7.22 (1 ದಿನ) ಗೊರವನ ಹಳ್ಳಿ ಮಹಾಲಕ್ಷ್ಮಿ, ಎಡಿಯೂರು, ಹೆಬ್ಬೂರು, ದೇವರಾಯನದುರ್ಗ. 23.7.22, 4 ದಿನ ಹೊರನಾಡು, ಶೃಂಗೇರಿ, ಕೊಲ್ಲೂರು, ಮುರುಡೇಶ್ವರ, ಆನೇಗುಡ್ಡ, ಅಂಬಲಪಾಡಿ, ಉಡುಪಿ, ಧರ್ಮಸ್ಥಳ, ಸುಬ್ರಹ್ಮಣ್ಯ ಪ್ರವಾಸ. Tickets at your Door Step
9480733069

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಿಣಿಯರಿಗೆ ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time / Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
Fixed Salary / PF-ESI.
Age: Above 30 years.
9008799156 / 9513395132

MUDA SITE FOR SALE
36/42 NEAR SRIRAMPURA MYSORE (Rs.57 Lak)
30/40 SITE FOR SALE
NIVEDITA NAGARA (RS. 45 Lak)
PH: +91 99004 64111



Solar Water Heater SALES & SERVICE
Bajaj Finserv Available
SUNZONE SOLAR SYSTEM
VM Double Road, Kuvempunagar, Mysuru
9845175443

URGENT REQUIRED
Account Assistant
2-3 years Experience. Tally. Contact:
8548880010

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary: 13,000 - 21,000 +ESI, PF
ವಿದ್ಯಾರ್ಹತೆ 10th, PUC, ITI, Diploma and any Degree ಇಂದೇ ಸಂಪರ್ಕಿಸಿ.
9035734821

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9108418233
9743217566

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

S.M GOLD
ಗಿರವಿ ಚಿನ್ನಾಭರಣ ಖರೀದಿ
ನೀವು ಯಾವುದೇ ಬ್ಯಾಂಕ್ ಮತ್ತು ಗಿರವಿ ಅಂಗಡಿಗಳಲ್ಲಿ ಬಿಡಿಸಿಕೊಳ್ಳಲಾಗದ ಚಿನ್ನಾಭರಣಗಳನ್ನು ನಾವೆ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣಕೊಡುತ್ತೇವೆ ಕೂಡಲೇ ಸಂಪರ್ಕಿಸಿ – (T&C)
8050518881

Join ASFT Fashion Design Courses
* Certification Course
* Diploma Course
* Advance Diploma Course
Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

ತರಬೇತಿ ನಂತರ ತಕ್ಷಣ ಉದ್ಯೋಗ
SSLC Pass or PUC Fail!
Diploma in NTT (Teachers Training) (Nursery / Montessori / Kindergarten) Exam & Certificate by All India Child Care & Education. NEW Delhi (MHRD Govt of India Approved) Join Training off line / Online Classes, Jnana Gangothri Convent, Rajendra Nagara, Mysuru - 570007
9113980741

REQUIRED
10 Telecallers fluent in (Kannada, English, Hindi, Telegu, Tamil) Languages
2 Executives
Contact :
9964885548

WANTED
Franchise for (Part Time Job Available) Washing Detergent gel (with Softner) (with Excellent Margin) For all over Karnataka
7026416466

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ, ಮೈಸೂರು / ಹಾಸನ

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿಗೆ ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree pass / fail ಆದವರಿಗೆ packing, helper, Checking, Maintenance, billings, front office, telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14,000 – 39,000 (ESI + PF + OT) ಸೇರಿ. ಸಂಪರ್ಕಿಸಿ:
9980630131, 9980850141

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್‌ಗೆ
ಸಿಂಗಲ್‌ಕಲರ್‌ಪ್ರಿಂಟಿಂಗ್ ಮಿಷಿನ್, ಕಟಿಂಗ್ ಮಿಷಿನ್, ಫೋಲ್ಡಿಂಗ್ ಮಿಷಿನ್‌ಗೆ ಅಪರೇಟರ್ ಮತ್ತು ಹೆಲ್ಪರ್‌ಗಳು ಬೇಕಾಗಿದ್ದಾರೆ. ಪುರುಷರಿಗೆ ಮೊದಲ ಅದ್ಯತೆ
ಹಾಗೂ ಗ್ರಾಫಿಕ್ ಡಿಸೈನರ್, ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ.
ಮೊ : 9449853308

MUDA APPROVED SITE FOR SALE
20X30, 30X40 & 30X50 @ 3999/Sft. Onwards,
B/w Police Layout & Lalithadri Nagar Layout. within ring road.
READY WITH ALL BASIC AMENITIES & BANK LOAN AVAILABLE.
98800 65122 / 77956 09173

WANTED
Civil Engineers, BE/ Diploma with 1 year Experience, Male Candidates Only. Email: p.sanjay5511@gmail.com
8660703212

HOUSE FOR LEASE
30x40 Duplex at Srirampura, 40x60 & 20x30 at Kuvempunagar, 20x30 Duplex at Vijayanagar 4th Stage
9663136318

GT 4X LIQUID DETERGENT GEL
(Chemical Free) (Part Time Job Available) Very Easy for Washing Clothes with Washing & without Washing machine, No Need Detergent Soap & Powder, No Pain for Hands, Complete Softner, For more Details:
7026416466

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, kuvempunagar, Mysuru
MYSURU 9611028523 MANGALORE 9343142258

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

VIDYAVAHINI SCHOOL (R)
#282/8, Near Cauvery Circle, Hebbal, 2nd Stage, Mysuru - 570017
TEACHERS REQUIRED
N.S.T - Pre Primary
D.Ed - Primary
E -Mail- vidyavahini06@gmail.com
9844032278 / 7795115811

WANTED
SCHOOL BUS DRIVER
(Accomodation will be provided) Contact:
9538787037
9036844557

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಮೇಟಗಳ್ಳಿ, ಬೆಳವಾಡಿ, ಹೆಬ್ಬಾಳ ಏರಿಯಾದಲ್ಲಿ ಕೆಲಸ ಮಾಡಲು ಅನುಭವವಿರುವ ಹಾಗೂ 50 ವರ್ಷದೊಳಗಿನವರು ಕೂಡಲೇ ಬೇಕಾಗಿದ್ದಾರೆ.
ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸಿ:
97391 66772 / 97391 99355

Villa Plots for Sale
Own a most valuable piece of land 30x40, 30x50 - DTCP approved at Bogadi Gaddige main road. Call:
99009 35717, 73532 79161

WANTED SITES
@ Vijayanagar, Yelwala, Kuvempunagar & Mysore Ring Road surrounding. Quick registration.
Mob: 93421-25252

WANTED
Graduates, fluency in English for teaching.
Contact:
Mob: 91132-57683

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
12/7, M.P, 2 ಜ್ಯೋತಿರ್ಲಿಂಗ, ಉಜ್ಜಯಿನಿ ಮಹಾಕಾಳೇಶ್ವರ, ಓಂಕಾರೇಶ್ವರ, ಮಹೇಶ್ವರ, ದೇವಾಸ್, ಇಂದೋರ್.
13/7: ಪುರಿ ಜಗನ್ನಾಥ, ಕೋನಾರ್ಕ್, ಚಂದ್ರಭಾಗ ಬೀಚ್, ಭುನೇಶ್ವರ, ಲಿಂಗರಾಜು ದೇವಸ್ಥಾನ, ಕೇದಾರ ಗೌರಿ. 11/8 – ಕಾಶಿ ವಿಶ್ವನಾಥ, ಪ್ರಯಾಗ್ ರಾಜ್, ಅಯೋಧ್ಯೆ.
9964527782 / 9591017782

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (COLD PRESSED) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ – ನೀಮ್
ನಂ.203, ಬನ್ನಿಮಂಟಪ ಬಡಾವಣೆ, ಮೈಸೂರು – 570015
8088887802

ನಿವೇಶನ ಬೇಕಾಗಿದೆ
ವಸಂತನಗರ, ಶಾಂತವೇರಿ ಗೋಪಾಲಗೌಡನಗರ, ಲಲಿತಾದ್ರಿಪುರದಲ್ಲಿ
30x40
ಅಳತೆ North & East only
9880859168 / 9886759120

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ.
ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1) ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.
2) ಶಿಷ್ಯರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ನಗರದ ಅಂಗಡಿಯೊಂದಕ್ಕೆ
ಕ್ಯಾಶಿಯರ್
ಕೌಂಟರ್ ಸೇಲ್ಸ್ (ಗರ್ಲ್ಸ್ or ಬಾಯ್ಸ್)
ಡಿಲಿವರಿ ಬಾಯ್ಸ್ (ಆಲ್ ರೌಂಡರ್)
ಚಾಟ್ಸ್ ಕೌಂಟರ್‌ಗೆ (ಹೆಲ್ಪರ್)
ತಿಂಡಿಗಳು ತಯಾರಿಸಲು ಹೆಲ್ಪರ್ಸ್ ಹೆಂಗಸರುಗಳು ಬೇಕಾಗಿದ್ದಾರೆ.
9606116665

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಲೇಡಿಸ್ ತಕ್ಷಣ ಬೇಕಾಗಿದ್ದಾರೆ
9901890703
9538127065

ಅಡುಗೆಯವರು ಬೇಕಾಗಿದ್ದಾರೆ
ಮಡಿಕೇರಿಯ ಹೋಂ ಸ್ಟೇಗೆ ಅಡುಗೆಯವರು ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯ ಹಾಗೂ ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ:
7337722277

Urgent Requirement
1.Diploma (Civil/ Mechanical) MALE candidates
2.HR Executives
3.Accounts Executive
Job location: Mysore. Interested candidates can share their resumes to careermysr@gmail.com or whatsapp: 9972342126

ಬೇಕಾಗಿದ್ದಾರೆ
ಹೌಸ್ ಕೀಪಿಂಗ್–01, ಅಡುಗೆಯವರು (ಕುಕ್)–01, (ಸೌತ್ ಇಂಡಿಯನ್ ವೆಜ್ ಮತ್ತು ನಾನ್ ವೆಜ್) ಸ್ಥಳ: ನಿವೇದಿತ ನಗರ, ಮೈಸೂರು, ಸಂಪರ್ಕಿಸಿ
9972342126

CHANGE OF NAME
I, Naman Salecha (Old Name), residing at No. 17/1, A Ramanna Street, Devraj Mohalla, Mysore-01 have changed my name from Naman Salecha to Naman V Salecha, on my own free will, infront of Notary L.N.Rajendran on 24.06.2022
Sd/- Naman V Salecha

FOR RENT
1700 Sq.ft for office use. First floor. Near JSS Public School, Teachers Layout, Dr Rajkumar Road, Yaraganahalli, Mysuru
9620982950 / 9019300736

WANTED
Sales Boys and Girls for a Sports Shop at Dewans Road, Mysore
8105368325
7760109047

HOUSE FOR SALE
20x30 West Facing Ground Floor & 1st Floor Duplex.
No.21, 2nd Stage, Opp. Ashokapuram Railway Station, Srirampura, Mysore
9538123494
9632392367

ಶಾಶ್ವತ್ ವಿದ್ಯಾಮಂದಿರ
(ಆಂಗ್ಲ ಮಾಧ್ಯಮ)
ಸಿದ್ಧರಾಮಯ್ಯನಹುಂಡಿ
ಶಿಕ್ಷಕಿಯರು ಬೇಕಾಗಿದ್ದಾರೆ.
Maths / Spoken English, Sports Teacher
9740032559
9986791152

ಬೇಕಾಗಿದ್ದಾರೆ
1.ತೂಬಿನಕೆರೆ (ಮಂಡ್ಯ)
2.ಮೈಸೂರಿನ ಬಲ್ಲಾಳ್ ಸರ್ಕಲ್
ಮೇಲ್ಕಂಡ ಸ್ಥಳಗಳಿಗೆ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ESI/PF ವ್ಯವಸ್ಥೆಯಿದೆ ಸಂಪರ್ಕಿಸಿ:
9686422400/9242406261

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 30 ವರ್ಷ, ವಿದ್ಯಾರ್ಹತೆ: 7ನೇ ತರಗತಿಯಿಂದ PUC, ITI ಮತ್ತು Diploma (Mechanical) PF ಮತ್ತು ESI ಸೌಲಭ್ಯವಿರುತ್ತದೆ. ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ವಸತಿ ಸೌಲಭ್ಯವಿರುತ್ತದೆ.(ಯಾವುದೇ ಶುಲ್ಕವಿರುವುದಿಲ್ಲ)
9035381989

WANTED
English medium Teachers for a School at Gundlupet. Degree with / without B.Ed. Attractive Salary + TA
9731897495

ಪರ್ಮನೆಂಟ್ ಉದ್ಯೋಗ
ಮೈಸೂರಿನಲ್ಲಿರುವ Govt. Registered ಕಂಪನಿಯಾದ A.W.B.M ಕಂಪನಿಯಲ್ಲಿ ಖಾಲಿಯಿರುವ 326 ಪರ್ಮನೆಂಟ್ ಹುದ್ದೆಗಳಿಗೆ SSLC (Pass), PUC, ITI, JOC, Diploma, Any Degree etc., ಆಗಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ: 18 to 36 years ತಿಂಗಳಿಗೆ: 28,000 - 35,000
ದಯಾನ: 9663481922
9844219943

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

30x40 E/F ಸೈಟು @ 16.80 ಲಕ್ಷ
MUDA Approved Layout
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ. ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್ ಬಹದ್ದೂರ್ ಶಾಸ್ತ್ರಿನಗರ, ನಂತರ
9538583377

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 8000 – 10000 ರವರೆಗೆ ಸ್ಥಳ: ಎನ್.ಆರ್.ಮೊಹಲ್ಲಾ, ಚಾಮುಂಡಿಪುರಂ, GTR Hotel ಹತ್ತಿರ,
Field Work ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 15,000 (Life Insurance) ಕಂಪ್ಯೂಟರ್ ಜ್ಞಾನವುಳ್ಳ (ಕನ್ನಡ, ಇಂಗ್ಲೀಷ್, ಹಿಂದಿ)
8050912616

ಹೊಸ ಮನೆ ಮಾರಾಟಕ್ಕಿದೆ
ವಸಂತನಗರ, MUDA Layout ಟಿ.ನರಸೀಪುರ ರಸ್ತೆ, 20x30, South Face, G+F Floor, Fully Furnished
9886759120 / 9880859168

airtel | digital TV
AIRTEL HD BOX
With 6 Month FREE, Installation FREE
All Dish Converted Airtel only HD Box, Kannada, Sports & Kids Channels
Rs.1499/-
Harry Limited 2 Days
All Dish Converted Airtel only HD Box 6 months Free Rupees 1499/-
9945499180

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಕಾರ್‌ಟೈರ್ ವ್ಹೀಲ್ ಅಲೈನ್‌ಮೆಂಟ್ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ITI ಮಾಡಿರುವವರು ಬೇಕಾಗಿದ್ದಾರೆ. ಮೊದಲ ಮೂರು ತಿಂಗಳು ಟ್ರೈನಿಂಗ್, ಟ್ರೈನಿಂಗ್ ಸಮಯದಲ್ಲಿ ಆಕರ್ಷಕ ಸಂಬಳ ನೀಡಲಾಗುವುದು.
9591218438
9916842472

ತಕ್ಷಣ ಬೇಕಾಗಿದ್ದಾರೆ
ಹೊಸದಾಗಿ ಪ್ರಾರಂಭವಾಗಿರುವ ಸಂಸ್ಥೆಗೆ, ಟೆಲಿಕಾಲಿಂಗ್ ಮಾಡಲು ಆಸಕ್ತಿಯುಳ್ಳ 25 ಯುವತಿಯರು ತಕ್ಷಣ ಬೇಕಾಗಿದ್ದಾರೆ. ಹೆಚ್ಚಿನ ಆದ್ಯತೆ: ಸೂರ್ಯಬೇಕರಿ, ಹೆಬ್ಬಾಳ್, ಗೋಕುಲಂ, ವಿಜಯನಗರ, ಮೇಟಗಳ್ಳಿ, ಬಸವನಗುಡಿ, ಸಂಬಳ: 7000 – 14000, ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ / ಪಿಯುಸಿ / Any Degree
7619219839 / 9986480054

WANTED
For Herbal Products Distributors
1. Tele Callers 2 Nos.
(Experienced & Resulted Oriented Only) Residents of Dr.Rajkumar Road, Siddarthanagar, Alanahally, Raghavendra Nagar Will be Preferred, Attractive Salary + Incentives
9482742439 / 9482035250

ಮನೆ ಬಾಡಿಗೆಗೆ ಇದೆ
23x33, 2BHK, 1 ಹಾಲ್, ಅಟ್ಯಾಚ್ ಬಾತ್ ರೂಂ, ಸಪರೇಟ್ ದೇವರ ಮನೆ, ಸೋಲಾರ್, ಸಿಂಟೆಕ್ಸ್ ಮತ್ತು 24 Hours ನೀರು. ಮನೆ ನಂ.39, 1ನೇ ಹಂತ, 2ನೇ ಫೇಸ್, ಗಾಯತ್ರಿಪುರಂ, ಮೈಸೂರು. ಸಂಪರ್ಕಿಸಿ. ದಾಳ್ಳಳಿಗಳು ಕ್ಷಮಿಸಿ
9972958810
9901257088

ಆಷಾಡ ಮಾಸದ ಬಂಪರ್ ಕೊಡುಗೆ
ಮೈಸೂರಿನಿಂದ ಕೇವಲ 8 ಕಿ.ಮೀ ದೂರದಲ್ಲಿ ಅತೀ ಕಡಿಮೆ ದರದಲ್ಲಿ ಮೂಡದಿಂದ ಅನುಮೋದನೆಗೊಂಡ ನಿವೇಶನಗಳು ದೊರೆಯುತ್ತದೆ.
6360633036
0821-4260677

WANTED
TV Anchor No.2, Event Manager No.01, Female Telecaller No.3, Male marketing executive @ Manger No. 2, Data entry operator No. 8
Contact:
9743283001
(Media tv Channel)

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೊಳ್ಳೇಗಾಲ ಜ್ಯೋತಿಷ್ಯರು ನಂ. 01 ಮೋಡಿ ಮಾಂತ್ರಿಕರು ಪಂ. ಎಸ್. ಕುಮಾರಸ್ವಾಮಿ
Mob: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋಚರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನ ರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ: ಎ.ಟಿ.ಎಂ. ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್), ಬಿ.ಎನ್. ರೋಡ್, ಕೆ.ಎಸ್.ಆರ್.ಟಿ.ಸಿ. ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಃಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮಂಡ್ಯ ಜಿಲ್ಲೆ ಪ್ರಗತಿ ಪರಿಶೀಲನಾ ಸಭೆ

ಹೆದ್ದಾರಿ ಇಕ್ಕೆಲಗಳ ರೈತರ ಸಮಸ್ಯೆ ಪರಿಹಾರಕ್ಕೆ ಸಚಿವರ ನೇತೃತ್ವದ ತಂಡದ ಭೇಟಿಗೆ ಆಗ್ರಹ



ರಸಗೊಬ್ಬರ ಬಿತ್ತನೆ ಬೀಜಗಳ ದಾಸ್ತಾನು ಹಾಗೂ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳಲು ಸಲಹೆ

ಮಂಡ್ಯ, ಜೂ.29– ಮಂಡ್ಯ ಜಿಲ್ಲೆ ಕೆಡಿಪಿ ಸಭೆ ಬುಧವಾರ ನಡೆದಿದ್ದು, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಹಲವು ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿದ್ದಾರೆ. ಮೈಸೂರು–ಬೆಂಗಳೂರು ಹೆದ್ದಾರಿ ಇಕ್ಕೆಲಗಳಲ್ಲಿ ರೈತರಿಗೆ ಹಲವಾರು ಸಮಸ್ಯೆಗಳು ಕಾಡುತ್ತಿದ್ದು, ಇವುಗಳನ್ನು ಬಗೆಹರಿಸ ಬೇಕಿದೆ ಎಂದು ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಈ ಸಮಸ್ಯೆಗಳ ಖುದ್ದು ಪರಿಶೀಲನೆಯಾಗಬೇಕಿದ್ದು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸಂಸದರು, ಶಾಸಕರು, ಹಿರಿಯ ಅಧಿಕಾರಿಗಳನ್ನೊಳಗೊಂಡ ತಂಡವು ನಿಡಘಟ್ಟದಿಂದ ಶ್ರೀರಂಗಪಟ್ಟಣದವರೆಗೆ ಸ್ಥಳ ಪರಿಶೀಲನೆ ನಡೆಸಿ ರೈತರ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಸಲಹೆ ನೀಡಿದರು.

ಬಿತ್ತನೆಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸಮರ್ಪಕ ಕ್ರಮಗಳನ್ನು ಕೈಗೊಳ್ಳುವುದು ಮುಖ್ಯವಾಗಿದೆ. ಯಾವುದೇ ಕಾರಣಕ್ಕೂ ಬಿತ್ತನೆ ಬೀಜಗಳ ಕೊರತೆಯಾಗಬಾರದು. ಬೇಡಿಕೆಗೆ ತಕ್ಕಂತೆ ಪೂರೈಕೆಗೆ ದಾಸ್ತಾನನ್ನು ಮಾಡಿಕೊಳ್ಳಬೇಕಿದೆ. ಇದೇ ರೀತಿ ರಸಗೊಬ್ಬರದ ಕೊರತೆಯಾಗದಂತೆ ನೋಡಿಕೊಳ್ಳಬೇಕಿದೆ. ಹೀಗಾಗಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಬೇಡಿಕೆ ಮತ್ತು ಪೂರೈಕೆ ಬಗ್ಗೆ ಅಗತ್ಯ ಕ್ರಮವನ್ನು ಈಗಲೇ ಕೈಗೊಳ್ಳುವ ತುರ್ತು ಇದೆ ಎಂದು ಸಭೆಯ ಗಮನಕ್ಕೆ ತಂದರು.

ಮಂಡ್ಯ ಜಿಲ್ಲೆಯು ಶೈಕ್ಷಣಿಕವಾಗಿ ಇನ್ನಷ್ಟು ಪ್ರಗತಿಯನ್ನು ಕಾಣಬೇಕಿದೆ. ಇದಕ್ಕೆ ಅಗತ್ಯ ಕ್ರಮಗಳನ್ನು ಈಗಿನಿಂದಲೇ ಕೈಗೊಳ್ಳುವುದು ಒಳಿತು. ಇತ್ತೀಚೆಗೆ ಪ್ರಕಟಗೊಂಡ ಪಿಯುಸಿ ಫಲಿತಾಂಶವೂ ಇದಕ್ಕೆ ನಿದರ್ಶನವಾಗಿದೆ. ಹೀಗಾಗಿ ಕಾಲೇಜುಗಳಲ್ಲಿ ಉಪನ್ಯಾಸಕರ ಸಹಿತ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆಯೇ ಎಂದು ಶಾಸಕರಾದ ದಿನೇಶ್ ಗೂಳಿಗೌಡ ಅವರು ಪ್ರಶ್ನಿಸಿದರು.

ಇದಕ್ಕೆ ಪೂರಕವಾಗಿ ಸ್ಪಂದಿಸಿದ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ, ಪಿಯುಸಿ ಫಲಿತಾಂಶ ಹಿನ್ನಡೆಗೆ ಕಾರಣ ಏನು ಎಂಬ ಬಗ್ಗೆ ಒಂದು ವಾರದೊಳಗೆ ವರದಿ ಸಲ್ಲಿಸುವಂತೆ ಡಿಡಿಪಿಯು ಅವರಿಗೆ ಸೂಚಿಸಿದರು.

ಕೋವಿಡ್–19ರ ಸಂದರ್ಭದಲ್ಲಿ ಮರಣ ಹೊಂದಿದ ಕುಟುಂಬಗಳಿಗೆ ಪರಿಹಾರ ವಿತರಣೆ ಮಾಡಲಾಗಿದೆಯೇ ಎಂದು ದಿನೇಶ್ ಗೂಳಿಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಂಬಂಧಪಟ್ಟ ಅಧಿಕಾರಿಗಳು, ಜಿಲ್ಲೆಯ 1600 ಜನರಿಗೆ ಪರಿಹಾರವನ್ನು ನೀಡಿದ್ದು, ಇನ್ನು ಕೇವಲ 4 ಜನಕ್ಕೆ ಮಾತ್ರ ಬಾಕಿ ಇದೆ ಎಂದು ತಿಳಿಸಿದ್ದಾರೆ.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಲವಾರು ಕೆಲಸಗಳು ಆಗಬೇಕಿದ್ದು, ಈ ಸಂಬಂಧ ಕಾಲಕಾಲಕ್ಕೆ ಪಿಡಿಒಗಳ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವರು ನಡೆಸ ಬೇಕಿದೆ. ಈ ಮೂಲಕ ಬಿಸಿ ಮುಟ್ಟಿಸುವ ಕೆಲಸ ಆದಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ಬಹುಬೇಗ ಪೂರ್ಣಗೊಳ್ಳುತ್ತವೆ ಎಂದು ಇದೇ ಸಂದರ್ಭದಲ್ಲಿ ಎಂಎಲ್‌ಸಿ ದಿನೇಶ್ ಗೂಳಿಗೌಡ ಸಲಹೆ ನೀಡಿದರು.

ಕಳಪೆ ಬಿತ್ತನೆ ಬೀಜ, ಗೊಬ್ಬರ ವಿತರಣೆ ಜಿಲ್ಲೆಯಲ್ಲಿ ಕಂಡು ಬಂದಲ್ಲಿ ಕಠಿಣ ಕ್ರಮ

ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಎಚ್ಚರಿಕೆ



ಮಂಡ್ಯ, ಜೂ.29– ಜಿಲ್ಲೆಯಲ್ಲಿ ಕಳಪೆ ಬಿತ್ತನೆ ಬೀಜ ಅಥವಾ ಕಲಬೆರಕೆ ರಸಗೊಬ್ಬರ ವಿತರಣೆ ಕಂಡು ಬಂದಲ್ಲಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕೆ.ಡಿ.ಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಿಂದ ಹೊರ ಜಿಲ್ಲೆ ಅಥವಾ ಹೊರ ರಾಜ್ಯಕ್ಕೆ ಅಕ್ರಮವಾಗಿ ರಸಗೊಬ್ಬರ ಸಾಗಾಣಿಕೆಯಾಗಬಾರದು. ಈ ರೀತಿಯ ಪ್ರಕರಣಗಳು ಕಂಡುಬಂದರೆ ದಾಳಿ ನಡೆಸಿ ವಶಪಡಿಸಿಕೊಂಡು ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿ ಎಂದು ಸೂಚಿಸಿದರು.

ಬಿತ್ತನೆ ಬೀಜ ಅಥವಾ ರಸಗೊಬ್ಬರದ ಅವಶ್ಯಕತೆಯನ್ನು ಪರಿಶೀಲಿಸಿಕೊಳ್ಳಿ. ಕೊರತೆ ಇದ್ದಲ್ಲಿ ಗಮನಕ್ಕೆ ತಂದರೆ ಕೃಷಿ ಇಲಾಖೆ ಸಚಿವರೊಂದಿಗೆ ಚರ್ಚಿಸಿ ಬೇಡಿಕೆ ತಕ್ಕಂತೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಒದಗಿಸುವುದಾಗಿ ತಿಳಿಸಿದರು.

ವಿ.ಸಿ.ನಾಲೆಯಿಂದ 15 ದಿನಗಳಿಂದ ನೀರು ಬಿಡುಗಡೆ ಮಾಡದೇ ರೈತರ ಬೆಳೆಗಳಿಗೆ ತೊಂದರೆಯಾಗುತ್ತಿದೆ ಎಂದು ಶಾಸಕರು ಹಾಗೂ ಸಂಸದರು ಸಚಿವರಿಗೆ ತಿಳಿಸಿದಾಗ ನೀರು ನಿಲುಗಡೆಗೂ ಮುನ್ನ ಜನಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳ ಗಮನಕ್ಕೆ ತರಬೇಕು ಎಂದು ವಿ.ಸಿ.ನಾಲೆ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸುತ್ತಾ ತಕ್ಷಣವೇ ನೀರು ಬಿಡುಗಡೆ ಮಾಡಿ ವರದಿ ನೀಡುವಂತೆ ತಿಳಿಸಿದರು.

ಬೆಂಗಳೂರು– ಮೈಸೂರು ಹೆದ್ದಾರಿಯ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಸರಿಯಾಗಿ ಪರಿಹಾರ ನೀಡಿಲ್ಲ ಎಂದು ಶಾಸಕರು ಆರೋಪಿಸಿದಾಗ ಜಿಲ್ಲಾ ಉಸ್ತುವಾರಿ ಸಚಿವರು ಈ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಶಾಲಾ ಕಾಲೇಜು ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆಯನ್ನು ಕಲ್ಪಿಸಿಕೊಡಿ ಎಂದು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಚಿವರಾದ ಡಾ.ಕೆ.ಸಿ ನಾರಾಯಣಗೌಡ, ಲೋಕ ಸಭಾ ಸದಸ್ಯರಾದ ಸುಮಲತಾ ಅಂಬರೀಶ್, ಶಾಸಕರಾದ ಡಾ.ಕೆ.ಅನ್ನದಾನಿ, ಎಂ.ಶ್ರೀನಿವಾಸ್, ಟಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ರವೀಂದ್ರ ಶ್ರೀಕಂಠಯ್ಯ, ದಿನೇಶ್ ಗೂಳಿಗೌಡ, ಜಿಪಂನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ವಿ.ರಾಮ್ ಪ್ರಸಾಥ್ ಮನೋಹರ್, ಜಿಲ್ಲಾಧಿಕಾರಿಗಳಾದ ಎಸ್.ಅಶ್ವತಿ, ಜಿ.ಪಂ. ಸಿಇಒ ದಿವ್ಯ ಪ್ರಭು, ಜಿಲ್ಲಾ ಎಸ್ಪಿ ಎನ್.ಯತೀಶ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ.ಎ.ಖುತ್ರೇನ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ನೋಟ್‌ಬುಕ್ ವಿತರಣೆ



ಶ್ರೀರಂಗಪಟ್ಟಣ,ಜೂ.29(ವಿನಯ್ ಕಾರೇಕುರ)– ತಾಲೂಕಿನ ಸರ್ಕಾರಿ ಶಾಲಾ ಮಕ್ಕಳಿಗೆ ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ಉಚಿತ ನೋಟ್‌ಬುಕ್ ವಿತರಿಸಿದರು.

ತಾಲೂಕಿನ ಬಾಬುರಾಯನ ಕೊಪ್ಪಲು, ನಗುವನಹಳ್ಳಿ, ನಗುವನಹಳ್ಳಿ ಕಾಲೋನಿ, ರಾಜೀವ್ ನಗರ ಹಾಗೂ ಬೆಳವಾಡಿ ಗ್ರಾಮಗಳಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಎನ್. ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಉಚಿತ ನೋಟ್‌ಬುಕ್ ವಿತರಿಸಿದ ಬಳಿಕ ಮಾತನಾಡಿದ ಅವರು, ಮಕ್ಕಳು ದೇಶದ ಆಸ್ತಿ ಅವರಿಗೆ ಉತ್ತಮ ಸಂಸ್ಕಾರ ನೀಡುವುದು ಶಾಲೆಗಳ ಕರ್ತವ್ಯ ಎಂದರು. ಮಕ್ಕಳು ಶಾಲಾ ಹಂತದಲ್ಲೇ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಭಾವನಾತ್ಮಕ ಚಿಂತನೆಗಳನ್ನು ರೂಢಿಸಿಕೊಂಡು ಸನ್ನಡತೆ ಹೊಂದಬೇಕು ಎಂದರು.

ತಾಪಂ ಮಾಜಿ ಅಧ್ಯಕ್ಷರಾದ ಶ್ರೀಧರ್, ಮಹೇಶ್, ಪುಟ್ಟರಾಜು, ಗ್ರಾ.ಪಂ ಅಧ್ಯಕ್ಷೆ ಸುಮಾ ಮಹೇಶ್, ದೇವರಾಜು, ತಾ.ಪಂ ಮಾಜಿ ಸದಸ್ಯ ರಾಮಲಿಂಗೇಗೌಡ, ರವಿ, ಅನಿಲ್, ಪ್ರಕಾಶ್, ಟಿಎಪಿಸಿಎಂಎಸ್ ನಿರ್ದೇಶಕರಾದ ಶಿವಕುಮಾರ್, ಗ್ರಾ.ಪಂ ಸದಸ್ಯರಾದ ಬೆಟ್ಟೇಗೌಡ, ಧನರಾಜ್, ದಿನೇಶ್, ವೆಂಕಟೇಶ್, ಸತ್ಯನಾರಾಯಣ, ಮುಖಂಡರಾದ ವಿರೂಪಾಕ್ಷ, ಮಹದೇವಸ್ವಾಮಿ, ರೇವಣ್ಣ, ಮನು, ರಾಜೇಶ್, ಪ್ರಕಾಶ್ ಮುಂತಾದವರು ಉಪಸ್ಥಿತರಿದ್ದರು.

ಬುದ್ಧಿವಾದ ಹೇಳಿದ ವೃದ್ಧನ ಮೇಲೆ ಮಾರಣಾಂತಿಕ ಹಲ್ಲೆ

ಮಂಡ್ಯ,ಜೂ.29(ಮೋಹನ್‌ರಾಜ್)– ಜಗಳವಾಡಬೇಡಿ ಎಂದು ಬುದ್ಧಿವಾದ ಹೇಳಿದ್ದಕ್ಕೆ ರೊಚ್ಚಿಗೆದ್ದ ಯುವಕರ ಗುಂಪು ವೃದ್ಧನ ಮೇಲೆ ಲಾಂಗು, ಮಚ್ಚುಗಳಿಂದ ಮಾರಣಾಂತಿಕವಾಗಿ ಹಲ್ಲೆ ಮಾಡಿರುವ ಘಟನೆ ತಾಲೂಕಿನ ಯಲಿಯೂರು ಕೋಡಿ ಬಳಿ ಮಂಗಳವಾರ ಸಂಜೆ ನಡೆದಿದೆ.

ತಾಲೂಕಿನ ತೂಬಿನಕೆರೆ ಬಳಿಯ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಳಿ ಜಗಳವಾಡುತ್ತಿದ್ದ ಯುವಕರ ಗುಂಪಿನ ಬಳಿ ಬಂದು ಅದೇ ಗ್ರಾಮದ ಶಂಕರೇಗೌಡರು ಬುದ್ಧಿವಾದ ಹೇಳಿದ್ದಾರೆ. ಬುದ್ಧಿವಾದ ಹೇಳಿ ಅಲ್ಲಿಂದ ಹೊರಟ ಅವರನ್ನು ಯಲಿಯೂರು ತನಕ ಹಿಂಬಾಲಿಸಿ ಬಂದ ಇಬ್ಬರು ಯುವಕರು ಲಾಂಗ್‌ನಿಂದ ಹಲ್ಲೆ ನಡೆಸಿದ್ದಾರೆ. ರಸ್ತೆ ಮಧ್ಯೆ ಹಲ್ಲೆ ನಡೆದರೂ ಸಾರ್ವಜನಿಕರು ಹತ್ತಿರ ಬರಲು ಭಯಪಟ್ಟಿದ್ದಾರೆ. ಆದರೆ ಸ್ಥಳದಲ್ಲಿ ಜನರ ಗುಂಪು ಹೆಚ್ಚಾದ ಹಿನ್ನೆಲೆಯಲ್ಲಿ ದುಷ್ಕರ್ಮಿಗಳು ಬೈಕ್ ಬಿಟ್ಟು ಅಲ್ಲಿಂದ ಪರಾರಿಯಾಗಿದ್ದಾರೆ. ಸ್ಥಳೀಯರು ಶಂಕರೇಗೌಡರನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಬೆನ್ನು, ಹೊಟ್ಟೆ ಭಾಗಕ್ಕೆ ಚುಚ್ಚಿರುವುದರಿಂದ ಚಿಕಿತ್ಸೆ ನೀಡಲಾಗುತ್ತಿದೆ. ಪ್ರಕರಣ ದಾಖಲಿಸಿಕೊಂಡಿರುವ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ಕೆಆರ್‌ಎಸ್ ಠಾಣೆಯಲ್ಲಿ ರೌಡಿ ಶೀಟರ್‌ಗಳ ಪರೇಡ್



ಶ್ರೀರಂಗಪಟ್ಟಣ,ಜೂ.29(ವಿನಯ್‌ಕಾರೇಕುರ)– ಕಾನೂನುಬಾಹಿರ ಚಟುವಟಿಕೆಗಳಲ್ಲಿ ರೌಡಿ ಶೀಟರ್‌ಗಳು ತೊಡಗಿರುವುದು ಕಂಡು ಬಂದರೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಕೆ.ಆರ್. ಸಾಗರ ಪೊಲೀಸ್ ಠಾಣೆಯ ಪಿ.ಎಸ್.ಐ ಲಿಂಗರಾಜು ಎಚ್ಚರಿಗೆ ನೀಡಿದರು.

ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಆದೇಶದಂತೆ ಬುಧವಾರ ಠಾಣಾ ವ್ಯಾಪ್ತಿಯ ರೌಡಿ ಶೀಟರ್‌ಗಳ ಪರೇಡ್ ನಡೆಸಿದ ಪಿಎಸ್‌ಐ 50ಕ್ಕೂ ಹೆಚ್ಚು ರೌಡಿ ಶೀಟರ್‌ಗಳು ಹಿಂದೆ ನಡೆಸಿದ ಕೃತ್ಯಗಳ ಬಗ್ಗೆ ಪಶ್ಚಾತ್ತಾಪ ಪಟ್ಟು ಒಳ್ಳೆಯ ಬುದ್ಧಿ ಕಲಿತು ಸಮಾಜದಲ್ಲಿ ಸಾಮಾನ್ಯ ಜನರ ಜೊತೆ ಜೀವನ ನಡೆಸುವುದು ಕಲಿತು ನಿಮ್ಮ ತಂದೆ–ತಾಯಿಗೆ ಒಳ್ಳೆಯ ಮಕ್ಕಳಾಗಿ, ಇಲ್ಲವಾದಲ್ಲಿ ಕಠಿಣಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದರು.

ಬಡಾವಣೆಗೆ ಕೆಂಪೇಗೌಡರ ಹೆಸರು ನಾಮಕರಣ



ಪಾಂಡವಪುರ, ಜೂ.29– ತಾಲೂಕಿನ ಹರಳಹಳ್ಳಿಯ ಗ್ರಾಮದ ಹೊಸ ಬಡಾವಣೆಗೆ ಕೆನ್ನಾಳು ಗ್ರಾಪಂ ವತಿಯಿಂದ ಹೊಸದಾಗಿ ನಾಡಪ್ರಭು ಕೆಂಪೇಗೌಡರ ಹೆಸರು ನಾಮಕರಣ ಮಾಡಿದ ಹಿನ್ನೆಲೆಯಲ್ಲಿ ಕೆಂಪೇಗೌಡ ಬಡಾವಣೆಯ ನಾಮಫಲಕವನ್ನು ಶಾಸಕ ಸಿ.ಎಸ್.ಪುಟ್ಟರಾಜು ಅವರು ಅನಾವರಣಗೊಳಿಸಿದರು.

ಬಳಿಕ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರ ಕೊಡುಗೆ ನಾಡಿಗೆ ಅಪಾರವಾಗಿದೆ. ದೇಶದ ಹಲವಾರು ಬೃಹತ್ ನಗರಗಳ ಪೈಕಿ ಒಂದಾಗಿರುವ ರಾಜಧಾನಿ ಬೆಂಗಳೂರು ಕಟ್ಟಿದ ಮಹಾನ್ ನಾಯಕರು, ಅವರ ಆದರ್ಶಗಳನ್ನು ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಬಡಾವಣೆಯ ಅಭಿವೃದ್ಧಿಗೆ ಪೂರಕವಾಗಿ ಶ್ರಮಿಸಲಾಗುವುದು ಎಂದು ತಿಳಿಸಿದರು.

ಇದೇವೇಳೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹರಳಹಳ್ಳಿ ಗ್ರಾಮದ ಕುಮಾರಸ್ವಾಮಿ ಅವರನ್ನು ಗ್ರಾಪಂ ವತಿಯಿಂದ ಅಭಿನಂದಿಸಲಾಯಿತು.

ಜಿಪಂ ಮಾಜಿ ಸದಸ್ಯ ಎಚ್.ತ್ಯಾಗರಾಜು, ಗ್ರಾಪಂ ಅಧ್ಯಕ್ಷೆ ಶ್ವೇತಾ ಸುರೇಶ್, ಉಪಾಧ್ಯಕ್ಷ ಮೋಹನ್‌ಕುಮಾರ್, ಸದಸ್ಯರಾದ ಎ.ಬಿ.ಚಿದಂಬರ, ಡಿ.ರಾಮಣ್ಣ, ವಿ.ಪ್ರಕಾಶ, ನಂದೀಶ್, ಜ್ಞಾನೇಶ್, ಪಂಕಜಮ್ಮ, ಕಾಂತರಾಜ್, ರಜನಿ, ಇಂದ್ರಮ್ಮ, ಲಕ್ಷ್ಮಿ, ಲೀಲಾ, ದಾಕ್ಷಾಯಿಣಮ್ಮ, ಸಿಂಧು, ಗೀತಾ, ಪಿಡಿಓ ಶ್ರೀನಿವಾಸ್ ಸೇರಿದಂತೆ ಅನೇಕರು ಹಾಜರಿದ್ದರು.

ಖಾಸಗಿ ಆಸ್ಪತ್ರೆಗಳ 779 ಕೋಟಿ ರೂ. ಕೋವಿಡ್ ಬಿಲ್ ಪಾವತಿಸಿದ ರಾಜ್ಯ ಸರ್ಕಾರ

ಬೆಂಗಳೂರು, ಜೂ.29– ರಾಜ್ಯ ಆರೋಗ್ಯ ಇಲಾಖೆಯು ತನ್ನ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಮೂಲಕ ಆಯುಷ್ಮಾನ್ ಭಾರತ್ ಆರೋಗ್ಯ ಅಡಿಯಲ್ಲಿ 2,39,736 ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ರಾಜ್ಯಾದ್ಯಂತ ಖಾಸಗಿ ಆಸ್ಪತ್ರೆಗಳಿಗೆ 779.834 ಕೋಟಿ ರೂ ('779,83,40,000) ಮಂಜೂರು ಮಾಡಿದೆ.

ಮೂರು ಕೋವಿಡ್ ಅಲೆಗಳಲ್ಲಿ ರಾಜ್ಯ ಆರೋಗ್ಯ ಇಲಾಖೆಯು ತನ್ನ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಮೂಲಕ ಆಯುಷ್ಮಾನ್ ಭಾರತ್ ಆರೋಗ್ಯ ಅಡಿಯಲ್ಲಿ 2,39,736 ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ರಾಜ್ಯಾದ್ಯಂತ ಖಾಸಗಿ ಆಸ್ಪತ್ರೆಗಳಿಗೆ 779.834 ಕೋಟಿ ರೂ ('779,83,40,000) ಮಂಜೂರು ಮಾಡಲಾಗಿದೆ ಎಂದು ಆರೋಗ್ಯ ಆಯುಕ್ತ ಡಿ ರಂದೀಪ್ ಹೇಳಿದ್ದಾರೆ.

ಮೊದಲ ಕೋವಿಡ್ ತರಂಗದ ಸಮಯದಲ್ಲಿ, ಮಾರ್ಚ್ 2020 ರಿಂದ ಮಾರ್ಚ್ 2021 ರವರೆಗೆ 1,17,930 ರೋಗಿಗಳಿಗೆ ಚಿಕಿತ್ಸೆ ನೀಡಲು ಆರೋಗ್ಯ ಇಲಾಖೆಯು ಖಾಸಗಿ ಆಸ್ಪತ್ರೆಗಳಿಗೆ 391.26 ಕೋಟಿ ರೂ ಪಾವತಿಸಿದೆ. ಏಪ್ರಿಲ್ 2021 ರಿಂದ ಡಿಸೆಂಬರ್ 2021 ರವರೆಗೆ 1,14,690 ರೋಗಿಗಳ ಚಿಕಿತ್ಸೆಗಾಗಿ ಇಲಾಖೆಯು ಬಿಲ್‌ಗಳನ್ನು ಪಾವತಿಸಿದೆ.

ಒಂದನೇ ಪುಟದಿಂದ

ರೈತರಿಗೆ ಜಿಎಸ್‌ಟಿ ಬರೆ

ಹೊರಗಿಡಲು ವಿನಾಯಿತಿಯ ವ್ಯಾಪ್ತಿಯನ್ನು ಪರಿಷ್ಕರಿಸಲು ಶಿಫಾರಸು ಮಾಡಲಾಗಿದೆ ಎಂದು ಜಿಎಸ್‌ಟಿ ಕೌನ್ಸಿಲ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಬ್ಯಾಂಕ್ ಚೆಕ್‌ಬುಕ್ ವಿತರಣೆ: ಚೆಕ್‌ಗಳನ್ನು (ಸಡಿಲ ಅಥವಾ ಪುಸ್ತಕ ರೂಪದಲ್ಲಿ) ವಿತರಿಸಲು ಬ್ಯಾಂಕುಗಳು ವಿಧಿಸುವ ಶುಲ್ಕದ ಮೇಲೆ ಶೇ.18ರಷ್ಟು ಜಿಎಸ್‌ಟಿ ವಿಧಿಸಲು ಜಿಎಸ್‌ಟಿ ಮಂಡಳಿ ನಿರ್ಧರಿಸಿದೆ. **ಹೋಟೆಲ್ ಕೋಣೆಗಳು:** ಪ್ರಸ್ತುತ ತೆರಿಗೆ ವಿನಾಯಿತಿ ವರ್ಗಕ್ಕೆ ವಿರುದ್ಧವಾಗಿ ಹೋಟೆಲ್ ಕೊಠಡಿಗಳನ್ನು ಶೇ.12ರಷ್ಟು ಜಿಎಸ್‌ಟಿ ಸ್ಲ್ಯಾಬ್ ಅಡಿಯಲ್ಲಿ ದಿನಕ್ಕೆ 1,000 ರೂ.ಗಿಂತ ಕಡಿಮೆ ತರಲು ಜಿಎಸ್‌ಟಿ ಕೌನ್ಸಿಲ್ ನಿರ್ಧರಿಸಿದೆ.

ಆಸ್ಪತ್ರೆಯ ಹಾಸಿಗೆಗಳು: ಆಸ್ಪತ್ರೆಯು ವಿಧಿಸುವ ಪ್ರತಿ ರೋಗಿಗೆ ದಿನಕ್ಕೆ 5000 ರೂ.ಗಿಂತ ಹೆಚ್ಚಿನ ಕೊಠಡಿ ಬಾಡಿಗೆ (ಐಸಿಯು ಹೊರತುಪಡಿಸಿ) ಐಟಿಸಿ ಇಲ್ಲದೆ ಕೊಠಡಿಗೆ ವಿಧಿಸುವ ಮೊತ್ತದವರೆಗೆ ಶೇಕಡಾ 5ರಷ್ಟು ತೆರಿಗೆ ವಿಧಿಸಲಾಗುತ್ತದೆ.

ಎಲ್‌ಇಡಿ ದೀಪಗಳು, ದೀಪಗಳು: ಎಲ್‌ಇಡಿ ದೀಪಗಳು, ಫಿಕ್ಚರ್‌ಗಳು, ಎಲ್‌ಇಡಿ ಲ್ಯಾಂಪ್‌ಗಳ ಬೆಲೆ ಏರಿಕೆಯನ್ನು ಕಾಣಲಿವೆ. ಯಾಕೆಂದರೆ ಜಿಎಸ್‌ಟಿ ಕೌನ್ಸಿಲ್ ಶೇ.12 ರಿಂದ 18ಕ್ಕೆ ತಿದ್ದುಪಡಿಯನ್ನು ಶಿಫಾರಸು ಮಾಡಿದೆ. **ಚಾಕುಗಳು:** ಕತ್ತರಿಸುವ ಬ್ಲೇಡ್‌ಗಳು, ಕಾಗದದ ಚಾಕುಗಳು, ಪೆನ್ಸಿಲ್ ಶಾರ್ಪನರ್‌ಗಳು ಮತ್ತು ಬ್ಲೇಡ್, ಚಮಚಗಳು, ಫೋರ್ಕ್‌ಗಳು, ಲಾಡಲ್‌ಗಳು, ಸ್ಕಿಮ್ಮರ್‌ಗಳು, ಕೇಕ್ ಸರ್ವರ್‌ಗಳು ಇತ್ಯಾದಿಗಳನ್ನು ಶೇ.18ರಷ್ಟು ಜಿಎಸ್‌ಟಿ ಸ್ಲ್ಯಾಬ್ ಅಡಿಯಲ್ಲಿ ಇರಿಸಲಾಗಿದ್ದು, ಇದು ಶೇ.12ರ ಸ್ಲ್ಯಾಬ್‌ನಿಂದ ಹೆಚ್ಚಾಗಿದೆ.

ಪಂಪ್ ಮತ್ತು ಯಂತ್ರಗಳು: ಕೇಂದ್ರಾಪಗಾಮಿ ಪಂಪ್‌ಗಳು, ಆಳವಾದ ಕೊಳವೆ ಬಾವಿ ಟರ್ಬೈನ್ ಪಂಪ್‌ಗಳು, ಸಬ್ ಮರ್ಸಿಬಲ್ ಪಂಪ್‌ಗಳು, ಬೈಸಿಕಲ್ ಪಂಪ್‌ಗಳಂತಹ ನೀರನ್ನು ನಿರ್ವಹಿಸಲು ವಿನ್ಯಾಸಗೊಳಿಸಲಾದ ಜಿಎಸ್‌ಟಿ ಪವರ್ ಚಾಲಿತ ಪಂಪ್‌ಗಳನ್ನು ಶೇ.12 ರಿಂದ ಶೇ.18ಕ್ಕೆ ಹೆಚ್ಚಿಸಲಾಗಿದೆ. ಸ್ವಚ್ಛಗೊಳಿಸಲು, ವಿಂಗಡಿಸಲು ಅಥವಾ ಗ್ರೇಡಿಂಗ್ ಮಾಡಲು ಯಂತ್ರಗಳು, ಬೀಜ, ಧಾನ್ಯದ ಬೇಳೆಕಾಳುಗಳು, ಮಿಲ್ಲಿಂಗ್ ಉದ್ಯಮದಲ್ಲಿ ಅಥವಾ ಏಕದಳ ಧಾನ್ಯಗಳ ಕಾರ್ಯನಿರ್ವಹಣೆ ಇತ್ಯಾದಿಗಳಿಗೆ ಬಳಸುವ ಯಂತ್ರೋಪಕರಣಗಳು, ಪವನ್ ಚಕ್ಕಿ ಅಂದರೆ ಗಾಳಿ ಆಧಾರಿತ ಅಟ್ಟಾ ಚಕ್ಕಿ, ವೆಟ್ ಗ್ರೈಂಡರ್ ಕೂಡ ಈ ಹಿಂದೆ ಶೇ.12ರಷ್ಟಿದ್ದ ಜಿಎಸ್‌ಟಿ ದರವನ್ನು ಶೇ.18ಕ್ಕೆ ಏರಿಸಲಾಗಿದೆ.

ಜಿಎಸ್‌ಟಿ ಪರಿಷ್ಕರಣೆಯ ನಂತರ ಅಗ್ಗವಾಗುವ ವಸ್ತುಗಳ ಪಟ್ಟಿ

ರೋಪ್ ವೇ ರೈಡ್ಸ್: ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ ಸೇವೆಗಳೊಂದಿಗೆ ರೋಪ್‌ವೇಗಳ ಮೂಲಕ ಸರಕು ಮತ್ತು ಪ್ರಯಾಣಿಕರ ಸಾಗಣೆಯ ಮೇಲಿನ ಜಿಎಸ್ಟಿ ದರವನ್ನು ಶೇ.18 ರಿಂದ ಶೇಕಡಾ 5ಕ್ಕೆ ಇಳಿಸಿದೆ. **ಗೂಡ್ಸ್ ಕ್ಯಾರೇಜ್ ಬಾಡಿಗೆ:** ಇಂಧನದ ವೆಚ್ಚವನ್ನು ಪರಿಗಣನೆಗೆ ತೆಗೆದುಕೊಳ್ಳುವ ಆಪರೇಟರ್‌ಗಳೊಂದಿಗೆ ಗೂಡ್ಸ್ ಕ್ಯಾರಿಯೇಜ್ ಅನ್ನು ಬಾಡಿಗೆಗೆ ನೀಡುವ ಜಿಎಸ್‌ಟಿಯನ್ನು ಶೇ.18 ರಿಂದ ಶೇ.12ಕ್ಕೆ ಇಳಿಸಿದೆ.

ಆರ್ಥೋಪೆಡಿಕ್ ಉಪಕರಣಗಳು: ಸ್ಪಂಟ್‌ಗಳು ಮತ್ತು ಇತರ ಮುರಿತದ ಉಪಕರಣಗಳು, ದೇಹದ ಕೃತಕ ಭಾಗಗಳು, ದೋಷ ಅಥವಾ ಅಂಗವೈಕಲ್ಯವನ್ನು ಸರಿದೂಗಿಸಲು, ಸವೆದುಹೋಗುವ ಅಥವಾ ಸಾಗಿಸುವ, ಅಥವಾ ದೇಹದಲ್ಲಿ ಅಳವಡಿಸಲಾದ ಇತರ ಉಪಕರಣಗಳು, ಕಣ್ಣಿನೊಳಗಿನ ಮಸೂರವು ಈಗ ಶೇ. 5ಕ್ಕೆ ಇಳಿಯಲಿದೆ. **ರಕ್ಷಣಾ ವಸ್ತುಗಳು:** ಖಾಸಗಿ ಸಂಸ್ಥೆಗಳು / ಮಾರಾಟಗಾರರಿಂದ ಆಮದು ಮಾಡಿಕೊಳ್ಳುವ ನಿರ್ದಿಷ್ಟ ರಕ್ಷಣಾ ವಸ್ತುಗಳ ಮೇಲಿನ ಐಜಿಎಸ್ಟಿ, ಅಂತಿಮ ಬಳಕೆದಾರ ರಕ್ಷಣಾ ಪಡೆಗಳು ಇದ್ದಾಗ, ರಕ್ಷಣಾ ಪಡೆಗಳಿಗೆ ಜಿಎಸ್ಟಿಯಿಂದ ವಿನಾಯಿತಿ ನೀಡಲಾಗಿದೆ.

ಅದ್ಭುತ ಬಾಲಪ್ರತಿಭೆ ಮೆನ್ಸಾ ಸದಸ್ಯ ರಿಷಿ ಪ್ರಸನ್ನ ಬುದ್ಧಿಶಕ್ತಿಗೆ ಮಾರುಹೋದ ಮಕ್ಕಳು, ಪೋಷಕರು

ಪುಸ್ತಕ ಓದುವುದರಿಂದ ಮಾತ್ರವೇ ಜ್ಞಾನ ವೃದ್ಧಿ



ಮೈಸೂರು, ಜೂ.29(ಎಂಕೆ)– ಹತ್ತಾರು ಪ್ರಶ್ನೆಗಳಿಗೆ ಪಟಪಟನೆ ಉತ್ತರ ನೀಡಿದ 8 ವರ್ಷದ ಖ್ಯಾತ ಬಾಲಪ್ರತಿಭೆ 'ಮೆನ್ಸಾ ಸದಸ್ಯ' ರಿಷಿ ಶಿವ ಪ್ರಸನ್ನ, ನಾನು ಪ್ರತಿನಿತ್ಯ ಪುಸ್ತಕಗಳನ್ನು ಓದುತ್ತೇನೆ. ಹಾಗೆಯೇ ಪ್ರತಿಯೊಬ್ಬರು ಓದಬೇಕು ಎಂಬ ಮಾತು ನೆರೆದಿದ್ದವರು ನಿಬ್ಬೆರಗಾಗುವಂತೆ ಮಾಡಿತು.

ಮೈಸೂರಿನ ಕಲಾಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ರೋಟರಿ ಮೈಸೂರು ಉತ್ತರ ವತಿಯಿಂದ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳಿಂದ ಆಗಮಿಸಿದ್ದ ಸಾವಿರಾರು ವಿದ್ಯಾರ್ಥಿಗಳು, ಪೋಷಕರು ರಿಷಿ ಶಿವ ಪ್ರಸನ್ನನ ಚುರುಕು ಬುದ್ಧಿ, ವಿಷಯ ಜ್ಞಾನ ಕಂಡು ಬೆರಗಾದರು. ಗಣಿತ, ಜೀವಶಾಸ್ತ್ರ, ಪರಿಸರ ಮಾಲಿನ್ಯ, ಆಹಾರ ಪದಾರ್ಥಗಳ ಕುರಿತು ವಿವಿಧ ಶಾಲೆಯ ವಿದ್ಯಾರ್ಥಿಗಳು ಕೇಳಿದ ಹಲವು ಪ್ರಶ್ನೆಗಳಿಗೆ ಉತ್ತರಿಸುವುದರ ಜೊತೆಗೆ ಹೆಚ್ಚಿನ ಮಾಹಿತಿಯನ್ನು ನೀಡಿ, ಓದಿನ ಮಹತ್ವ ತಿಳಿಸಿಕೊಟ್ಟ ರಿಷಿಯ ಜಾಣತನಕ್ಕೆ ಶಿಳ್ಳೆ–ಚಪ್ಪಾಳೆಗಳು ಉಡುಗೊರೆಯಾದವು.

ಪ್ಲಾಸ್ಟಿಕ್ ಬಳಸಬೇಡಿ: ಪರಿಸರ ಮಾಲಿನ್ಯಕ್ಕೆ ಕಾರಣವೇನು? ತಡೆಯುವ ಬಗೆ ಹೇಗೆ? ಎಂದು ವಿದ್ಯಾರ್ಥಿಯೊಬ್ಬ ಕೇಳಿದ ಪ್ರಶ್ನೆಗೆ, ನಾವು ಮುಖ್ಯವಾಗಿ ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ನಿಲ್ಲಿಸಬೇಕು. ಕಾರ್ಖಾನೆಗಳು, ವಾಹನಗಳ ದಟ್ಟಣೆಯಿಂದ ವಾತಾವರಣದಲ್ಲಿ ಇಂಗಾಲ ಡೈ ಆಕ್ಸೈಡ್ ಹೆಚ್ಚಾಗಿ ಉಷ್ಣಾಂಶವೂ ಹೆಚ್ಚುತ್ತಿದೆ. ಇದರಿಂದ ಪರಿಸರದ ಮೇಲೆ ಭಾರೀ ಪರಿಣಾಮ ಉಂಟಾಗುತ್ತಿದೆ. ಆದ್ದರಿಂದ ಪೆಟ್ರೋಲ್, ಡೀಸೆಲ್ ವಾಹನಗಳ ಬಳಕೆ ಕಡಿಮೆ ಮಾಡಿ, ಪರಿಸರ ಹಾನಿ ಉಂಟುಮಾಡುವ ನಮ್ಮ ಹವ್ಯಾಸಗಳನ್ನು ನಿಲ್ಲಿಸಬೇಕು. ಹೆಚ್ಚಾಗಿ ವಿದ್ಯುತ್ ಚಾಲಿತ ವಾಹನಗಳನ್ನು ಬಳಸಬೇಕು. ನಾನು ಕೂಡ ಮುಂದೆ ವಿದ್ಯುತ್ ಚಾಲಿತ ವಾಹನವನ್ನೇ ಬಳಸುತ್ತೇನೆ ಎಂಬ ರಿಷಿ ಮಾತಿಗೆ ಅಪಾರ ಮೆಚ್ಚುಗೆ ವ್ಯಕ್ತವಾಯಿತು.

ವಿವಿಧ ಬಣ್ಣಗಳ ರಕ್ತದ ಮಾಹಿತಿ ನೀಡಿದ ರಿಷಿ: ಮನುಷ್ಯನ ರಕ್ತ ಕೆಂಪು ಬಣ್ಣದಲ್ಲಿರುವುದೇಕೆ? ಎಂಬ ಪ್ರಶ್ನೆಗೆ ಉತ್ತರಿಸಿದ ರಿಷಿ ಪ್ರಸನ್ನ, ಹಿಮೊಗ್ಲೋಬಿನ್‌ನಿಂದ ಕೂಡಿರುವ ಮನುಷ್ಯನ ರಕ್ತ ಕೆಂಪು ಬಣ್ಣದಲ್ಲಿರುತ್ತದೆ. ಅದರಂತೆ ಹಸಿರು, ಬಿಳಿ ಬಣ್ಣದ ರಕ್ತಗಳಿದ್ದು, ಜಿರಳೆಯಲ್ಲಿ ಬಿಳಿ ರಕ್ತ ಇರಲಿದೆ ಎಂದು ಮಾಹಿತಿ ನೀಡುವ ಮೂಲಕ ಕೇಳಿದ ಪ್ರಶ್ನೆಗೆ ಅಗತ್ಯಕ್ಕಿಂತಲೂ ಹೆಚ್ಚಿನ ಉತ್ತರ ನೀಡಿ ಗಮನ ಸೆಳೆದ ರಿಷಿಗೆ ನೆರೆದಿದ್ದವರು ಅಭಿಮಾನ ತೋರಿದರು.

ಬೇಗ ಕಲಿತು ಅಷ್ಟೇ ಬೇಗ ಮರೆಯುತ್ತೇವೆ: ಬಳಿಕ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಮಾತನಾಡಿ, ಬಹಳ ಬೇಗ ಎಲ್ಲವನ್ನು ತಿಳಿದುಕೊಳ್ಳುವ ಆತುರದಲ್ಲಿ ಕಲಿತದ್ದನ್ನು ಕಲಿತಷ್ಟೇ ವೇಗವಾಗಿ ಮರೆಯುತ್ತಿದ್ದೇವೆ ನಿರಂತರ ಓದುವುದು ನಿತ್ಯ ಹವ್ಯಾಸವಾಗಬೇಕು ಎಂದು ಹೇಳಿದರು.

ನಿರಂತರ ಓದು, ಓದಿನಿಂದ ಜ್ಞಾನ ಶೇಖರಣೆ ಮತ್ತು ಶೇಖರಣೆ ಮಾಡಿಟ್ಟುಕೊಂಡ ಜ್ಞಾನವನ್ನು ಇತರರಿಗೂ ನೀಡುವುದು ಅಥವಾ ತಿಳಿಸಿಕೊಡುವುದು ಸುಲಭವಲ್ಲ. ನಿತ್ಯ ಪರಿಶ್ರಮ ಮತ್ತು ಏಕಾಗ್ರತೆಯಿಂದ ಮಾತ್ರ ಸಾಧ್ಯ. ಬಾಲ ಪ್ರತಿಭೆ ರಿಷಿ ಶಿವಪ್ರಸನ್ನ ಆಂಡ್ರಾಯಿಡ್ ಡೆವಲಪ್‌ಮೆಂಟ್ ಬಗ್ಗೆ ಮಾತನಾಡಿದ್ದನ್ನು ಕೇಳಿ ಕಂಪ್ಯೂಟರ್ ಸೈನ್ಸ್ ಓದಿರುವ ನಾನು ಕೂಡ ಬೆರಗಾಗಿದ್ದೇನೆ ಎಂದರು.

ಇದೇ ವೇಳೆ ಬಾಲ ಪ್ರತಿಭೆ ರಿಷಿ ಶಿವ ಪ್ರಸನ್ನನನ್ನು ರೋಟರಿ ಮೈಸೂರು ಉತ್ತರ ವತಿಯಿಂದ ಸನ್ಮಾನಿಸಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ರೋಟರಿ ಜಿಲ್ಲೆ 3181ರ ಜಿಲ್ಲಾ ಗವರ್ನರ್ ಎ.ಆರ್. ರವೀಂದ್ರಭಟ್, ರೋಟರಿ ಮೈಸೂರು ಉತ್ತರ ಅಧ್ಯಕ್ಷ ಎಲ್.ಚನ್ನಬಸವರಾಜು, ರಂಗಕರ್ಮಿ ರಾಜಶೇಖರ ಕದಂಬ ಮತ್ತಿತರರು ಉಪಸ್ಥಿತರಿದ್ದರು.

ದೇವರು ವರ ಕೊಡುವುದಿಲ್ಲ, ಓದಿಸಬೇಕು...

ನಮ್ಮ ಮಕ್ಕಳು ಜಾಣರಾಗಲು ದೇವರು ವರ ಕೊಡುತ್ತಾನೆ ಎಂದು ಮಕ್ಕಳನ್ನು ಓದಿಸದೆ ಇರುವವರು ಸಾಕಷ್ಟು ಜನರಿದ್ದಾರೆ. ದೇವರು ವರ ಕೊಡುವುದಿಲ್ಲ. ವೈಯಕ್ತಿಕ ಶ್ರಮದಿಂದ ಓದಿ–ಕಲಿತರಷ್ಟೇ ಸಾಧನೆ ಸಾಧ್ಯ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿಕೊಟ್ಟರು.

ಮಕ್ಕಳಲ್ಲಿ ಅಂತರ್ಗತವಾಗಿರುವ ಪ್ರತಿಭೆಯನ್ನು ಗುರ್ತಿಸಿ, ಪ್ರೋತ್ಸಾಹಿಸುವುದು ಪೋಷಕರ ಮುಖ್ಯ ಕರ್ತವ್ಯವಾಗಿದೆ. ಓದುವುದು, ಓದಿದ್ದನ್ನು ಮನವರಿಕೆ ಮಾಡಿಕೊಳ್ಳುವುದು ಹಾಗೂ ಮನವರಿಕೆ ಮಾಡಿಕೊಂಡದ್ದನ್ನು ಹೇಗೆ ಪ್ರಸ್ತುತ ಪಡಿಸಬೇಕು ಎಂಬುದನ್ನು ರಿಷಿ ಶಿವ ಪ್ರಸನ್ನ ಪ್ರತ್ಯಕ್ಷವಾಗಿ ತೋರಿಸಿದ್ದಾನೆ. ಬಹುದೊಡ್ಡಮಟ್ಟದಲ್ಲಿ ವಿಕಾಸ ಹೊಂದುವ ಸಾಮರ್ಥ್ಯ ರಿಷಿಯಲ್ಲಿದ್ದು, ಅವನಿಂದ ಹಲವು ಸಾಧನೆಗಳಾಗಲಿ ಎಂದು ಶುಭ ಹಾರೈಸಿದರು.

ಬಸ್ ಪಾಸ್ ಅವಧಿ ವಿಸ್ತರಿಸಲು ಆಗ್ರಹಿಸಿ ಎಬಿವಿಪಿ ಪ್ರತಿಭಟನೆ



ಮೈಸೂರು,ಜೂ.29(ಆರ್‌ಕೆಬಿ)– ಶೈಕ್ಷಣಿಕ ವರ್ಷ ಮುಗಿಯುವವರೆಗೆ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಯಾವುದೇ ಅಧಿಕ ಶುಲ್ಕ ವಿಧಿಸದೇ ಬಸ್ ಪಾಸ್ ಕಾಲಾವಧಿ ವಿಸ್ತರಿಸಬೇಕು ಎಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಆಶ್ರಯದಲ್ಲಿ ಬುಧವಾರ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಕೋವಿಡ್ ನಂತರದಲ್ಲಿ ಶಾಲಾ ಕಾಲೇಜುಗಳು ಪ್ರಾರಂಭವಾಗಿ ಶಿಕ್ಷಣ ವ್ಯವಸ್ಥೆ ಈಗಷ್ಟೇ ಸುಧಾರಿಸುತ್ತಿದೆ. ಜೂನ್ ತಿಂಗಳಲ್ಲಿ ಪ್ರಾರಂಭವಾಗಬೇಕಾದ ನೂತನ ಶೈಕ್ಷಣಿಕ ವರ್ಷ ಮೂರು ತಿಂಗಳ ಕಾಲ ವಿಳಂಬವಾಗಿ ಪ್ರಾರಂಭವಾಗುತ್ತಿದೆ. ಪ್ರಸ್ತುತ ಪದವಿ ಓದುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷ ಅಕ್ಟೋಬರ್‌ನಲ್ಲಿ ಮುಕ್ತಾಯವಾಗಲಿದೆ. ಮತ್ತೆ ಪಾಸ್ ಮಾಡಿಸಲು ಶುಲ್ಕ ವಿಧಿಸಿದರೆ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಟಿಸಿ ಸಾರಿಗೆ ವ್ಯವಸ್ಥೆಯನ್ನೇ ಅವಲಂಬಿಸಿರುವ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಸ್ ಪಾಸ್ ವ್ಯವಸ್ಥೆ ಬಹಳ ಸಹಕಾರಿಯಾಗಿದೆ. ಆದರೆ, ಈ ವರ್ಷ ಶೈಕ್ಷಣಿಕ ವರ್ಷ ವಿಳಂಬವಾಗಿದ್ದು, ವಿದ್ಯಾರ್ಥಿಗಳ ಬಸ್ ಪಾಸ್ ಅವಧಿ ಶೈಕ್ಷಣಿಕ ವರ್ಷ ಕೊನೆಗೊಳ್ಳುವ ಮೊದಲೇ ಮುಕ್ತಾಯವಾಗುತ್ತಿದೆ. ಹೀಗಾಗಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಶೈಕ್ಷಣಿಕ ವರ್ಷ ಮುಗಿಯುವವರೆಗೆ ಯಾವುದೇ ರೀತಿಯ ಶುಲ್ಕ ವಿಧಿಸದೇ ಬಸ್ ಪಾಸ್ ಅವಧಿ ವಿಸ್ತರಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಎಬಿವಿಪಿ ಮೈಸೂರು ನಗರ ಸಂಘಟನಾ ಕಾರ್ಯದರ್ಶಿ ಬಸವರಾಜು, ಕಾರ್ಯದರ್ಶಿ ಶಿವ, ಉಮೇಶ್, ನಮಿತ, ಸುದೀಪ್, ಚಿರಂತ್ ಇನ್ನಿತರರು ಭಾಗವಹಿಸಿದ್ದರು.

ತಂಪು ಪಾನೀಯ ಯಂತ್ರೋಪಕರಣ ಪೂರೈಸುವುದಾಗಿ ಚೆನ್ನೈ ಮೂಲದ ಕಂಪನಿ ವಂಚನೆ

ಮೈಸೂರು, ಜೂ.29–ಸೋಡಾ ಮತ್ತು ಪಾನೀಯ ತಯಾರಿಸುವ ಯಂತ್ರೋಪಕರಣಗಳನ್ನು ಪೂರೈಸುವುದಾಗಿ ಚೆನ್ನೈ ಮೂಲದ ಕಂಪನಿಯೊಂದು 4 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಕಲ್ಯಾಣಗಿರಿ ನಿವಾಸಿ ಅಬ್ರಾರ್ ಮಹಮ್ಮದ್ ಅವರು ಆಹದ್ ಬ್ರೇವರೇಜಸ್ ಎಂಬ ಕಾರ್ಖಾನೆ ನಡೆಸುತ್ತಿದ್ದು, ತನ್ನ ಕಾರ್ಖಾನೆಗಾಗಿ ಸೋಡಾ ಮತ್ತು ತಂಪು ಪಾನೀಯ ತಯಾರಿಸುವ ಯಂತ್ರೋಪಕರಣ ಖರೀದಿಗಾಗಿ ವೆಬ್‌ಸೈಟ್‌ನಲ್ಲಿ ಹುಡುಕಾಟ ನಡೆಸಿದ್ದಾರೆ. ಚೆನ್ನೈನ ಕೆನಡಿಯನ್ ಕ್ರಿಸ್ಟಲಿನ್ ವಾಟರ್ ಇಂಡಿಯಾ ಲಿಮಿಟೆಡ್ ಕಂಪನಿಯನ್ನು ಸಂಪರ್ಕಿಸಿದಾಗ ಮುರುಗನ್ ಎಂಬಾತ ತನ್ನನ್ನು ಕಂಪನಿಯ ಉಪಾಧ್ಯಕ್ಷ ಎಂದು ಪರಿಚಯಿಸಿಕೊಂಡು ಅಬ್ರಾರ್ ಮಹಮ್ಮದ್ ಅವರನ್ನು 2020ರಲ್ಲಿ ಭೇಟಿ ಮಾಡಿದ್ದಾನೆ.

ಯಂತ್ರೋಪಕರಣಗಳಿಗಾಗಿ 30.75 ಲಕ್ಷ ರೂ.ಗಳ ಕೊಟೇಷನ್ ಅನ್ನು ಆತ ನೀಡಿದ್ದು, ಮುಂಗಡ ಹಣವಾಗಿ 2020ರ ಜೂ.18ರಿಂದ ಆಗಸ್ಟ್ 3ರವರೆಗೆ ಹಂತ ಹಂತವಾಗಿ 4 ಲಕ್ಷ ರೂ.ಗಳನ್ನು ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ನಂತರ ಅಬ್ರಾರ್ ಅವರು ಚೆನ್ನೈನಲ್ಲಿರುವ ಕಂಪನಿಗೆ ಹೋದಾಗ ಕಂಪನಿಯ ನಿರ್ದೇಶಕ ಎಂದು ಪರಿಚಯಿಸಿಕೊಂಡ ಸುಶೀಲ್‌ಕುಮಾರ್ ಎಂಬಾತ ಈಗ ಕೋವಿಡ್ ಮಾರ್ಗಸೂಚಿ ಇರುವುದರಿಂದ ಕಾರ್ಖಾನೆಯನ್ನು ಮುಚ್ಚಲಾಗಿದೆ ಎಂದು ತಿಳಿಸಿ, ಮುರುಗನ್ ಎಂಬಾತ ನಮ್ಮ ಮಾರ್ಕೆಟಿಂಗ್ ವ್ಯಕ್ತಿ ಅಷ್ಟೇ. ಅವನಿಗೆ ಏಕೆ ಹಣ ನೀಡಿದ್ದೀರಿ ಎಂದು ಪ್ರಶ್ನಿಸಿ, ಅಗ್ರಿಮೆಂಟ್‌ಗೆ ಸಹಿ ಮಾಡಿದರೆ ಯಂತ್ರೋಪಕರಣ ತೋರಿಸುವುದಾಗಿ ಹೇಳಿದ್ದಾನೆ. ಆದರೆ ಅಗ್ರಿಮೆಂಟ್‌ನಲ್ಲಿ ಸಹಿಗಳ ವ್ಯತ್ಯಾಸ ಇದ್ದುದ್ದರಿಂದ ಅಬ್ರಾರ್ ಅವರು ತಮ್ಮ ಹಣವನ್ನು ವಾಪಸ್ ಕೊಡಬೇಕೆಂದು ಕೇಳಿದಾಗ ಮುರುಗನ್ ಮತ್ತು ಸುಶೀಲ್‌ಕುಮಾರ್ ಹಣ ನೀಡುವುದಾಗಿ ಒಪ್ಪಿಕೊಂಡಿದ್ದು, ಸಬೂಬು ಹೇಳುತ್ತಾ ಹಣ ನೀಡದೆ ವಂಚಿಸಿದ್ದಾರೆ. ನೀಡಿದ ದೂರನ್ನು ದಾಖಲಿಸಿಕೊಂಡಿರುವ ಉದಯಗಿರಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಚಾಮುಲ್‌ನಲ್ಲಿ ಅರಳಿದ ಕಮಲ

ಅಧ್ಯಕ್ಷರಾಗಿ ವೈ.ಸಿ.ನಾಗೇಂದ್ರ ಆಯ್ಕೆ, ಶಾಸಕ ಪುಟ್ಟರಂಗಶೆಟ್ಟಿ ಪುತ್ರಿಗೆ ಸೋಲು



ಚಾಮರಾಜನಗರ, ಜೂ.29(ಎಸ್‌ಎಸ್)– ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಚಾಮುಲ್)ದ ಅಧಿಕಾರವನ್ನು ಬಿಜೆಪಿ ತನ್ನ ತೆಕ್ಕೆಗೆ ಹಾಕಿ ಕೊಳ್ಳುವಲ್ಲಿ ಯಶಕಂಡಿದೆ. ಪಕ್ಷದ ಬೆಂಬಲಿತ ಅಭ್ಯರ್ಥಿ ಯಳಂದೂರು ತಾಲೂಕಿನ ಯರಗಂಬಳ್ಳಿ ಗ್ರಾಮದ ವೈ.ಸಿ.ನಾಗೇಂದ್ರ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ಚಾಮುಲ್‌ನಲ್ಲಿ ಕಮಲ ಅರಳಿಸಿದ್ದಾರೆ.

ಚಾಮರಾಜನಗರ ತಾಲೂಕಿನ ಕುದೇರು ಗ್ರಾಮದಲ್ಲಿರುವ ಚಾಮುಲ್ ಆಡಳಿತ ಕಚೇರಿಯಲ್ಲಿ ಬುಧವಾರ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ವೈ.ಸಿ.ನಾಗೇಂದ್ರ ನಾಮಪತ್ರ ಸಲ್ಲಿಸಿದ್ದರು. ಇವರಿಗೆ ಹೆಚ್.ಎಸ್.ಬಸವರಾಜು ಸೂಚಕರಾಗಿದ್ದರು. ಎಂ.ಪಿ.ಸುನೀಲ್ ಅನುಮೋದಕರಾಗಿದ್ದರು.

ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಪುತ್ರಿ ಶೀಲಾ ಪುಟ್ಟರಂಗಶೆಟ್ಟಿ ಉಮೇದುವಾರಿಕೆ ಸಲ್ಲಿಸಿದ್ದರು. ಇವರಿಗೆ ಹೆಚ್.ಎಸ್.ನಂಜುಂಡ ಪ್ರಸಾದ್ ಸೂಚಕರಾಗಿದ್ದರೆ, ಎಂ.ನಂಜುಂಡ ಸ್ವಾಮಿ ಅನುಮೋದಕರಾಗಿದ್ದರು. ಇವರಿಬ್ಬರಲ್ಲಿ ಯಾರೊಬ್ಬರೂ ನಾಮಪತ್ರ ಹಿಂಪಡೆಯದ ಕಾರಣ ಚುನಾವಣೆ ನಡೆಯಿತು.

ವೈ.ಸಿ.ನಾಗೇಂದ್ರ ಅವರಿಗೆ 7 ಮತಗಳು, ಶೀಲಾ ಪುಟ್ಟರಂಗಶೆಟ್ಟಿ ಅವರಿಗೆ 6 ಮತಗಳು ಲಭಿಸಿದವು. ಒಂದು ಮತದ ಅಂತರದಿಂದ ವೈ.ಸಿ.ನಾಗೇಂದ್ರ ಗೆಲುವು ಸಾಧಿಸಿ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಕೆ.ಎ. ರಾಜೇಂದ್ರ ಪ್ರಸಾದ್ ಘೋಷಿಸಿದರು.

ಎಲ್ಲರೂ ಹಾಜರು: ಚಾಮುಲ್ ಅಧ್ಯಕ್ಷರ ಚುನಾವಣೆಯಲ್ಲಿ ಗೆಲುವು ಸಾಧಿಸಿದ 9 ನಿರ್ದೇಶಕರು, ಒಬ್ಬ ನಾಮನಿರ್ದೇಶಕ ಹಾಗೂ ಮೂವರು ಅಧಿಕಾರಿಗಳಿಗೆ ಮತದಾನ ಮಾಡುವ ಹಕ್ಕು ಇತ್ತು. ಇವರೆಲ್ಲರೂ ಸಹ ಇಂದಿನ ಚುನಾವಣೆಯಲ್ಲಿ ಹಾಜರಾಗಿ ಮತ ಚಲಾಯಿಸಿದರು.

1 ಮತದ ರೋಚಕ ಗೆಲುವು: ಬಿಜೆಪಿ ಬೆಂಬಲಿತ ಅಭ್ಯರ್ಥಿಯನ್ನು ನಿರೀಕ್ಷೆಯಂತೆ ವೈ.ಸಿ.ನಾಗೇಂದ್ರ, ಹೆಚ್.ಎಸ್.ಬಸವರಾಜು, ಎಂ.ಪಿ.ಸುನೀಲ್, ನಾಮನಿರ್ದೇಶನ ಸದಸ್ಯ ಅಯ್ಯನಪುರ ಶಿವಕುಮಾರ್ ಹಾಗೂ ಮೂವರು ಅಧಿಕಾರಿಗಳು ಬೆಂಬಲಿಸುವ ಮೂಲಕ 7 ಮತಗಳು ಬರಲು ಕಾರಣ ರಾಗಿದ್ದಾರೆ. ಹೀಗಾಗಿ 1 ಮತದ ಅಂತರದಲ್ಲಿ ಪಕ್ಷದ ಬೆಂಬಲಿತ ಅಭ್ಯರ್ಥಿ ವೈ.ಸಿ.ನಾಗೇಂದ್ರ ರೋಚಕ ಗೆಲುವು ಕಂಡಿದ್ದಾರೆ.

ಕಾಂಗ್ರೆಸ್‌ಗೆ ಸೋಲು: ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿದ್ದ ಶೀಲಾ ಪುಟ್ಟರಂಗಶೆಟ್ಟಿ ಅವರನ್ನು ನಿರ್ದೇಶಕರಾದ ಮಧುವನ ಹಳ್ಳಿ ನಂಜುಂಡಸ್ವಾಮಿ, ಶಾಹುಲ್ ಅಹ ಮ್ಮದ್(ತಾರೀಖ್), ಹೆಚ್.ಎಸ್.ನಂಜುಂಡ ಪ್ರಸಾದ್, ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿದ್ದ ಸದಾಶಿವಮೂರ್ತಿ ಹಾಗೂ ಜೆಡಿಎಸ್ ಬೆಂಬಲಿತ ಎಸ್.ಮಹಾದೇವ ಸ್ವಾಮಿ(ಉದ್ದೂರು ಪ್ರಸಾದ್) ಬೆಂಬಲಿಸಿದರು ಎನ್ನಲಾಗಿದೆ. ಹೀಗಾಗಿ ಶೀಲಾ ಪುಟ್ಟರಂಗ ಶೆಟ್ಟಿ ಅವರಿಗೆ (ಅವರ ಮತ ಸೇರಿ) 6 ಮತಗಳು ದೊರಕಿದವು. 1 ಮತದ ಅಂತರದಲ್ಲಿ ಶೀಲಾ ಅವರು ಸೋತರು. ಈ ಮೂಲಕ ತಮ್ಮ ಮಗಳನ್ನು ಚಾಮುಲ್ ಅಧ್ಯಕ್ಷರಾಗಿ ಮಾಡಬೇಕೆಂಬ ಶಾಸಕ ಪುಟ್ಟರಂಗಶೆಟ್ಟಿ ಅವರ ಕನಸು ನುಚ್ಚುನೂರಾಯಿತು.

ಜನಜಂಗುಳಿ: ಚಾಮುಲ್ ಅಧ್ಯಕ್ಷರ ಚುನಾವಣೆಯ ಹಿನ್ನೆಲೆಯಲ್ಲಿ ಚಾಮುಲ್ ಆವರಣದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರು ಭಾರೀ ಸಂಖ್ಯೆಯಲ್ಲಿ ನೆರೆದಿದ್ದರು. ಬಿಜೆಪಿ ಪರವಾಗಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಜಿಲ್ಲಾ ಪ್ರಭಾರಿ ರಾಜೇಂದ್ರ, ಮಾಜಿ ಎಂಎಲ್‌ಸಿ ಸಿದ್ದರಾಜು, ಶಾಸಕ ಸಿ.ಎಸ್.ನಿರಂಜನ ಕುಮಾರ್, ಮಾಜಿ ಶಾಸಕ ಜಿ.ಎನ್.ನಂಜುಂಡ ಸ್ವಾಮಿ, ಹಾಸನ ಪ್ರಭಾರಿ ನಿಜಗುಣರಾಜು ಸೇರಿದಂತೆ ಇತರ ನಾಯಕರು ಆಗಮಿಸಿದ್ದರು.

ಕಾಂಗ್ರೆಸ್ ಪರವಾಗಿ ಶಾಸಕ ಸಿ.ಪುಟ್ಟ ರಂಗಶೆಟ್ಟಿ, ಜಿಲ್ಲಾ ಅಧ್ಯಕ್ಷ ಪಿ.ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ರಾಜ್ಯ ಕನಿಷ್ಠ ವೇತನಾ ಸಲಹಾ ಸಮಿತಿ ಮಂಡಳಿ ಮಾಜಿ ಅಧ್ಯಕ್ಷ ಆರ್.ಉಮೇಶ್, ಸೇರಿದಂತೆ ಇತರರು ಆಗಮಿಸಿದ್ದರು.

ಜಾಗ ಖಾಲಿ: ಚುನಾವಣೆ ನಡೆದು 1 ಮತದ ಅಂತರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಸೋತರು ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಶಾಸಕ ಪುಟ್ಟರಂಗಶೆಟ್ಟಿ ಸೇರಿದಂತೆ ಆ ಪಕ್ಷದ ಎಲ್ಲಾ ನಾಯಕರು ಚಾಮುಲ್ ಆವರಣದಿಂದ ಕಾಲ್ಕಿತ್ತರು.

ವಿಜಯೋತ್ಸವ: ವೈ.ಸಿ. ನಾಗೇಂದ್ರ ಗೆಲುವು ಸಾಧಿಸುತ್ತಿದ್ದಂತೆಯೇ ಆ ಪಕ್ಷ ಮುಖಂಡರು ಅವರಿಗೆ ಹಾರ ಹಾಕಿ ಅಭಿನಂದಿಸಿದರು.

ಬಿಜೆಪಿಯ ಅಚ್ಚರಿ ಆಯ್ಕೆ ...

ಚಾಮುಲ್ ಅಧ್ಯಕ್ಷರ ಚುನಾವಣೆಗೆ ಬಿಜೆಪಿ ತನ್ನ ಬೆಂಬಲಿತ ಅಭ್ಯರ್ಥಿಯಾಗಿ ಹಿರಿಯರಾದ ಹೆಚ್.ಎಸ್.ಬಸವರಾಜುರನ್ನು ಕಣಕ್ಕೆ ಇಳಿಸಲಿದೆ ಎನ್ನಲಾಗಿತ್ತು ಆದರೆ ಕೊನೆ ಕ್ಷಣದಲ್ಲಿ ವೈ.ಸಿ.ನಾಗೇಂದ್ರರನ್ನು ಆಯ್ಕೆ ಮಾಡುವ ಮೂಲಕ ಅಚ್ಚರಿ ಮೂಡಿಸಿತು.

ಬಿಜೆಪಿ ಬೆಂಬಲಿತರಾಗಿ ಗೆಲುವು ಸಾಧಿಸಿದ್ದ ವೈ.ಸಿ.ನಾಗೇಂದ್ರ, ಹೆಚ್.ಎಸ್.ಬಸವ ರಾಜು ಹಾಗೂ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಗೆದ್ದಿದ್ದ ಎಂ.ಪಿ.ಸುನೀಲ್ ಈ ಮೂವರು ಅಧ್ಯಕ್ಷ ಸ್ಥಾನಕ್ಕೆ ಪಟ್ಟು ಹಿಡಿದಿದ್ದರು ಎನ್ನಲಾಗಿದೆ. ಈ ವೇಳೆ ಪಕ್ಷದ ಹಿರಿಯ ಸದಸ್ಯರು ಯಾರು ಎಂಬ ಪ್ರಶ್ನೆ ಎದುರಾದಾಗ ವೈ.ಸಿ.ನಾಗೇಂದ್ರ ಅವರು ಹೆಸರು ಮುಂಚೂಣಿಗೆ ಬಂದಿದೆ. ಈ ಮಾನದಂಡದ ಮೇಲೆ ಅಧ್ಯಕ್ಷ ಅಭ್ಯರ್ಥಿ ಆಯ್ಕೆ ನಡೆಯಿತು ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ವೈ.ಸಿ.ನಾಗೇಂದ್ರ ಅಧ್ಯಕ್ಷರಾಗುತ್ತಾರೆ ಎಂದು ಯಾರೂ ಸಹ ಊಹಿಸಿರಲಿಲ್ಲ. ಅವರ ಆಯ್ಕೆ ಎಲ್ಲರಿಗೂ ಆಶ್ಚರ್ಯ ತರಿಸಿದೆ. ಯಳಂದೂರು ತಾಲೂಕಿನ ಒಂದು ಸ್ಥಾನಕ್ಕೆ ಸ್ಪರ್ಧಿಸಿದ್ದ ವೈ.ಸಿ.ನಾಗೇಂದ್ರ ಅವರು ತಮ್ಮ ಪ್ರತಿಸ್ಪರ್ಧಿ ಅಭ್ಯರ್ಥಿಯಾಗಿದ್ದ ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್‌ರನ್ನು ಕೇವಲ 1 ಮತದ ಅಂತರದಿಂದ ಸೋಲಿಸಿ ನಿರ್ದೇಶಕರಾಗಿ ಆಯ್ಕೆ ಆಗಿದ್ದರು. ಈಗ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ರೈತರು ಹಾಗೂ ಹಾಲಿನ ಡೈರಿಗಳ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸುತ್ತೇನೆ. ಸರ್ಕಾರ ಹಾಗೂ ಹಾಲು ಒಕ್ಕೂಟದ ಯೋಜನೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಪಡೆದು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

–ವೈ.ಸಿ.ನಾಗೇಂದ್ರ,
ಚಾಮುಲ್ ನೂತನ ಅಧ್ಯಕ್ಷ,

ಬಿಜೆಪಿ ಮಾನ ಕಾಪಾಡಿದ ಸುನೀಲ್

ಚಾಮುಲ್ ಅಧಿಕಾರವನ್ನು ಬಿಜೆಪಿ ಬೆಂಬಲಿತರು ಹಿಡಿಯಲು ಪಕ್ಷದ ಬಂಡಾಯ ಅಭ್ಯರ್ಥಿ ಎಂ.ಪಿ.ಸುನೀಲ್ ಕಾರಣರಾಗಿದ್ದಾರೆ!

ಗುಂಡ್ಲುಪೇಟೆ ತಾಲೂಕಿನಿಂದ ಗೆಲುವು ಸಾಧಿಸಿದ್ದ ಎಂ.ಪಿ.ಸುನೀಲ್ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ವೈ.ಸಿ.ನಾಗೇಂದ್ರ ಅವರನ್ನು ಬೆಂಬ ಲಿಸಿದ್ದಾರೆ. ಹೀಗಾಗಿ ಅವರಿಗೆ 7 ಮತಗಳು ಲಭಿಸಿ ಅಧ್ಯಕ್ಷರಾಗಿ ಆಯ್ಕೆಯಾದರು.

ಚಾಮುಲ್‌ನಲ್ಲಿ ಬಿಜೆಪಿಯ ಕಮಲ ಅರಳಿಸಲು ಪಕ್ಷದ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ಸುನೀಲ್ ಕಾರಣ ಎಂಬುದು ಸಾಬೀತಾಗಿದೆ.

ಅಸಮಾಧಾನ ಹೊರಹಾಕಿದ ಬಸವರಾಜು

ಚಾಮರಾಜನಗರ: ಚಾಮುಲ್‌ನ ಬಿಜೆಪಿ ಬೆಂಬಲಿತ ನಿರ್ದೇಶಕ ಹೆಚ್.ಎಸ್.ಬಸವರಾಜು ಅವರಿಗೆ ಅಧ್ಯಕ್ಷ ಸ್ಥಾನ ಕೈತಪ್ಪಿದ್ದಕ್ಕೆ ಬಹಿರಂಗವಾಗಿಯೇ ತಮ್ಮ ಅಸಮಾಧಾನ ಹೊರಹಾಕಿದರು.

ಅಧ್ಯಕ್ಷರಾಗಿ ವೈ.ಸಿ.ನಾಗೇಂದ್ರ ಆಯ್ಕೆ ಆಗುತ್ತಿದ್ದಂತೆಯೇ ಹೊರ ಬಂದ ಹೆಚ್.ಎಸ್.ಬಸವರಾಜು ಅವರು, ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಅವರಿಗೆ ಹಸ್ತಲಾಘವ ಮಾಡಿ, ನಿಮ್ಮ ಮಾತಿನಂತೆ ನಡೆದುಕೊಂಡಿದ್ದೇನೆ. ತಮ್ಮ ಮಾತನ್ನು ಮುಂದೆ ಉಳಿಸಿಕೊಳ್ಳಬೇಕು ಎಂದರು. ಈ ವೇಳೆ ಅಲ್ಲಿದ್ದ ಪಕ್ಷದ ಮುಖಂಡ ರೊಬ್ಬರು, ಸದ್ಯ ಈ ಬಗ್ಗೆ ಮಾತು ಬೇಡ ಎಂದರು. ಇದಕ್ಕೆ ಕೆರಳಿದ ಬಸವರಾಜು, ನಾನು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇನೆ. ನಾನು ಮನಸ್ಸು ಮಾಡಿದ್ದರೆ ಈ ಫಲಿತಾಂಶ ತಲೆಕೆಳ ಕಾಗುತ್ತಿತ್ತು ಎಂದು ಬಹಿರಂಗವಾಗಿಯೇ ತಮ್ಮ ಆಕ್ರೋಶ ಹೊರ ಹಾಕಿದರು. ಈ ವೇಳೆ ಅಲ್ಲಿದ್ದ ಮುಖಂಡರು, ಬಸವ ರಾಜು ಅವರನ್ನು ಸಮಾಧಾನಪಡಿಸಿದರು.

ತಲಾ ಎರಡೂವರೆ ವರ್ಷ ಅಧಿಕಾರ ಹಂಚಿಕೆ

ಚಾಮರಾಜನಗರ: ಚಾಮುಲ್ ಅಧ್ಯಕ್ಷ ಸ್ಥಾನದ 5 ವರ್ಷದ ಅಧಿಕಾರಾವಧಿಯನ್ನು ವೈ.ಸಿ.ನಾಗೇಂದ್ರ ಹಾಗೂ ಹೆಚ್.ಎಸ್. ಬಸವರಾಜು ಅವರಿಗೆ ತಲಾ ಎರಡೂವರೆ ವರ್ಷ ಹಂಚಿಕೆ ಮಾಡಲಾಗಿದೆ ಎಂದು ವಿಧಾನಪರಿಷತ್ ಸದಸ್ಯರೂ ಆಗಿರುವ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ತಿಳಿಸಿದರು.


ಚಾಮುಲ್ ಅಧ್ಯಕ್ಷ ಗಾದಿಗೆ ಚುನಾವಣೆ ನಡೆದು ಫಲಿತಾಂಶ ಹೊರಬಂದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಹೆಚ್.ಎಸ್.ಬಸವರಾಜು ಅಧ್ಯಕ್ಷ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿ ಆಗಿದ್ದರು. ಹೀಗಾಗಿ ಅವರಿಗೆ ಎರಡೂವರೆ ವರ್ಷದ ಅಧಿಕಾರ ನೀಡಲು ಪಕ್ಷದ ಒಪ್ಪಂದ ಆಗಿದೆ. ಒಪ್ಪಂದದಂತೆ ನಡೆದುಕೊಳ್ಳುವುದಾಗಿ ರವಿಕುಮಾರ್ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು. ಬಿಜೆಪಿಯಲ್ಲಿ ಮುಂಬರುವ ಎಪಿಎಂಸಿ, ಜಿಪಂ, ತಾಪಂ ಹಾಗೂ ವಿಧಾನಸಭಾ ಚುನಾವಣೆಗಳಲ್ಲೂ ಸಹ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಯಳಂದೂರು ತಾಲೂಕು ಪತ್ರಕರ್ತರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಯಳಂದೂರು ಜೂ.29(ವಿ.ನಾಗರಾಜು)–ಯಳಂದೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷರಾಗಿ ಹಿರಿಯ ವರದಿಗಾರ ಅಂಬಳೆ ವೀರಭದ್ರ ನಾಯಕ, ಉಪಾಧ್ಯಕ್ಷರಾಗಿ 'ಮೈಸೂರು ಮಿತ್ರ' ವರದಿಗಾರ ವೈ.ಕೆ.ಮೋಳೆ ವಿ.ನಾಗರಾಜು, ಪ್ರಧಾನ ಕಾರ್ಯದರ್ಶಿ– ಡಿ.ಪಿ.ಮಹೇಶ್, ಕಾರ್ಯದರ್ಶಿ–ಇರ್ಫಾನ್, ಖಜಾಂಚಿಯಾಗಿ ನಾಗೇಂದ್ರ.ಸಿ ಅವಿರೋಧವಾಗಿ ಆಯ್ಕೆಯಾದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಳ್ಳಿ ಮಹೇಶ್ ನೇತೃತ್ವದಲ್ಲಿ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಗೂಳಿಪುರ ನಂದೀಶ, ನಿಕಟಪೂರ್ವ ಅಧ್ಯಕ್ಷ ಭಾನುಪ್ರಕಾಶ್, ಹಿರಿಯ ಪತ್ರಕರ್ತರಾದ ಯರಿಯೂರು ನಾಗೇಂದ್ರ, ಫೈರೋಜ್ ಖಾನ್, ಮದ್ದೂರು ಪುರುಷೋತ್ತಮ, ಜಿ.ಸಿ.ರಾಜೇಶ್ ಸೇರಿದಂತೆ ಇತರರಿದ್ದರು.

ಕೆರೆಯಂಗಳದಲ್ಲಿ ಗಿಡ ನಾಟಿ ಕಾರ್ಯಕ್ರಮ



ಗುಂಡ್ಲುಪೇಟೆ, ಜೂ.29(ಸೋಮ್.ಜಿ)–ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಾಲೂಕಿನ ಕಬ್ಬಹಳ್ಳಿ ವಲಯದ ಶ್ಯಾನಾಡ್ರಹಳ್ಳಿಯಲ್ಲಿ 'ಕೆರೆಯಂಗಳದಲ್ಲಿ ಗಿಡ ನಾಟಿ ಕಾರ್ಯಕ್ರಮ'ಕ್ಕೆ ಎಸ್‌ಕೆಡಿಆರ್‌ಡಿಪಿ ಜಿಲ್ಲಾ ನಿರ್ದೇಶಕಿ ಲತಾ ಭಂಗೇರಾ ಗಿಡ ನೆಟ್ಟು ನೀರೆರೆಯುವುದರ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಂತೆ ಪರಿಸರದ ಸಂರಕ್ಷಣೆ ಹಾಗೂ ಕಾಡು ಪ್ರಾಣಿ–ಪಕ್ಷಿಗಳ ಆಹಾರಕ್ಕಾಗಿ ರಾಜ್ಯದಾದ್ಯಂತ 10 ಲಕ್ಷ ಹಣ್ಣಿನ ಗಿಡಗಳನ್ನು ನಾಟಿ ಮಾಡಲಾಗುತ್ತಿದೆ. ಅರಣ್ಯೀಕರಣಕ್ಕಾಗಿ ಪ್ರತಿ ತಾಲೂಕಿನಲ್ಲಿ 5 ಸಾವಿರ ಗಿಡಗಳನ್ನು ನೆಡಲಾಗುತ್ತಿದೆ. ಜಲ ಸಮೃದ್ಧಿಗಾಗಿ 456 ಕೆರೆಗಳನ್ನು ಪುನಶ್ಚೇತನ ಮಾಡಿ ಅದರ ಸುತ್ತ ಗಿಡ ನೆಟ್ಟು ಪರಿಸರಕ್ಕೆ ಕೊಡುಗೆ ನೀಡಲಾಗುತ್ತಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಸ್.ಎಂ. ಮಲ್ಲಿಕಾರ್ಜುನ, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಲಕ್ಕೂರು ಚಂದ್ರು, ಗ್ರಾಪಂ ಅಭಿವೃದ್ಧಿ ಅಧಿಕಾರಿ ಪ್ರಸಾದ್, ತಾಲೂಕು ಯೋಜನಾಧಿಕಾರಿ ಚಂದ್ರಶೇಖರ್, ಕೃಷಿ ಮೇಲ್ವಿಚಾರಕ ಶ್ರೀನಿವಾಸ್, ವಲಯ ಮೇಲ್ವಿಚಾರಕ ಚಂದ್ರಶೇಖರ್ ಮತ್ತು ಕೆರೆ ಅಭಿವೃದ್ಧಿ ಸಮಿತಿ ಸದಸ್ಯರು, ಸೇವಾ ಪ್ರತಿನಿಧಿಗಳು ಹಾಗೂ ಗ್ರಾಮದ ಮುಖಂಡಿದ್ದರು.

ಹಿತ್ತಲಿನಲ್ಲಿ ಗಾಂಜಾ ಬೆಳೆದಿದ್ದ ವ್ಯಕ್ತಿ ಬಂಧನ

ಹನೂರು, ಜೂ.29(ಸೋಮು)–ಮನೆ ಹಿತ್ತಲಿನಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದ ಆರೋಪಿಯನ್ನು ಬುಧವಾರ ಹನೂರು ಪೊಲೀಸರು ಬಂಧಿಸಿದ್ದಾರೆ.



ತಾಲೂಕಿನ ಹಿರಿಯಂಬಲ ಗ್ರಾಮದ ಕುಂಬೇಶ್(40) ಬಂಧಿತ ಆರೋಪಿ. ಈತ ತನ್ನ ಮನೆಯ ಹಿತ್ತಲಿನಲ್ಲಿ ಅಕ್ರಮವಾಗಿ ಗಾಂಜಾ ಗಿಡ ಬೆಳೆದಿದ್ದ. ಖಚಿತ ಮಾಹಿತಿ ಮೇರೆಗೆ ಬುಧವಾರ ಮಧ್ಯಾಹ್ನ ಕೊಳ್ಳೇಗಾಲ ಉಪವಿಭಾಗ ಡಿವೈಎಸ್ಪಿ ನಾಗರಾಜು, ಹನೂರು ಆರಕ್ಷಕ ನಿರೀಕ್ಷಕ ಸಂತೋಷ್ ಕಶ್ಯಪ್ ಹಾಗೂ ಸಿಬ್ಬಂದಿ ದಾಳಿ ನಡೆಸಿ ಒಟ್ಟು 1.250 ಗ್ರಾಂ ತೂಕದ 6 ಹಸಿ ಗಾಂಜಾ ಗಿಡ ವಶಕ್ಕೆ ಪಡೆದು, ಆರೋಪಿಯನ್ನು ಬಂಧಿಸಿದರಲ್ಲದೆ, ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಮುಖ್ಯಪೇದೆ ಸುರೇಶ್, ಪೇದೆಗಳಾದ ರಾಘವೇಂದ್ರ, ಪ್ರಭು, ಬಂಗಾರನಾಯ್ಕ, ವೆಂಕಟೇಶ್, ಗ್ರಾಮಲೆಕ್ಕಿಗ ಮಾರುತಿ ಪಾಲ್ಗೊಂಡಿದ್ದರು.

ಇಂದು ತಾಪಂ ಸಾಮಾನ್ಯ ಸಭೆ

ಮಡಿಕೇರಿ ಜೂ.29–ತಾಲೂಕು ಪಂಚಾಯಿತಿ ಸಾಮಾನ್ಯ ಸಭೆಯು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ತಾಪಂ ಆಡಳಿತಾಧಿಕಾರಿ ಶಬಾನ ಎಂ.ಶೇಖ್ ಅವರ ಅಧ್ಯಕ್ಷತೆಯಲ್ಲಿ ಜೂ.30 ರಂದು ಮಧ್ಯಾಹ್ನ 2.30 ಗಂಟೆಗೆ ತಾಪಂಯ ಸಾಮರ್ಥ್ಯ ಸೌಧ ಸಭಾಂಗಣದಲ್ಲಿ ನಡೆಯಲಿದೆ ಎಂದು ತಾಪಂ ಇಒ ಶೇಖರ್ ಅವರು ತಿಳಿಸಿದ್ದಾರೆ.

ನಾಳೆ ಕಾವೇರಿ ಮಾತೆ ಪುತ್ಥಳಿ ಅನಾವರಣ

ಮಡಿಕೇರಿ ಜೂ.29– ಜಿಲ್ಲಾ ಪಂಚಾಯಿತಿ, ಮಡಿಕೇರಿ ತಾಲೂಕು ಪಂಚಾಯಿತಿ, ಮರಗೋಡು ಗ್ರಾಮ ಪಂಚಾಯಿತಿ ಹಾಗೂ ಭಾರವಿ ಕಾವೇರಿ ಕನ್ನಡ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಜುಲೈ 1 ರಂದು ಬೆಳಗ್ಗೆ 10 ಗಂಟೆಗೆ ಮರಗೋಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾವೇರಿ ಮಾತೆ ಪುತ್ಥಳಿ ಅನಾವರಣ ಮತ್ತು ವಿವಿಧ ಕಾಮಗಾರಿಗಳ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.

ವಿಪತ್ತು ನಿರ್ವಹಣೆಗೆ ಎಲ್ಲಾ ರೀತಿಯ ಮುನ್ನೆಚ್ಚರ ವಹಿಸಿ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ನಿರ್ದೇಶನ


ಮಡಿಕೇರಿ ಜೂ.29– ಕೊಡಗು ಜಿಲ್ಲೆಯಲ್ಲಿ ಈಗಾಗಲೇ ಮುಂಗಾರು ಆರಂಭವಾಗಿದ್ದು, ವಿಪತ್ತು ನಿರ್ವಹಣೆ ಸಂಬಂಧ ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಳೆಹಾನಿ ಸಂಬಂಧ ಜಿಲ್ಲಾಡಳಿತ ಕೈಗೊಂಡಿರುವ ಕ್ರಮಗಳು ಹಾಗೂ ಕೋವಿಡ್ ನಿಯಂತ್ರಣಕ್ಕೆ ವಹಿಸಲಾಗಿರುವ ಕ್ರಮಗಳ ಬಗ್ಗೆ ಬುಧವಾರ ನಡೆದ ಸಭೆಯಲ್ಲಿ ಮಾಹಿತಿ ಪಡೆದು ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಸರಾಸರಿಗಿಂತ ಹೆಚ್ಚಿನ ಮಳೆಯಿಂದ ಪ್ರಾಕೃತಿಕ ವಿಕೋಪ ಸಂಭವಿಸಿದಲ್ಲಿ ಅಗತ್ಯ ಮುನ್ನೆಚ್ಚರ ವಹಿಸುವುದರ ಜೊತೆಗೆ ಭೂಕುಸಿತ ಹಾಗೂ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಹೆಚ್ಚಿನ ಗಮನಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

2018 ರಲ್ಲಿ ಭೂ ಕುಸಿತದಿಂದ ಕೆಲವು ಕಡೆ ಭೂಮಿ ಬಿರುಕು ಬಿಟ್ಟಿತ್ತು ಆದರೆ ಈ ಬಾರಿ ಸರಾಸರಿ ಮಳೆಯ ಪ್ರಮಾಣ ಕಡಿಮೆ ಇದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿಸಿ ಡಾ.ಬಿ.ಸಿ.ಸತೀಶ ಅವರು ಪೂರ್ವ ಮುಂಗಾರು ಸಂದರ್ಭದಲ್ಲಿ ಉತ್ತಮ ಮಳೆಯಾಗಿದೆ. ಈ ಬಾರಿ ಸರಾಸರಿ ಮಳೆಯ ಪ್ರಮಾಣ ಕಡಿಮೆ ಇದೆ. 16 ಹೋಬಳಿಗೆ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಪ್ರಾಕೃತಿಕ ವಿಕೋಪ ಉಂಟಾದಲ್ಲಿ ಪರಿಹಾರ ಕೇಂದ್ರ ತೆರೆಯಲಾಗುತ್ತದೆ. ಹಾರಂಗಿ ಜಲಾಶಯ ನಿರ್ವಹಣೆಗೆ ಕ್ರಮವಹಿಸಲಾಗಿದೆ.



ಈಗಾಗಲೇ ತಹಸೀಲ್ದಾರರು ಮತ್ತು ಗ್ರಾಮ ಪಂಚಾಯಿತಿಗಳಿಗೆ ಪ್ರಾಕೃತಿಕ ವಿಕೋಪ ನಿರ್ವಹಣೆಗೆ ಹಣ ಬಿಡುಗಡೆ ಮಾಡಲಾಗಿದ್ದು, ಪ್ರಾಕೃತಿಕ ವಿಕೋಪ ನಿರ್ವಹಣೆಗೆ ಜಿಲ್ಲಾಡಳಿತ ಅಗತ್ಯ ತಯಾರಿ ಮಾಡಿಕೊಂಡಿದೆ ಎಂದರು. ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಾರ್ಯಪಡೆ ರಚಿಸಲಾಗಿದೆ. ದಿನದ 24 ಗಂಟೆ ಜಿಲ್ಲಾಡಳಿತದಲ್ಲಿ ಕಂಟ್ರೋಲ್ ರೂಂ(1077) ನಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ. ಈಗಾಗಲೇ ಎನ್‌ಡಿಆರ್‌ಎಫ್ ತಂಡ ಹಾಗೂ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಸಂಸ್ಥೆಯ ವಿಜ್ಞಾನಿಗಳು ಜಿಲ್ಲೆಗೆ ಆಗಮಿಸಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅವರ ಗಮನಕ್ಕೆ ತಂದರು.

ಪ್ರಾಕೃತಿಕ ವಿಕೋಪ ಎದುರಿಸುವ ಗ್ರಾಮ ಪಂಚಾಯಿತಿಗಳಿಗೆ ಸೀಮೆಎಣ್ಣೆ ಪೂರೈಸುವಂತಾಗಬೇಕು. ಆ ನಿಟ್ಟಿನಲ್ಲಿ ಆಹಾರ ಇಲಾಖೆಯ ಆಯುಕ್ತರ ಜೊತೆ ಚರ್ಚಿಸಲಾಗುವುದು. ಪ್ರವಾಹ ಹಾಗೂ ಭೂಕುಸಿತ ಪ್ರದೇಶಗಳ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಆದ್ಯತೆ ನೀಡುವಲ್ಲಿ ಮುಂದಾಗಬೇಕು ಎಂದು ವಿ.ಅನ್ಬುಕುಮಾರ್ ಅವರು ಸಲಹೆ ಮಾಡಿದರು.

ಈ ಕುರಿತು ಮಾತನಾಡಿದ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಕೊಡಗು ಜಿಲ್ಲೆಗೆ ಹೆಚ್ಚುವರಿಯಾಗಿ ಸೀಮೆಎಣ್ಣೆ ಪೂರೈಕೆಗೆ ಮನವಿ ಮಾಡಲಾಗಿದೆ ಎಂದರು.

ಕೋವಿಡ್ ನಿಯಂತ್ರಣ ಮತ್ತು ಲಸಿಕೆಯ ಪ್ರಗತಿ ಸಂಬಂಧಿಸಿದಂತೆ ಮಾಹಿತಿ ಪಡೆದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅವರು ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣವಾಗದಂತೆ ಎಚ್ಚರವಹಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗೆ ಸೂಚಿಸಿದರು.

ಅಧಿಕಾರಿಗಳು ಆದೇಶ ಮಾಡುವುದರ ಜೊತೆಗೆ ಅನುಷ್ಠಾನ ಮಾಡಬೇಕು. ಆದೇಶ ಮಾಡಿ ಸುಮ್ಮನಿದ್ದರೆ ಸಾಲದು, ಪಾಲಿಸಬೇಕು ಎಂದು ವಿ.ಅನ್ಬುಕುಮಾರ್ ಅವರು ಕಿವಿಮಾತು ಹೇಳಿದರು.'

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಆರ್.ವೆಂಕಟೇಶ್ ಅವರು ಕೋವಿಡ್ ನಿಯಂತ್ರಣದಲ್ಲಿದೆ. ಲಸಿಕಾ ಕಾರ್ಯಕ್ರಮವು ಶೇ.100 ರಷ್ಟು ಆಗಿದೆ ಎಂದು ಮಾಹಿತಿ ನೀಡಿದರು.

ಜಿ.ಪಂ.ಸಿಇಒ ಭಂವರ್ ಸಿಂಗ್ ಮೀನಾ ಅವರು ಜಲಜೀವನ್ ಮಿಷನ್ ಯೋಜನೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.

ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪಿ. ಚಂದನ್, ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರಾದ ಅನನ್ಯ ವಾಸುದೇವ್, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಸಂಸ್ಥೆಯ ವಿಜ್ಞಾನಿಗಳಾದ ಡಾ.ರಮೇಶ್ ಮತ್ತು ಡಾ.ಜಗದೀಶ್ ಅವರು ಅವರು ಪ್ರಾಕೃತಿಕ ವಿಕೋಪ ಬಗ್ಗೆ ಹಲವು ಮಾಹಿತಿ ನೀಡಿದರು. ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಭೂ ಕಂಪನ ಪ್ರದೇಶಗಳಿಗೆ ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ವಿಜ್ಞಾನಿಗಳ ತಂಡ ಭೇಟಿ

ಮಡಿಕೇರಿ,ಜೂ.29– ಕಳೆದ ಒಂದು ವಾರದ ಅವಧಿಯಲ್ಲಿ ಕೊಡಗಿನ ವಿವಿಧೆಡೆ ಒಟ್ಟು 4 ಬಾರಿ ಭೂಮಿ ಕಂಪಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರದ ವಿಜ್ಞಾನಿಗಳ ತಂಡ ಕೊಡಗಿಗೆ ಭೇಟಿ ನೀಡಿದೆ. ಬುಧವಾರ ಮಡಿಕೇರಿಗೆ ಆಗಮಿಸಿದ ವಿಜ್ಞಾನಿಗಳಾದ ಜಗದೀಶ್ ಮತ್ತು ರಮೇಶ್ ಅವರುಗಳು ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ನಡೆಸಿದರು.

ಬಳಿಕ ಜಿಲ್ಲಾ ಪ್ರಾಕೃತಿಕ ವಿಕೋಪ ನಿರ್ವಹಣಾ ಅಧಿಕಾರಿ ಅನನ್ಯ ವಾಸುದೇವ್ ಅವರೊಂದಿಗೆ ಭೂಕಂಪ ಸಂಭವಿಸಿದ ಕರಿಕೆ ಹಾಗೂ ಎಂ.ಚೆಂಬು ಗ್ರಾಮಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಮಾತ್ರವಲ್ಲದೆ, ಸ್ಥಳೀಯ ನಿವಾಸಿಗಳೊಂದಿಗೆ ಘಟನೆಯ ಕುರಿತು ಮಾಹಿತಿ ಪಡೆದರು.


ಕರಿಕೆ, ಸಂಪಾಜೆ, ಕೊಯನಾಡು ಸೇರಿದಂತೆ ಸುಳ್ಯ ಕೊಡಗು ಗಡಿ ಗ್ರಾಮಗಳಲ್ಲಿ ಭೂ ಕಂಪನವಾಗಿದ್ದು, ಪ್ರಾಕೃತಿಕ ವಿಕೋಪದ ಕುರಿತು ಇದೇ ಸಂದರ್ಭ ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದರು.

ಈಗ ಸಂಭವಿಸುವ ಲಘು ಭೂ ಕಂಪಕ್ಕೂ ಈ ಹಿಂದಿನ ಭೂ ಕುಸಿತಕ್ಕೂ ಸಂಬಂಧವಿಲ್ಲ.ವೈಜ್ಞಾನಿಕ ಅಧ್ಯಯನ ಬಳಿಕ ಸತ್ಯಾಂಶ ತಿಳಿಯಲಿದೆ. ಈಗಾಗಲೇ ವಿಜ್ಞಾನಿಗಳ ತಂಡ ಕರಿಕೆಗೆ ತೆರಳಿ ಪರಿಶೀಲನೆ ನಡೆಸುತ್ತಿದೆ. ಜಿಲ್ಲಾಡಳಿತ ಈಗಾಗಲೇ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿದೆ.

–ಡಾ.ಬಿ.ಸಿ.ಸತೀಶ,
ಕೊಡಗು ಜಿಲ್ಲಾಧಿಕಾರಿ

2018ರಲ್ಲಿ ಪ್ರಾಕೃತಿಕ ವಿಕೋಪ ಸಂಭವಿಸಿದ ಗ್ರಾಮಗಳಲ್ಲಿ ಮತ್ತೆ ಭೂ ಕಂಪನ ಆಗಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಭೂ ಕಂಪನ ಮಾನಿಟರಿಂಗ್ ಸೆಂಟರ್ ತೆರೆಯಲು ಜಿಲ್ಲಾಡಳಿತ ಪ್ರಸ್ತಾಪವಿದೆ. ಈ ಸೆಂಟರ್‌ನಲ್ಲಿ ವಿಜ್ಞಾನಿಗಳು ಇರಲಿದ್ದು, 30 ಲಕ್ಷ ವೆಚ್ಚದಲ್ಲಿ ಕೇಂದ್ರ ನಿರ್ಮಾಣ ಆಗಲಿದೆ ಎಂದು ತಿಳಿದು ಬಂದಿದೆ. ಈ ಕೇಂದ್ರದಲ್ಲಿ ಭೂ ಗರ್ಭದಲ್ಲಿ ಸಂಭವಿಸುವ ಘಟನೆಗಳನ್ನು ದಾಖಲು ಮಾಡಿ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ ಎಂಬ ಮಾಹಿತಿ ಲಭಿಸಿದೆ.

ಬೇಟೋಳಿ ಗ್ರಾಪಂ ಜಲಜೀವನ್ ಮಿಷನ್ ಯೋಜನೆ ಗ್ರಾಮ ಸಭೆ



ವಿರಾಜಪೇಟೆ, ಜೂ.29– ಸರಕಾರದ ಅನುದಾನ ಅರ್ಹ ಫಲಾನುಭವಿಗಳಿಗೆ ದೊರಕುವಂತಾಗಬೇಕು. ಯಾವುದೇ ಕಾರಣಕ್ಕೂ ಅವ್ಯವಹಾರ ನಡೆಯಬಾರದು ಎಂದು ತಾಲೂಕು ಸಾಮಾಜಿಕ ಲೆಕ್ಕ ಪರಿಶೋಧನಾ ಅಧಿಕಾರಿ ಎಂ.ಸಿ.ಸತೀಶ್ ಹೇಳಿದರು.

ವಿರಾಜಪೇಟೆ ಬಳಿಯ ಬೇಟೋಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ಬೇಟೋಳಿ ಗ್ರಾಮ ಪಂಚಾಯಿತಿಯ ಸಾಮಾಜಿಕ ಲೆಕ್ಕ ಪರಿಶೋಧನಾ ಹಾಗೂ ಕೊಡಗು ಜಿಲ್ಲಾ ಪಂಚಾಯತ್ ಜಲಜೀವನ್ ಮಿಷನ್ ಯೋಜನೆಯ ಬಗ್ಗೆ ಆಯೋಜಿಸಲಾಗಿದ್ದ ಗ್ರಾಮ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರಕಾರದ ಅನುದಾನದಲ್ಲಿ ಗ್ರಾಮ ಪಂಚಾಯಿತಿಯಿಂದ ಸಿದ್ಧಪಡಿಸಿರುವ ಯೋಜನೆಗಳನ್ನು ಕ್ರಿಯಾರೂಪಕ್ಕೆ ತರಬೇಕು. ಈ ಮೂಲಕ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸಾರ್ವಜನಿಕರಿಗೆ ಉಪಯೋಗ ಆಗುವಂತ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಅನುದಾನವನ್ನು ಬಳಸುವಂತಾಗಬೇಕು ಎಂದ ಅವರು ಪ್ರತಿಯೊಂದು ಮನೆಯಲ್ಲಿ ಉಪಯೋಗಿಸುವಂತ (ತೊಳೆದ) ನೀರು ಹರಿದು ಹೋಗದಂತೆ ಮನೆಯ ಆವರಣದಲ್ಲಿಯೇ ಇಂಗುಗುಂಡಿ ಮಾಡಿ ನೀರನ್ನು ಇಂಗಿಸುವಂತ ಕಾರ್ಯವನ್ನು ಮಾಡಬೇಕಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಜಲಜೀವನ್ ಮಿಷನ್ ತಾಲೂಕು ಸಂಯೋಜಕ ನಿರಂಜನ್ ಮಾತನಾಡಿ, ಗ್ರಾಮಗಳಲ್ಲಿ ಗುಂಪು ಮನೆಗಳಿದ್ದಲ್ಲಿ ಕೂಡಲೇ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುವುದು ಹಾಗೂ ಸರಕಾರಿ ಜಾಗ ಇದ್ದಲ್ಲಿ ನೀರಿನ ಟ್ಯಾಂಕ್ ನಿರ್ಮಿಸಿ, ನಂತರ ಪೈಪ್ ಅಳವಡಿಸಿ ಎಲ್ಲಾ ಜನತೆಗೂ ಹಂತ ಹಂತವಾಗಿ ಕುಡಿಯುವ ನೀರು ಸೌಲಭ್ಯ ನೀಡಲಾಗುವುದು. ಆದರೆ ನೀರನ್ನು ಮಿತವಾಗಿ ಬಳಸಲೆಂದು ಮೀಟರ್ ಅಳವಡಿಸಬೇಕಾಗಿದೆ ಎಂದರು. ನೋಡಲ್ ಅಧಿಕಾರಿ ವಿಶಾಲಾಕ್ಷಿ ಅವರ ಮುಂದಾಳತ್ವದಲ್ಲಿ ನಡೆದ, ಸಭೆಯ ಅಧ್ಯಕ್ಷತೆಯನ್ನು ಬೇಟೋಳಿ ಗ್ರಾಪಂ ಅಧ್ಯಕ್ಷೆ ಬಿ.ಜೆ. ಯಶೋದ ವಹಿಸಿದ್ದರು, ಪ್ರಾಸ್ತಾವಿಕವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಣಿ ಮಾತನಾಡಿದರು. ವೇದಿಕೆಯಲ್ಲಿ ತಾಲೂಕು ಪಂಚಾಯಿತಿಯ ರವಿ ತಮ್ಮಯ್ಯ, ಬೇಟೋಳಿ ಗ್ರಾಪಂ ಉಪಾಧ್ಯಕ್ಷೆ ಶಾಂತಿ ಹಾಗೂ ಎಲ್ಲಾ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಗೋಣಿಕೊಪ್ಪದಲ್ಲಿ ಒಲಿಂಪಿಕ್ ಡೇ ಸಪ್ತಾಹ ಆಚರಣೆ

ಗೋಣಿಕೊಪ್ಪ ಜೂ.29– ಕಾಲ್ಸ್ ಶಾಲೆಯಲ್ಲಿ ವಿಶ್ವ ಒಲಿಂಪಿಕ್ ಡೇ ಅಂಗವಾಗಿ ಜೂ.23 ರಿಂದ ಜೂ.28 ರವರೆಗೆ ಒಲಿಂಪಿಕ್ ಡೇ ಸಪ್ತಾಹ ಕಾರ್ಯಕ್ರಮ ಆಚರಿಸಲಾಯಿತು. ವಿವಿಧ ಕ್ರೀಡಾ ಚಟುವಟಿಕೆ. ಒಲಿಂಪಿಕ್ ಕ್ರೀಡೆಯಲ್ಲಿ ಪಾಲ್ಗೊಂಡ ಕ್ರೀಡಾಪಟುಗಳ ವೇಷ ಧರಿಸಿ ವಿದ್ಯಾರ್ಥಿಗಳು ಸಂಭ್ರಮಿಸಿದರು.



ಶಾಲೆಯಲ್ಲಿರುವ 4 ವಿಭಾಗದ ತಂಡದಿಂದ ವಿವಿಧ ಕ್ರೀಡೆಯ ಮೈದಾನ, ಕ್ರೀಡೆಗೆ ಬಳಸುವ ಪರಿಕರ, ಕ್ರೀಡಾಪಟುಗಳ ವೇಷದೊಂದಿಗೆ ಮಾದರಿ ಪ್ರದರ್ಶನ ಮಾಡಿದರು. ಹಾಕಿ, ಫುಟ್ಬಾಲ್, ಬೀಚ್ ವಾಲಿಬಾಲ್, ವಾಟರ್ ಪೋಲೋ, ರಿಸ್ಲಿಂಗ್, ಸ್ಪಿಂಟ್, ಅಥ್ಲೆಟಿಕ್, ಬಾಸ್ಕೆಟ್‌ಬಾಲ್, ಟೆನ್ನಿಸ್, ಟೆಕ್ವಾಂಡು, ಐಸ್ ಹಾಕಿ, ಸ್ವಿಮ್ಮಿಂಗ್ ಪೂಲ್ ಹೀಗೆ ವಿವಿಧ ರೀತಿಯ ಕ್ರೀಡೆಗಳನ್ನು ಪರಿಚಯ ಮಾಡಿಕೊಡಲಾಯಿತು.

ಒಲಿಂಪಿಕ್‌ನಲ್ಲಿ ಭಾಗವಹಿಸಿದ್ದ ವಿಶ್ವನಾಥ್ ಆನಂದ್, ಮೇರಿಕೋಮ್, ಮಿಲ್ಕಾಸಿಂಗ್, ಹೀಗೆ ವಿವಿಧ ಕ್ರೀಡೆಗೆ ಒಳಪಡುವ ಕ್ರೀಡಾಪಟಗಳ ವೇಷ ಧರಿಸಿ, ಅವರ ಭಂಗಿಯನ್ನು ಅನಾವರಣಗೊಳಿಸಿದರು. ಫೈರ್ ಹೌಸ್, ಅರ್ಥ್ ಹೌಸ್, ಏರ್ ಹೌಸ್, ವಾಟರ್ ಹೌಸ್ ಹೆಸರಿನಲ್ಲಿ ವಿದ್ಯಾರ್ಥಿಗಳು ತಂಡವಾಗಿ ಸ್ಪರ್ಧೆಯಲ್ಲಿ ಪಾಲ್ಗೊಂಡರು.

ಫೋಟೋ ಗ್ಯಾಲರಿಯಲ್ಲಿ ಒಲಿಂಪಿಕ್ ಕ್ರೀಡೆ ಹಾಗೂ ಕ್ರೀಡಾಪಟುಗಳ ಪರಿಚಯ ಮಾಡಿಕೊಡಲಾಯಿತು. ಪಾಲಕರು ಹಾಗೂ ಅತ್ತೂರು ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಕಣ್ತುಂಬಿಕೊಂಡರು.

ವಿರಾಜಪೇಟೆ ಕ್ಷೇತ್ರ ಶಿಕ್ಷಣ ಅಧಿಕಾರಿ ಶ್ರೀಶೈಲ ಬೀಳಗಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಕ್ರೀಡಾ ಮಾಹಿತಿ ಮತ್ತು ಕ್ರೀಡೆಗೆ ವಿದ್ಯಾರ್ಥಿಗಳನ್ನು ಪಾಲ್ಗೊಳ್ಳುವಂತೆ ಮಾಡಲು ಇಂತಹ ಕಾರ್ಯಕ್ರಮ ಸಹಕಾರಿ ಎಂದರು.ಪ್ರಾಂಶುಪಾಲ ಗೌರಮ್ಮ ಇದ್ದರು.

ನೆಲ್ಯಹುದಿಕೇರಿಯಲ್ಲಿ ನವೀಕೃತ ಗ್ರಾಪಂ ಕಟ್ಟಡ ಉದ್ಘಾಟನೆ

ಸಿದ್ದಾಪುರ, ಜೂ.29– ಸರಕಾರಗಳು ಜನ ಪರವಾದ ಹಲವಾರು ಯೋಜನೆಗಳನ್ನು ನೀಡುತ್ತಿದ್ದು ಇದರ ಸದ್ಬಳಕೆ ಮಾಡಿಕೊಳ್ಳುವುದರ ಮೂಲಕ ಅಭಿವೃದ್ಧಿ ಕಾರ್ಯದಲ್ಲಿ ಸಾಧನೆ ಮಾಡಬೇಕೆಂದು ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದರು.

ನೆಲ್ಯಹುದಿಕೇರಿಯ ಗ್ರಾಮ ಪಂಚಾಯಿತಿ ನವೀಕೃತ ಕಟ್ಟಡ, ಡಿಜಿಟಲ್ ಗ್ರಂಥಾಲಯ, ಕುಡಿಯುವ ನೀರಿನ ಘಟಕ ಉದ್ಘಾಟನೆ ನಂತರ ಶಾದಿಮಹಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಪಂ ಜನಪ್ರತಿನಿಧಿಗಳು ಮನಸ್ಸು ಮಾಡಿದರೆ ಸುಂದರ ಗ್ರಾಮವನ್ನಾಗಿಸಲು ಸಾಧ್ಯವಿದೆ. ಅತ್ಯಾಧುನಿಕವಾಗಿ ಎಲ್ಲಾ ಸೌಲಭ್ಯಗಳೊಂದಿಗೆ ನವೀಕೃತ ಕಟ್ಟಡ ನಿರ್ಮಾಣ ಮಾಡಿರುವುದು ಶ್ಲಾಘನೀಯ ಎಂದರು.

ಗ್ರಾಮದಲ್ಲಿ ಕಾವೇರಿ ನದಿ ಹರಿಯುತ್ತಿದ್ದು ಇದರ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಬೇಕಾಗಿದೆ. ಮುಂದಿನ ದಿನಗಳಲ್ಲಿ ಕಾವೇರಿ ನದಿ ದಡದಲ್ಲಿ ಯಾವುದೇ ಮನೆ ನಿರ್ಮಾಣಕ್ಕೆ ಅವಕಾಶ ನೀಡಬಾರದು. ನದಿ ರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕಾಗಿದೆ ಎಂದರು.

ಮಡಿಕೇರಿ ಕ್ಷೇತ್ರದ ಶಾಸಕ ಎಂ.ಪಿ ಅಪ್ಪಚ್ಚು ರಂಜನ್ ಮಾತನಾಡಿ, ಈಗಾಗಲೇ ನೆಲ್ಲಿಹುದಿಕೇರಿ ಗ್ರಾಮ ಅಭಿವೃದ್ಧಿಗಾಗಿ 3 ಕೋಟಿ ಅನುದಾನ ನೀಡಲಾಗಿದ್ದು ಬಹುತೇಕ ಅಭಿವೃದ್ಧಿ ಕಾರ್ಯಗಳು ಮುಗಿದಿವೆ.

ಕಾರ್ಮಿಕರು ಹಾಗೂ ಅಲ್ಪಸಂಖ್ಯಾತರ ಮಕ್ಕಳೇ ಹೆಚ್ಚಾಗಿ ಕಲಿಯುತ್ತಿರುವ ಕರ್ನಾಟಕ ಪಬ್ಲಿಕ್ ಶಾಲೆಗೆ ಹೆಚ್ಚು ಅನುದಾನ ನೀಡಲಾಗಿದ್ದು ಮುಂದಿನ ದಿನಗಳಲ್ಲಿ ಪದವಿ ಕಾಲೇಜಿಗೆ ಚಿಂತನೆ ನಡೆಸಲಾಗುತ್ತಿದೆ ಎಂದರು.



ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ ಮಾತನಾಡಿ, ಪ್ರವಾಹ ಪ್ರಕೃತಿ ವಿಕೋಪ ಸಂದರ್ಭದಲ್ಲಿ ನದಿದಡ ನಿವಾಸಿಗಳು ಹಲವಾರು ಸಮಸ್ಯೆಗಳನ್ನು ಎದುರಿಸಿ ಮನೆ ಆಸ್ತಿಪಾಸ್ತಿ ಕಳೆದುಕೊಂಡು ಇಂದಿಗೂ ಸಂಕಷ್ಟದ ಜೀವನ ನಡೆಸುತ್ತಿದ್ದಾರೆ. ಸಂತ್ರಸ್ತರಿಗೆ ಮೀಸಲಾಗಿರುವ ಜಾಗವನ್ನು ಯಾವುದೇ ಅಭಿವೃದ್ಧಿ ಮಾಡದೆ ಕಡೆಗಣಿಸಲಾಗಿದೆ ಎಂದು ಹೇಳಿದರು.

ಎಲ್ಲ ಸೌಲಭ್ಯಗಳೊಂದಿಗೆ ಸುಸಜ್ಜಿತವಾದ ಹೈಟೆಕ್ ಮಾದರಿಯ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣವಾಗಿದ್ದು ಕುಡಿಯುವ ನೀರು, ಅಚ್ಚುಕಟ್ಟಾದ ಆಸನದ ವ್ಯವಸ್ಥೆ, ಸೇವಾ ಕೇಂದ್ರ, ಡಿಜಿಟಲ್ ಗ್ರಂಥಾಲಯ, ವಿದ್ಯುತ್ ಸಮಸ್ಯೆ ನೀಗಿಸಲು ಇನ್ವರ್ಟರ್ ವ್ಯವಸ್ಥೆ, ಸರ್ಕಾರದ ಯೋಜನೆಗಳ ಮಾಹಿತಿ ಫಲಕ, ಗ್ರಾಮ ನಕಾಶೆ, ಪಂಚಾಯಿತಿಯಿಂದ ನಡೆದಿರುವ ಅಭಿವೃದ್ಧಿ ಕಾರ್ಯಗಳ ಮಾಹಿತಿ ಸೇರಿದಂತೆ ಸರ್ಕಾರದ ಯೋಜನೆಗಳನ್ನು ಪಡೆದುಕೊಳ್ಳಲು ವ್ಯವಸ್ಥೆಯನ್ನ ಮಾಡಲಾಗಿದ್ದು, ಜಿಲ್ಲೆಯಲ್ಲಿಯೇ ಮಾದರಿ ಗ್ರಾಮ ಪಂಚಾಯಿತಿ ಎಂಬ ಹೆಗ್ಗಳಿಕೆಯೊಂದಿಗೆ ಗಣ್ಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಗ್ರಾಪಂ ಅಧ್ಯಕ್ಷ ಸಾಬು ವರ್ಗಿಸ್, ಜಿಪಂ ಮಾಜಿ ಅಧ್ಯಕ್ಷ ವಿಜಯನ್, ಜಿ.ಪಂ. ಮಾಜಿ ಸದಸ್ಯೆ ಸುನಿತಾ ಮಂಜುನಾಥ್, ತಹಸೀಲ್ದಾರ್ ಗೋವಿಂದರಾಜು, ತಾಲೂಕು ಕಾರ್ಯನಿರ್ವಹಣಾಧಿಕಾರಿ ಜಯಣ್ಣ, ಸಹಾಯಕ ಕಾರ್ಯಪಾಲಕ ವೀರೇಂದ್ರ, ಸಹಾಯಕ ನಿರ್ದೇಶಕ ರವೀಶ್, ನೆಲ್ಲಿಹುದಿಕೇರಿ ಪಿಡಿಒ ಅನಿಲ್ ಕುಮಾರ್, ಪ್ರತಿ ಪರಿಶೀಲನಾ ಸಮಿತಿ ಸದಸ್ಯ ವಿ.ಕೆ.ಲೋಕೇಶ್ ಕೆಪಿಎಸ್ ಶಾಲೆಯ ಉಪಾಧ್ಯಕ್ಷ ಪಿ.ಸಿ. ಅಚ್ಚಯ್ಯ ಮತ್ತಿತರರು ಉಪಸ್ಥಿತರಿದ್ದರು

ಜು.31ಕ್ಕೆ, ಸುತ್ತೂರು ಶ್ರೀಕ್ಷೇತ್ರದಲ್ಲಿ ಉಚಿತ ಸಾಮೂಹಿಕ ವಿವಾಹ

ಮೈಸೂರು, ಜೂ.29(ಎಂಕೆ)– ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜು.31ರಂದು ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸಾಮೂಹಿಕ ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ. ಸಾಮೂಹಿಕ ವಿವಾಹ ನಡೆಯುವ 8 ದಿನಗಳ ಮುಂಚಿತವಾಗಿ ದೂ.ಸಂ.08221-232217/232033 ಹಾಗೂ ಮೊ.ನಂ.9741342222/9490530588 ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಕೊಳ್ಳಬಹುದೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಒಂದನೇ ಪುಟದಿಂದ

ರಾಜೀನಾಮೆ

ಬುಧವಾರ ಸಂಜೆ 5 ಗಂಟೆಗೆ ವಿಚಾರಣೆ ಕೈಗೆತ್ತಿಕೊಂಡ ಸುಪ್ರೀಂಕೋರ್ಟ್ ರಾತ್ರಿ 9 ಗಂಟೆಗೆ ತೀರ್ಪು ಪ್ರಕಟಿಸಿದೆ. ವಿಧಾನಸಭೆಯಲ್ಲಿ ವಿಶ್ವಾಸಮತ ಯಾಚನೆ ಮಾಡುವಂತೆ ರಾಜ್ಯಪಾಲರ ಹೊರಡಿಸಿದ್ದ ಆದೇಶಕ್ಕೆ ತಡೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದ್ದು, ಗುರುವಾರ ಬೆಳಗ್ಗೆ 11 ಗಂಟೆಗೆ ಬಹುಮತ ಸಾಬೀತುಪಡಿಸುವಂತೆ ಠಾಕ್ರೆ ಸರ್ಕಾರಕ್ಕೆ ಹೇಳಿತ್ತು.

ನಾನು ಹೆದರುವವನಲ್ಲ, ಶಿವಸೈನಿಕರ ರಕ್ತ ಬೀದಿಯಲ್ಲಿ ಬೀಳುವುದಕ್ಕಿಂತ ನಾನು ಕೆಳಗಿಳಿಯುವುದೇ ಲೇಸು. ನಾನು ಹುದ್ದೆ ಬಗ್ಗೆ ಚಿಂತಿಸುವುದಿಲ್ಲ, ನನ್ನ ಶಿವಸೈನಿಕರ ಬೆಂಬಲದ ಬಗ್ಗೆ ಕಾಳಜಿ ಮುಖ್ಯವಾಗಿದೆ. ನಾವು ಸುಪ್ರೀಂಕೋರ್ಟ್ ತೀರ್ಪನ್ನು ಗೌರವಿಸುತ್ತೇವೆ. ಪ್ರಜಾಪ್ರಭುತ್ವವನ್ನು ಅನುಸರಿಸಬೇಕು ಎಂದು ಉದ್ಧವ್ ಠಾಕ್ರೆ ಫೇಸ್‌ಬುಕ್ ಲೈವ್‌ನಲ್ಲಿ ಹೇಳಿದ್ದು, ನಂತರ ರಾಜೀನಾಮೆ ಪತ್ರ ನೀಡಲು ರಾಜ್ಯಪಾಲರ ನಿವಾಸಕ್ಕೆ ತೆರಳಿದರು.

ಮಹಾರಾಷ್ಟ್ರದಲ್ಲಿನ ರಾಜಕೀಯ ಬಿಕ್ಕಟ್ಟಿನಿಂದಾಗಿ ಠಾಕ್ರೆ ಅವರ ತಂಡವು ಕೇವಲ 15 ಶಾಸಕರನ್ನು ಹೊಂದಿದೆ. ಇತ್ತ ಏಕನಾಥ್ ಶಿಂಧೆ ಅವರ ಶಿವಸೇನೆ, ಶರದ್ ಪವಾರ್ ಅವರ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಮತ್ತು ಕಾಂಗ್ರೆಸ್ ಅನ್ನು ಒಳಗೊಂಡಿರುವ ಮಹಾ ವಿಕಾಸ್ ಅಘಾಡಿ ಸರ್ಕಾರದ ಪತನಕ್ಕೆ ಕಾರಣರಾಗಿದ್ದು 55 ಶಾಸಕರ ಪೈಕಿ 40 ಶಿವಸೇನಾ ಶಾಸಕರ ಬೆಂಬಲ ಇದೆ ಎಂದು ಹೇಳಿದ್ದಾರೆ. ಈ ಮಧ್ಯೆ ಉದ್ಧವ್ ಠಾಕ್ರೆ ರಾಜೀನಾಮೆಯನ್ನು ರಾಜ್ಯಪಾಲ ಭಗತ್ ಸಿಂಗ್ ಕೊಶ್ಯಾರಿ ಅಂಗೀಕರಿಸಿದ್ದಾರೆ.

ಬಿಜೆಪಿ ಸಂಭ್ರಮಾಚರಣೆ ಶುರು: ಉದ್ಧವ್ ಠಾಕ್ರೆ ರಾಜೀನಾಮೆ ನೀಡುತ್ತಿದ್ದಂತೆ ಬಿಜೆಪಿ ಸಂಭ್ರಮಾಚರಣೆ ಆರಂಭಿಸಿದೆ. ಬಿಜೆಪಿ ಶಾಸಕರು ಜಮಾಯಿಸಿದ ಹೋಟೆಲ್ ತಾಜ್ ಪ್ರೆಸಿಡೆಂಟ್‌ಗೆ ಸಿಹಿತಿಂಡಿಗಳನ್ನು ತಂದು ಖುಷಿ ಆಚರಿಸಿದ್ದಾರೆ. ನಾಳೆ ಬಿಜೆಪಿ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಸರ್ಕಾರ ರಚನೆ ಹಕ್ಕು ಪ್ರತಿಪಾದಿಸುವ ಸಾಧ್ಯತೆಗಳಿವೆ. ಈ ಮಧ್ಯೆ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ಬಂಡಾಯ ಶಾಸಕರು ಗೌಹಾತಿಯಿಂದ ಗೋವಾಕ್ಕೆ ತಮ್ಮ ಕ್ಯಾಂಪ್ ಸ್ಥಳಾಂತರಿಸಿದ್ದಾರೆ.

ಕಾಂಗ್ರೆಸ್‌ಗೆ ಅಧಿಕಾರ ಸಾಧ್ಯ

ಹೋಗಬೇಕು. ಸಿದ್ದರಾಮಯ್ಯ ನಾಯಕತ್ವ ಇರಲಿ. ನಿಮ್ಮನ್ನು ಕಡೆಗಣಿಸುವುದಿಲ್ಲ. ನಿಮಗೆ ಯಾವ ಸ್ಥಾನ ದೊರೆಯಬೇಕೋ ಆ ಸ್ಥಾನ ದೊರೆಯಲಿದೆ ಎಂದು ಶಿವಕುಮಾರ್ ಅವರನ್ನು ಸಮಾಧಾನಪಡಿಸಿದ್ದಾರೆ. ಚುನಾವಣೆಯಲ್ಲಿ ಸಾಮೂಹಿಕ ನಾಯಕತ್ವ ಎಂದೇ ಹೇಳುತ್ತೇವೆ. ಒಟ್ಟಾಗಿ ಹೋರಾಟ ಮಾಡಿ. ಇಡೀ ರಾಷ್ಟ್ರದಲ್ಲಿ ನಾವು ಕರ್ನಾಟಕವನ್ನು ನಂಬಿಕೊಂಡಿದ್ದೇವೆ. ನಿಮ್ಮಿಬ್ಬರಲ್ಲಿ ಒಬ್ಬರು ಹಿಂದೆ ಸರಿದರೂ ನಮಗೆ ನಿರಾಶೆ ಆಗುತ್ತದೆ. ನಿನ್ನೆ ತಡರಾತ್ರಿವರೆಗೂ ಸಭೆ ನಡೆಸಿದ ರಾಹುಲ್ ಇವರನ್ನು ಭೋಜನಕ್ಕೆ ಆಹ್ವಾನಿಸಿ ಸಮಚಿತ್ತ ಇರುವಂತೆ ಮುಂದಿಟ್ಟುಕೊಂಡು ಹಿತೋಪದೇಶ ಮಾಡಿದ್ದಾರೆ.

ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ

ವರ್ಷಗಳಿಗೆ ಮಾತ್ರ ಸೀಮಿತವಾಗಿ ಶುಲ್ಕದಿಂದ ವಿನಾಯಿತಿ ನೀಡಿ ಪ್ರಾಂಶುಪಾಲರ ಖಾತೆಗೆ ಜಮೆ ಮಾಡಲು ಅನುಮತಿ ನೀಡಲಾಗುತ್ತಿತ್ತು. ಆದರೆ ಸರ್ಕಾರದ ಆದೇಶದಂತೆ 2022–23ನೇ ಶೈಕ್ಷಣಿಕ ಸಾಲಿನಿಂದ ಶಾಶ್ವತವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಸಮಯದಲ್ಲಿ ವಿದ್ಯಾರ್ಥಿನಿಯರಿಗೆ ರೂ. 456 ಶುಲ್ಕದಿಂದ ಸಂಪೂರ್ಣ ವಿನಾಯತಿ ನೀಡಲಾಗಿರುತ್ತದೆ. ಮುಂದುವರೆದು ಶುಲ್ಕ ಮರುಪಾವತಿಗಾಗಿ ಲೆಕ್ಕಶೀರ್ಷಿಕೆ: 2202–02–001–0–010 ಉಪಶೀರ್ಷಿಕೆ 103ರಡಿಯಲ್ಲಿ ಒದಗಿಸುವ ಅನುದಾನವನ್ನು ಸಂಬಂಧಿಸಿದ ಪ್ರಾಂಶುಪಾಲರ ಖಾತೆಗೆ ಖಜಾನೆ–2 ತಂತ್ರಾಂಶದ ಮೂಲಕ ಬಿಡುಗಡೆಗೊಳಿಸಲು ಅಗತ್ಯ ಕ್ರಮ ಕೈಗೊಳಲು ಈ ಮೂಲಕ ಸೂಚಿಸಿದೆ ಎಂದು ಬಿ.ಸಿ.ನಾಗೇಶ್ ಆದೇಶ ಹೊರಡಿಸಿದ್ದಾರೆ.

ಸೋಲಾರ್ ಸಂಪರ್ಕ

ತಮ್ಮ ವಿದ್ಯುತ್ ಸರಬರಾಜು ನಿಗಮಗಳಿಗೆ ಅರ್ಜಿ ಸಲ್ಲಿಸಿಕೊಳ್ಳಬೇಕು ಎಂದರು. ರಾಜ್ಯದಲ್ಲಿ ಈಗ ಮೂವತ್ನಾಲ್ಕು ಕೃಷಿ ಪಂಪ್‌ಸೆಟ್‌ಗಳಿದ್ದು, ಇನ್ನೂ ಎಂಟು ಲಕ್ಷ ಮಂದಿ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಕೃಷಿ ಪಂಪ್ ಸೆಟ್, ಭಾಗ್ಯಜ್ಯೋತಿ ಯೋಜನೆ ಸೇರಿದಂತೆ ಕೆಲ ಯೋಜನೆಗಳಿಗಾಗಿ ಸರ್ಕಾರ 15 ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನದ ರೂಪದಲ್ಲಿ ನೀಡುತ್ತಿದೆ ಎಂದರು. ರಾಜ್ಯದಲ್ಲಿ ವಿದ್ಯುತ್ ಬೇಡಿಕೆಯ ಪ್ರಮಾಣ ಎಂಟು ಸಾವಿರ ಮೆಗಾವ್ಯಾಟ್‌ನಷ್ಟಿದೆ.ಈ ಹಿಂದೆ ವಿದ್ಯುತ್ ಕೊರತೆಯಾದಾಗ ಹೊರರಾಜ್ಯಗಳಿಂದ ವಿದ್ಯುತ್ ಖರೀದಿಸುವ ಕೆಲಸ ನಡೆಯುತ್ತಿತ್ತು.ಆದರೆ ಈಗ ಖಾಸಗಿಯವರಿಗೆ ಮತ್ತು ಹೊರರಾಜ್ಯಗಳಿಗೆ ವಿದ್ಯುತ್ ಮಾರಾಟ ಮಾಡುವ ಸುಸ್ಥಿತಿಯಲ್ಲಿದ್ದೇವೆ ಎಂದರು. ಕಳೆದ ಮೂರು ತಿಂಗಳಲ್ಲಿ ತೆಲಂಗಾಣ ಸೇರಿದಂತೆ ವಿವಿಧ ರಾಜ್ಯಗಳು ಮತ್ತು ಖಾಸಗಿಯವರಿಗೆ ಎರಡೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಮೌಲ್ಯದ ವಿದ್ಯುತ್ ಮಾರಾಟ ಮಾಡಲಾಗಿದೆ ಎಂದರು. ರಾಜ್ಯದ ವಿದ್ಯುತ್ ಘಟಕಗಳಿಗೆ ಸದ್ಯಕ್ಕೆ ಕಲ್ಲಿದ್ದಲಿನ ಕೊರತೆ ಇಲ್ಲ. ಈಗಾಗಲೇ ಮೂರು ಕೇಂದ್ರಗಳಿಂದ ರಾಜ್ಯಕ್ಕೆ ಹದಿಮೂರು ರೇಕುಗಳಷ್ಟು ಕಲ್ಲಿದ್ದಲನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಈ ಮಧ್ಯೆ ದೇಶದಲ್ಲಿ ಕಲ್ಲಿದ್ದಲಿನ ಒಟ್ಟಾರೆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಿದೇಶಗಳಿಂದ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದ್ದು,ಆಮದು ಕಲ್ಲಿದ್ದಲು ದೊರೆತರೆ ಅದನ್ನು ಖರೀದಿ ಮಾಡುವುದಾಗಿ ಸ್ಪಷ್ಟಪಡಿಸಿದರು.

ಕ್ರೆಡಿಟ್‌ಗಾಗಿ ಬೀದಿ ರಂಪಾಟ

ಕಚೇರಿ ಮುಂದೆಯೇ ಚರ್ಚೆಗೆ ತಾವು ಸಿದ್ಧ ಎಂದು ಸಂಸಪ ಪ್ರತಾಪ್‌ಸಿಂಹ ಅವರಿಗೆ ಬಹಿರಂಗ ಆಹ್ವಾನ ನೀಡಿದ್ದರು. ಅದಕ್ಕೆ ಪ್ರತಿಯಾಗಿ ಪ್ರತಾಪ್‌ಸಿಂಹ ತಾವು ಲಕ್ಷ್ಮಣ ಅವರೊಂದಿಗೆ ಚರ್ಚಿಸುವುದಿಲ್ಲ. ಸಿದ್ದರಾಮಯ್ಯನವರೇ ಬರಲಿ ಎಂದು ಆಹ್ವಾನ ನೀಡಿದ್ದರು. ಈ ಇಬ್ಬರು ನೀಡಿದ್ದ ಆಹ್ವಾನ ಇಂದು ತಾರಕಕ್ಕೇರಿತು. ಎರಡು ಪಕ್ಷದವರು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು.

ಬಿಜೆಪಿ–ಕಾಂಗ್ರೆಸ್ ಪ್ರತ್ಯೇಕ ಪ್ರತಿಭಟನೆ: ಬೆಳಗ್ಗೆ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು, ಅಧ್ಯಕ್ಷ ಕಿರಣ್‌ಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ದೇವರಾಜ್ ನೇತೃತ್ವದಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ವೃತ್ತ (ಮೆಟ್ರೊಪೋಲ್ ವೃತ್ತ)ದಲ್ಲಿ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಹಾಗೂ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ವಿರುದ್ಧ ಘೋಷಣೆಗಳನ್ನು ಕೂಗಿದರು. ಈ ವೇಳೆ ದಾಸಪ್ಪ ವೃತ್ತದ ಬಳಿಯಿರುವ ಕಾಂಗ್ರೆಸ್ ಕಚೇರಿಯತ್ತ ತೆರಳಲು ಮುಂದಾದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು, ಜೆಎಲ್‌ಬಿ ರಸ್ತೆಗೆ ಅಡ್ಡಲಾಗಿ ಹಾಕಿದ್ದ ಬ್ಯಾರಿಕೇಡ್ ಅನ್ನು ದಾಟಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ತೆರಳಲು ಯತ್ನಿಸಿದರು. ಕೂಡಲೇ ಪೊಲೀಸರು ಅವರನ್ನು ತಡೆದು, ವಶಕ್ಕೆ ತೆಗೆದುಕೊಂಡರು. ಬಳಿಕ ಮಧ್ಯಾಹ್ನ 12ರ ವೇಳೆಗೆ ತಾವು ನೀಡಿದ್ದ ಸವಾಲಿಗೆ ಅನುಗುಣವಾಗಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅವರು ದಾಖಲೆಗಳೊಂದಿಗೆ ಜಲದರ್ಶಿನಿ ಅತಿಥಿಗೃಹಕ್ಕೆ ಮೆರವಣಿಗೆಯಲ್ಲಿ ತೆರಳಲು ಕಾಂಗ್ರೆಸ್ ಕಚೇರಿಗೆ ಬಂದರು. ಅಲ್ಲಿ ಗೂಡ್ಸ್ ಆಟೋದಲ್ಲಿ ಟೇಬಲ್ ಮತ್ತು ಎರಡು ಕುರ್ಚಿಗಳನ್ನಿಟ್ಟುಕೊಂಡು ಕುಳಿತು, ಮೆರವಣಿಗೆಯಲ್ಲಿ ಜಲದರ್ಶಿನಿಯತ್ತ ತೆರಳಲು ಮುಂದಾದರು. ಚರ್ಚೆಗೆ ಬರುವ ಧೈರ್ಯ ತೋರುವಂತೆ ಪ್ರತಾಪ್‌ಸಿಂಹ ಹಾಗೂ ಬಿಜೆಪಿ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ದಾಸಪ್ಪ ವೃತ್ತದಲ್ಲಿ ಜೆಎಲ್‌ಬಿ ರಸ್ತೆಗೆ ಅಡ್ಡಲಾಗಿ ಪೊಲೀಸರು ಹಾಕಿದ್ದ ಬ್ಯಾರಿಕೇಡ್ ಅನ್ನು ಭೇದಿಸಿ ಹೊರಬಂದ ಲಕ್ಷ್ಮಣ ಅವರನ್ನು ಪೊಲೀಸರ ಅಡ್ಡಗಟ್ಟಿದರು. ಸಂಸದರ ಕಚೇರಿಯತ್ತ ತೆರಳಲು ಅನುಮತಿ ಇಲ್ಲ ಎಂದು ತಡೆ ಒಡ್ಡಿದರು. ಈ ವೇಳೆ ಪೊಲೀಸರೊಂದಿಗೆ ವಾಗ್ವಾದಕ್ಕಿಳಿದ ಲಕ್ಷ್ಮಣ, ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ನಡೆಸಲು ಹಕ್ಕಿದೆ. ತಾವು ಕಾನೂನಾತ್ಮಕವಾಗಿ ಪ್ರತಿಭಟನೆ ನಡೆಸುತ್ತಿರುವುದಾಗಿ ಪೊಲೀಸರ ಧೋರಣೆಯನ್ನು ವಿರೋಧಿಸಿ, ಸ್ಥಳದಲ್ಲಿಯೇ ಧರಣಿ ಕುಳಿತುಕೊಳ್ಳಲು ಮುಂದಾದರು. ತಕ್ಷಣ ಪೊಲೀಸರು ಅವರನ್ನು ವಶಕ್ಕೆ ಪಡೆದರು. ನಂತರ ಇನ್ನಿತರ ಕಾರ್ಯಕರ್ತರು ಬ್ಯಾರಿಕೇಡ್ ದಾಟಿ ಪ್ರತಿಭಟನೆಗೆ ಮುಂದಾದಾಗ ಅವರನ್ನು ವಶಕ್ಕೆ ಪಡೆದರು. ಈ ಸಂದರ್ಭದಲ್ಲಿ ಎಂ.ಲಕ್ಷ್ಮಣ ಅವರು ಸುಮಾರು 300 ಪುಟಗಳ ದಾಖಲೆಗಳನ್ನು ಮಾಧ್ಯಮಗಳಿಗೆ ಪ್ರದರ್ಶಿಸಿ, ಬಿಜೆಪಿ ಸರ್ಕಾರ ಕಾಂಗ್ರೆಸ್ ಪಕ್ಷವನ್ನು ಬಗ್ಗು ಬಡಿಯಲು ಪೊಲೀಸ್ ಇಲಾಖೆಯನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ದೂರಿದರು.

ಕಾಲ ಕಳೆಯುವ ಕಾಂಗ್ರೆಸ್

ಮಾಜಿ ಸಿಎಂ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಮಹದೇವಪ್ಪ ಅವರೊಂದಿಗೆ ಚರ್ಚೆಗೆ ತಾನು ಸಿದ್ಧ. ವೀರರು, ಶೂರರು ಕುದುರೆ ಏರಿ ಯುದ್ಧಕ್ಕೆ ಬರುತ್ತಾರೆ. ಆದರೆ ಅವರು ಹಂದಿ ಏರಿ ಬರುವುದಕ್ಕೆ ಮುಂದಾಗಿದ್ದಾರೆ ಎಂದು ವ್ಯಂಗ್ಯವಾಡಿದರು. ಮಾಜಿ ಸಚಿವರಾದ ಬಳಿಕ ಹೆಚ್.ಸಿ.ಮಹದೇವಪ್ಪ ಕೆಲಸವಿಲ್ಲದೇ ಕುಳಿತಿದ್ದಾರೆ. ಅವರೇ ಚರ್ಚೆಗೆ ಬರಬಹುದಿತ್ತಲ್ಲ ಎಂದ ಅವರು, ಮೈಸೂರು–ಬೆಂಗಳೂರು ದಶಪಥ ರಸ್ತೆಗೆ 9 ಪೈಸೆಯನ್ನು ನೀವು ಕೊಟ್ಟಿದ್ದರೆ ಚರ್ಚೆ ಮಾಡೋಣ ಬನ್ನಿ. ಖಾಲಿಯಾಗಿ ಕುಳಿತಿರುವ ನಿಮಗೇ ಮಾಡಲು ಬೇರೇನೂ ಕೆಲಸ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಆಷಾಢ ಶುಕ್ರವಾರಗಳಂದು ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನ ಸಂಚಾರ ನಿರ್ಬಂಧ

ಲಲಿತಮಹಲ್ ಹೆಲಿಪ್ಯಾಡ್ ಬಳಿ ಖಾಸಗಿ ವಾಹನಗಳಿಗೆ ಪಾರ್ಕಿಂಗ್: ಅಲ್ಲಿಂದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ವ್ಯವಸ್ಥೆ



ಸಂಗ್ರಹ ಚಿತ್ರ

ಮೈಸೂರು,ಜೂ.29(ಆರ್‌ಕೆ)–ಆಷಾಢ ಮಾಸದ ಶುಕ್ರವಾರ ಹಾಗೂ ಶ್ರೀ ಚಾಮುಂಡೇಶ್ವರಿ ವರ್ಧಂತಿ ದಿನದಂದು ಚಾಮುಂಡಿ ಬೆಟ್ಟಕ್ಕೆ ಖಾಸಗಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಈ ಸಂಬಂಧ ಅಧಿಸೂಚನೆ ಹೊರಡಿಸಿರುವ ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಹೆಚ್ಚಿನ ಸಂಖ್ಯೆಯ ಭಕ್ತಾದಿಗಳು ಬರುವುದರಿಂದ ಚಾಮುಂಡಿಬೆಟ್ಟದಲ್ಲಿ ವಾಹನ ನಿಲುಗಡೆಗೆ ಸ್ಥಳಾವಕಾಶವಿಲ್ಲದ ಕಾರಣ ಸಾರ್ವಜನಿಕರ ಹಿತದೃಷ್ಟಿಯಿಂದ ಜುಲೈ 1, 8, 15 ಮತ್ತು 22ರ ಆಷಾಢ ಶುಕ್ರವಾರಗಳಂದು ಹಾಗೂ ಜುಲೈ 20ರ ಶ್ರೀ ಚಾಮುಂಡೇಶ್ವರಿ ವರ್ಧಂತಿಯಂದು ಚಾಮುಂಡಿ ಬೆಟ್ಟಕ್ಕೆ ಸಾರ್ವಜನಿಕರ ವಾಹನ ಸಂಚಾರ ನಿರ್ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಂದು ಚಾಮುಂಡಿಬೆಟ್ಟಕ್ಕೆ ಬರುವ ಭಕ್ತರು ತಮ್ಮ ವಾಹನಗಳನ್ನು ಲಲಿತಮಹಲ್ ಹೆಲಿಪ್ಯಾಡ್ ಬಳಿ ವ್ಯವಸ್ಥೆ ಮಾಡಿರುವ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಿ ಅಲ್ಲಿಂದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತವಾಗಿ ಬೆಟ್ಟಕ್ಕೆ ತೆರಳಬೇಕೆಂದು ಅವರು ತಿಳಿಸಿದ್ದಾರೆ. ಭಕ್ತಾದಿಗಳನ್ನು ಕರೆದೊಯ್ಯುವ ಸಾರಿಗೆ ಬಸ್‌ಗಳು ಲಲಿತಾದ್ರಿಪುರದ ರಸ್ತೆ, ಐವಾಕ್ ರಸ್ತೆ ಮೂಲಕ ಚಾಮುಂಡಿಬೆಟ್ಟದ ರಸ್ತೆ ತಲುಪಿ ಬೆಟ್ಟದ ಮೇಲೆ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಇಳಿಸಿ ಅಲ್ಲಿಂದ ವಾಪಸ್ ಬರುವಾಗ ಚಾಮುಂಡಿಬೆಟ್ಟದ ರಸ್ತೆಯ ಸಂಗೊಳ್ಳಿ ರಾಯಣ್ಣ ಸರ್ಕಲ್ ಬಳಿ ಬಲಕ್ಕೆ ತಿರುಗಿ ಲಲಿತಮಹಲ್ ಮುಖ್ಯ ರಸ್ತೆ ಮೂಲಕ ಲಲಿತ ಮಹಲ್ ಬಳಿ ಮೈದಾನಕ್ಕೆ ತಲುಪಬೇಕು ಎಂದು ಆಯುಕ್ತರು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ಬಸ್ ನಿಲ್ದಾಣದ ಎದುರಿನ ಪಾರ್ಕಿಂಗ್ ಸ್ಥಳದಲ್ಲಿ ಉಚಿತ ಪ್ರಸಾದ ವಿನಿಯೋಗ ಮಾಡುವ ವಾಹನಗಳಿಗೆ ವ್ಯವಸ್ಥೆ ಮಾಡಲಾಗಿದೆ. ಶಿಷ್ಟಾಚಾರ, ಮಾಧ್ಯಮ ಕರ್ತವ್ಯದ ಮೇಲೆ ತೆರಳುವ ವಾಹನಗಳಿಗೆ ಬೆಟ್ಟಕ್ಕೆ ಹೋಗಲು ಅವಕಾಶವಿದ್ದು, ಅವರು ಬಹುಮಹಡಿ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲ್ಲಿಸಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ನಡೆದುಕೊಂಡು ಹೋಗಬೇಕು. ಪ್ರತೀ ಆಷಾಢ ಶುಕ್ರವಾರ ಮತ್ತು ಚಾಮುಂಡೇಶ್ವರಿ ವರ್ಧಂತಿ ದಿನದ ಹಿಂದಿನ ದಿನದ ರಾತ್ರಿ 10 ಗಂಟೆಯಿಂದಲೇ ಚಾಮುಂಡಿಬೆಟ್ಟಕ್ಕೆ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದೆ. ಚಾಮುಂಡಿ ಬೆಟ್ಟ ಗ್ರಾಮದ ನಿವಾಸಿಗಳು ಡಿಎಲ್, ಆರ್‌ಸಿ, ಮತದಾರರ ಗುರುತಿನ ಚೀಟಿ ಜೆರಾಕ್ಸ್ ಪ್ರತಿ ಸಲ್ಲಿಸಿ ಚಾಮುಂಡಿ ಬೆಟ್ಟ ಗ್ರಾಮ ಪಂಚಾಯ್ತಿ ಕಚೇರಿಯಲ್ಲಿ ತಮ್ಮ ವಾಹನಗಳಿಗೆ ಪಾಸ್‌ಗಳನ್ನು ಪಡೆಯಬಹುದಾಗಿದೆ.

ಬಂದೋಬಸ್ತ್ ಕರ್ತವ್ಯಕ್ಕೆ ಬರುವ ಪೊಲೀಸರ ವಾಹನಗಳನ್ನು ದೇವಿಕೆರೆ ಬಳಿ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಬೇಕು. ಬೆಟ್ಟದ ಪಾದದಿಂದ ಮೆಟ್ಟಿಲು ಮೂಲಕ ದೇವಸ್ಥಾನಕ್ಕೆ ಹೋಗುವ ಭಕ್ತಾದಿಗಳು ತಮ್ಮ ವಾಹನಗಳನ್ನು ಪಿಂಜರಾಪೋಲ್ ಸೊಸೈಟಿ ಮುಂಭಾಗದ ಮೈದಾನದಲ್ಲಿ ನಿಲುಗಡೆ ಮಾಡಬೇಕು.

ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಪ್ರತ್ಯೇಕ ಹೆಲ್ಪ್‌ಲೈನ್, ವಿದ್ಯುತ್ ದೀಪ, ಸಿಸಿಟಿವಿ ಕ್ಯಾಮರಾ ವ್ಯವಸ್ಥೆ ಮಾಡಿದ್ದು, ಲಲಿತಮಹಲ್ ಬಳಿಯ ಪಾರ್ಕಿಂಗ್ ಸ್ಥಳದಲ್ಲಿ ಪೊಲೀಸ್ ಭದ್ರತೆ, ಶೌಚಾಲಯ, ಆಂಬುಲೆನ್ಸ್, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಭಕ್ತಾದಿಗಳು ಯಾವುದೇ ಆತಂಕವಿಲ್ಲದೇ ವಾಹನಗಳನ್ನು ನಿಲ್ಲಿಸಿ ಬಸ್‌ನಲ್ಲಿ ತೆರಳಿ ದೇವರ ದರ್ಶನ ಪಡೆಯಬಹುದೆಂದು ಪೊಲೀಸ್ ಆಯುಕ್ತರು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಭಕ್ತಾದಿಗಳು ಸುಗಮ ರೀತಿ ಬಸ್‌ನಲ್ಲಿ ಸಾಗಲು ವ್ಯವಸ್ಥೆ



ಸ್ಥಳ ಪರಿಶೀಲನೆ ನಡೆಸಿದ ಡಿಸಿಪಿ...

ವಾಹನಗಳ ಪಾರ್ಕಿಂಗ್ ಹಾಗೂ ಬಸ್ ಹತ್ತುವ ಸ್ಥಳಕ್ಕೆ ಬುಧವಾರ ಭೇಟಿ ನೀಡಿದ ಡಿಸಿಪಿ ಗೀತಾ ಪ್ರಸನ್ನ ಸ್ಥಳ ಪರಿಶೀಲನೆ ನಡೆಸಿದರು. ಸಾರ್ವಜನಿಕರ ವಾಹನಗಳ ಪಾರ್ಕಿಂಗ್ ಹಾಗೂ ಬಸ್ ಹತ್ತುವಾಗ ಸಾರ್ವಜನಿಕರಿಗೆ ಯಾವುದೇ ತೊಂದರೆ ಹಾಗೂ ಗೊಂದಲಗಳು ಉಂಟಾಗದಂತೆ ವ್ಯವಸ್ಥೆ ಮಾಡುವಂತೆ ಸ್ಥಳದಲ್ಲಿದ್ದವರಿಗೆ ಸೂಚನೆ ನೀಡಿದರು.

ಮೈಸೂರು, ಜೂ.29(ಎಂಕೆ)– ಆಷಾಢ ಮಾಸದ ಶುಕ್ರವಾರಗಳು ಹಾಗೂ ವರ್ಧಂತ್ಯೋತ್ಸವ ದಿನದಂದು ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದರ್ಶನಕ್ಕೆ ಭರದ ಸಿದ್ಧತೆಗಳು ನಡೆದಿದ್ದು, ಉಚಿತ ಬಸ್ ಸೇವೆಗೆ ಲಲಿತ ಮಹಲ್ ಹಿಂಭಾಗದಲ್ಲಿರುವ ಇಂದಿರಾ ಕ್ಯಾಂಟಿನ್ ಪಕ್ಕದ ಮೈದಾನದಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ.

ಲಲಿತಮಹಲ್ ಸಮೀಪದ ಸುಮಾರು 18 ಎಕರೆ ಪ್ರದೇಶದಲ್ಲಿ ಉಚಿತ ಸಾರಿಗೆ ಬಸ್ ಸೇವೆ ಕಲ್ಪಿಸಲಾಗಿದ್ದು, ಸಾರ್ವಜನಿಕರ ದ್ವಿಚಕ್ರ ವಾಹನ ಹಾಗೂ ಕಾರುಗಳ ಪಾರ್ಕಿಂಗ್‌ಗೆ ಪ್ರತ್ಯೇಕ ಸ್ಥಳ ನಿಗದಿ ಮಾಡಲಾಗಿದೆ. ಸಾರ್ವಜನಿಕರು ಗುಂಪು ಗೂಡದೆ ಒಬ್ಬೊಬ್ಬರಾಗಿ ಬಸ್‌ಗಳನ್ನು ಹತ್ತಲು ಸುಸಜ್ಜಿತ ವ್ಯವಸ್ಥೆ ಮಾಡಲಾಗುತ್ತಿದೆ.

ಚಾಮುಂಡಿಬೆಟ್ಟಕ್ಕೆ ಬಸ್ ಹೋಗುವ ಭಕ್ತರಿಗೆ ಮಳೆಯಿಂದ ಅಡ್ಡಿಯಾಗದಂತೆ ದೊಡ್ಡ ಮಟ್ಟದಲ್ಲಿ ಶಾಮಿಯಾನ ಅಳವಡಿಸಲಾಗಿದೆ. ಶಾಮಿಯಾನ ದೊಳಗೆ ಸಾಲಾಗಿ ಸಾಗಿ ಸಾರಿಗೆ ಬಸ್ ಹತ್ತಲು ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆ. ಜೋರು ಮಳೆ ಬಂದರೂ ಯಾವುದೇ ಅಡ್ಡಿ ಇಲ್ಲದಂತೆ ಚಾಮುಂಡೇಶ್ವರಿ ದರ್ಶನ ಪಡೆಯಬಹುದಾಗಿದೆ. ಉಚಿತ ಬಸ್ ಸೇವೆಯ ಸ್ಥಳದ ಸುತ್ತಲೂ ಬೆಳೆದು ನಿಂತಿದ್ದ ಗಿಡ–ಗಂಟಿಗಳನ್ನು ಜೆಸಿಬಿಗಳಿಂದ ತೆರವುಗೊಳಿಸಲಾಗಿದೆ. ಅಲ್ಲದೆ ಗುಂಡಿಗಳಿಗೆ ಮಣ್ಣು ಹಾಕಿ ಸಮದಟ್ಟು ಮಾಡುವ ಪ್ರಕ್ರಿಯೆಯೂ ಭರದಿಂದ ಸಾಗುತ್ತಿದೆ.

50 ಬಸ್‌ಗಳ ಸೇವೆ: ಆಷಾಢ ಶುಕ್ರವಾರ ಹಾಗೂ ವರ್ಧಂತ್ಯೋತ್ಸವ ಅಂಗವಾಗಿ ಉಚಿತ ಬಸ್ ಸೇವೆಗೆ ಕೆಎಸ್‌ಆರ್‌ಟಿಸಿಯಿಂದ 50 ಬಸ್‌ಗಳನ್ನು ಪಡೆದುಕೊಳ್ಳಲಾಗಿದ್ದು, ಒಂದು ಬಸ್‌ಗೆ 50 ಜನರಂತೆ ಒಂದು ಟ್ರಿಪ್‌ಗೆ 2500 ಮಂದಿ ಭಕ್ತರನ್ನು ಚಾಮುಂಡಿಬೆಟ್ಟಕ್ಕೆ ಕರೆದುಕೊಂಡು ಹೋಗಲಾಗುವುದು ಎಂದು ಎಡಿಸಿ ಮಂಜುನಾಥಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದೇವಾಲಯಕ್ಕೆ ಬರುವ ಭಕ್ತರು 2 ಡೋಸ್ ಕೊರೊನಾ ಲಸಿಕೆ ಪಡೆದಿರುವ ದಾಖಲೆ ಹೊಂದಿರಬೇಕು. ಇಲ್ಲವೇ 72 ಗಂಟೆ ಮುಂಚಿನ ಕೋವಿಡ್ ನೆಗೆಟಿವ್ ವರದಿ ಪಡೆದಿರಬೇಕು. ಲಲಿತಮಹಲ್ ಬಳಿ, ಬೆಟ್ಟದ ಮೆಟ್ಟಿಲು ಮಾರ್ಗದಲ್ಲಿ ಈ ದಾಖಲೆಗಳನ್ನು (ಮೊಬೈಲ್ ನಲ್ಲೂ ಪ್ರದರ್ಶಿಸಬಹುದು) ಪರಿಶೀಲಿಸಲಾಗುತ್ತದೆ ಎಂದರು.

ಸೋಲಾರ್ ಪವರ್ ಪ್ರಾಜೆಕ್ಟ್: ಭಾರೀ ವಂಚನೆ

ಹಣ ಕಳೆದುಕೊಂಡವರು ಸಿಸಿಬಿ ಎಸಿಪಿಯವರನ್ನು ಸಂಪರ್ಕಿಸಲು ಸೂಚನೆ

ಮೈಸೂರು, ಜೂ.29(ಆರ್‌ಕೆ) ಸೋಲಾರ್ ಪವರ್ ಪ್ರಾಜೆಕ್ಟ್ ಮಾಡಿಸಿಕೊಡುವುದಾಗಿ ನಂಬಿಸಿ ಸಾರ್ವಜನಿಕರಿಂದ ಕೋಟ್ಯಾಂತರ ರೂ. ಹಣ ಪಡೆದು ವಂಚಿಸುತ್ತಿರುವ ಪ್ರಕರಣಗಳು ಮೈಸೂರು ನಗರ ವ್ಯಾಪ್ತಿಯಲ್ಲಿ ಹೆಚ್ಚಾಗುತ್ತಿದೆ.



ಈ ಕುರಿತು ಮಾಹಿತಿ ನೀಡಿರುವ ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಎಂಎನ್‌ಆರ್‌ಇ ಸೋಲಾರ್ ಎನರ್ಜಿ ಕಾರ್ಪೊರೇಷನ್, ಮೆ॥ ಅನುಶ್ರೀ ಗ್ರೀನ್‌ಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಮೆ॥ ಧನುಷ್ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್, ಮೆ॥ ಡಿಜಿಎಫ್‌ಎಸ್‌ಎಲ್ ಇಂಡಿಯಾ, ಮೆ॥ ಧನುಷ್ ಗ್ರೂಪ್, ಮೆ॥ ತ್ರಿಶಾ ಮೀಡಿಯಾ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್, ಮೆ॥ ಎಕ್ಸಲೆಂಟ್ ಸೋಲಾರ್ಸ್ ಪ್ರೈ.ಲಿ., ಮೆ॥ ಅನಂತ ಎನರ್ಜಿ ಸೊಲ್ಯೂಷನ್ಸ್ ಪ್ರೈ.ಲಿ. ಹಾಗೂ ಮೆ॥ ಅನಂತೇಶ್ವರ ಗ್ರೀನ್ ಎನರ್ಜಿ ಸೊಲ್ಯೂಷನ್ಸ್ ಪ್ರೈ.ಲಿ. ಸಂಸ್ಥೆಗಳು ಸಾರ್ವಜನಿಕರಿಂದ ಹಣ ಹೂಡಿಕೆ ಮಾಡಿಸಿ, ವಂಚಿಸಿವೆ ಎಂದು ತಿಳಿಸಿದ್ದಾರೆ.

ಈ ಸಂಸ್ಥೆಗಳು ತಮ್ಮ ಬ್ಯಾಂಕ್ ಖಾತೆಗಳಿಗೆ ಹೂಡಿಕೆದಾರರಿಂದ ಕೋಟ್ಯಾಂತರ ರೂ. ಹಣವನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಸಂಬಂಧ ಮೈಸೂರಿನ ಸೆನ್ ಕ್ರೈಂ ಸ್ಟೇಷನ್‌ನಲ್ಲಿ ಪ್ರಕರಣಗಳು ದಾಖಲಾಗಿದ್ದು, ಸಿಸಿಬಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಹಲವಾರು ಮಂದಿ ಆರೋಪಿಗಳು ಸೂಚಿಸಿರುವ ಸಂಸ್ಥೆಗಳ ಬ್ಯಾಂಕ್ ಖಾತೆಗಳಿಗೆ ಹಣ ಹೂಡಿರುವುದು ತನಿಖೆಯಿಂದ ತಿಳಿದು ಬಂದಿದೆ ಎಂದು ತಿಳಿಸಿದ್ದಾರೆ. ಈ ಸಂಸ್ಥೆಗಳಿಗೆ ಹಣ ಹೂಡಿಕೆ ಮಾಡಿ ವಂಚನೆಗೊಳಗಾಗಿರುವವರು, ಸಂಬಂಧಪಟ್ಟ ದಾಖಲೆ, ಸಾಕ್ಷ್ಯಾಧಾರಗಳೊಂದಿಗೆ ತನಿಖಾಧಿಕಾರಿಯಾದ ಸಿಸಿಬಿ ಘಟಕದ ಎಸಿಪಿ ಅವರನ್ನು ಖುದ್ದಾಗಿ ಅಥವಾ ದೂ.ಸಂ. 9480802207 ಮೂಲಕ ಸಂಪರ್ಕಿಸುವಂತೆ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಈಗಾಗಲೇ ಹಲವು ಮಂದಿ ಈ ಸಂಸ್ಥೆಗಳಿಗೆ ಕೋಟ್ಯಾಂತರ ರೂ. ಹಣ ಪಾವತಿಸಿವೆಂತಾದರೂ, ಸೋಲಾರ್ ಪವರ್ ಪ್ರಾಜೆಕ್ಟ್ ಅನ್ನು ಕೊಡಿಸದೆ, ಪ್ರಕ್ರಿಯೆಗೆಂದು ಮುಂಬೈ, ಕೊಲ್ಕತ್ತಾ, ದೆಹಲಿ ನಗರಗಳಿಗೂ ಕರೆದೊಯ್ದು, ಲಕ್ಷಾಂತರ ರೂ. ವ್ಯರ್ಥ ಮಾಡಿಸಿರುವ ವಂಚಕರು, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಓಡಾಡುತ್ತಿದ್ದಾರೆ ಎಂದು ಹಣ ಕಳೆದುಕೊಂಡಿರುವವರು ದೂರಿನಲ್ಲಿ ತಿಳಿಸಿದ್ದಾರೆ.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ರಾಮದಾಸ್ ಚಾಲನೆ



ಮೈಸೂರು, ಜೂ.29(ಎಂಟಿವೈ)– ಮೈಸೂರಿನ ಕೆ.ಆರ್. ಕ್ಷೇತ್ರ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಎ.ರಾಮದಾಸ್ ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಲೋಕೋಪಯೋಗಿ ಇಲಾಖೆ ತುಳಸಿದಾಸಪ್ಪ ವೃತ್ತದಿಂದ ಮಾನಂದವಾಡಿ ಮುಖ್ಯ ರಸ್ತೆಯ ಮಾರ್ಗವಾಗಿ ನಾಚನಹಳ್ಳಿ ಪಾಳ್ಯದ ರೈಲ್ವೆ ಅಂಡರ್‌ಬ್ರಿಡ್ಜ್‌ವರೆಗೂ ರಸ್ತೆ ಡಾಂಬರೀಕರಣ ಕಾಮಗಾರಿ, 51ನೇ ವಾರ್ಡಿನ ವ್ಯಾಪ್ತಿ ರಾಮಾನುಜ ರಸ್ತೆ 13ನೇ ಕ್ರಾಸ್ ಹಾಗೂ ಹರಿಶ್ಚಂದ್ರ ರಸ್ತೆಯಲ್ಲಿ ಯುಜಿಡಿ ಕಾಮಗಾರಿಗೆ ಚಾಲನೆ ನೀಡಿದರು.

ಇದೇ ವೇಳೆ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಮೈಸೂರಿನಲ್ಲಿ ಕೃಷ್ಣರಾಜ ಕ್ಷೇತ್ರ ಅತ್ಯಂತ ಹಳೆಯ ಕ್ಷೇತ್ರವಾಗಿದ್ದು, ಹಲವು ಹಳೆಯ ಬಡಾವಣೆಗಳನ್ನು ಹೊಂದಿದೆ. ಈ ಹಿಂದೆ ಇದ್ದ ಜನಸಂಖ್ಯೆಗೆ ಅನುಗುಣವಾಗಿ ರಾಜರ ಕಾಲದಲ್ಲಿ ಯುಜಿಡಿ ಲೈನ್ ನಿರ್ಮಿಸಲಾಗಿತ್ತು. ಆದರೆ ಇಂದು ಭಾರೀ ಪ್ರಮಾಣದಲ್ಲಿ ಮನೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳು ತಲೆ ಎತ್ತಿವೆ. ಜನಸಂಖ್ಯೆಯೂ ಹೆಚ್ಚಾಗಿರುವುದರಿಂದ ಯುಜಿಡಿ ಲೈನ್‌ಗಳ ರೀ ಮಾಡಲಿಂಗ್ ಅವಶ್ಯಕತೆಯಿತ್ತು. ಈ ಕಾರಣದಿಂದ ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಗೆ ಬರುವ 53 ಸ್ಥಳಗಳಲ್ಲಿ ಸುಮಾರು 15 ಕೋಟಿ ರೂ. ವೆಚ್ಚದಲ್ಲಿ ಯುಜಿಡಿ ಕಾಮಗಾರಿ ಆರಂಭಿಸಲಾಗಿದೆ. ನಿರಂತರ ದೂರು ಬಂದಿರುವ ಹಿನ್ನೆಲೆಯಲ್ಲಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ಷೇತ್ರದಲ್ಲಿ ಯುಜಿಡಿ ಸಮಸ್ಯೆ ಉದ್ಭವಿಸದಂತೆ ತ್ವರಿತವಾಗಿ ಕಾಮಗಾರಿ ನಡೆಸಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶಾರದಾ ಈಶ್ವರ್, ಶಾಂತಮ್ಮ ವಡಿವೇಲು, ಬಿ.ವಿ.ಮಂಜುನಾಥ್, ಪಿ.ಟಿ.ಕೃಷ್ಣ, ಬಿಜೆಪಿ ಅಧ್ಯಕ್ಷ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ಜೆ.ನಾಗೇಂದ್ರ ಕುಮಾರ್, ಬಾಲಕೃಷ್ಣ, ಪುರುಷೋತ್ತಮ, ಶಿವಪ್ಪ, ಮುರುಳಿ, ರಾಜೀವ್, ರಾಜು, ಮಧು ಇನ್ನಿತರರು ಉಪಸ್ಥಿತರಿದ್ದರು.

ಅತ್ತೆ–ಮಾವ ಕಿರುಕುಳ: ಗೃಹಿಣಿ ಆತ್ಮಹತ್ಯೆ

ಮೈಸೂರು, ಜೂ.29– ಡೆತ್‌ನೋಟ್ ಬರೆದಿಟ್ಟು ಗೃಹಿಣಿ ನೇಣಿಗೆ ಶರಣಾಗಿದ್ದು, ಆಕೆಯ ಅತ್ತೆ, ಮಾವ ಸೇರಿದಂತೆ ಐವರ ವಿರುದ್ಧ ಪ್ರಕರಣ ದಾಖಲಾಗಿರುವ ಘಟನೆ ಮೈಸೂರಿನ ರಾಘವೇಂದ್ರನಗರದಿಂದ ವರದಿಯಾಗಿದೆ.

ಅಲ್ಲಿನ ನಿವಾಸಿ ಹೇಮಂತ್ ಎಂಬುವರ ಪತ್ನಿ ಭಾಗ್ಯಲಕ್ಷ್ಮೀ (30) ಆತ್ಮಹತ್ಯೆಗೆ ಶರಣಾದವರಾಗಿದ್ದು, ಬೆಂಗಳೂರಿನ ಎಂಟಿಎಸ್ ಲೇಔಟ್‌ನ ಶಿವಯೋಗಿ ಅವರ ಪುತ್ರಿಯಾದ ಇವರು 2014ರ ಸೆಪ್ಟೆಂಬರ್ 28ರಂದು ಹೇಮಂತ್ ಅವರನ್ನು ಮದುವೆಯಾಗಿದ್ದರು. ಅಂದಿನಿಂದಲೇ ಈಕೆಯ ಗಂಡನ ಮನೆಯವರು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರು ಎಂದು ಹೇಳಲಾಗಿದ್ದು, ಜೂ.26ರಂದು ಬೆಳಗ್ಗೆ ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾಗಿದ್ದಾರೆ. ತನ್ನ ಪತಿಗೆ ಪತ್ರ ಬರೆದಿರುವ ಭಾಗ್ಯಲಕ್ಷ್ಮೀ 'ನಿಮ್ಮ ಅಪ್ಪ–ಅಮ್ಮ ಆಡಿರುವ ಮಾತುಗಳು ತುಂಬಾ ಬೇಜಾರಾಯಿತು. ನನ್ನ ಕಡೆ ಯಾರು ಇಲ್ಲ. ಗಂಡನಾಗಿ ನೀವು ಮಾತಾಡಲ್ಲ. ನಮ್ಮ ಅಪ್ಪ–ಅಮ್ಮ ಕೂಡ ಮಾತಾಡಲ್ಲ. ನನಗೂ ಮರ್ಯಾದೆ ಇದೆ. ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಿ. ನಿಮ್ಮ ಅಮ್ಮ ನನ್ನ ಮಕ್ಕಳನ್ನು ಯಾವುದೇ ಕಾರಣಕ್ಕೂ ಮುಟ್ಟುವ ಹಾಗಿಲ್ಲ. ಮಾವ ನನಗೆ ಮೆಟ್ಟಿನಲ್ಲಿ ಹೊಡೆಯುವುದಾಗಿ ಹೇಳಿದರು. ನನ್ನ ಮಕ್ಕಳನ್ನು ನನಗಿಂತ ಚೆನ್ನಾಗಿ ನೋಡಿಕೊಳ್ಳಿ. ನಿಮ್ಮ ಅಮ್ಮನ ಹತ್ತಿರ ಮಾತ್ರ ಬಿಡಬೇಡಿ' ಎಂದು ಬರೆದಿದ್ದಾರೆ.

ಈ ಸಂಬಂಧ ಡೆತ್‌ನೋಟ್ ಸಮೇತ ಭಾಗ್ಯಲಕ್ಷ್ಮೀ ತಂದೆ ಶಿವಯೋಗಿ ನೀಡಿದ ದೂರಿನ ಮೇರೆಗೆ ಭಾಗ್ಯಲಕ್ಷ್ಮೀ ಅತ್ತೆ ಸುನಂದಮ್ಮ, ಮಾವ ರಾಜಣ್ಣ, ಮೈದುನ ಸುಮಂತ್, ಆತನ ಹೆಂಡತಿ ಶಿಲ್ಪ ಮತ್ತು ಬೆಂಗಳೂರಿನ ಟೈಲರ್ ಕುಮಾರ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪ್ರಗತಿ ಪರಿಶೀಲನಾ ಸಭೆ

ಮೈಸೂರು,ಜೂ.29 ತಾಲೂಕು ಪಂಚಾಯಿತಿ ವತಿಯಿಂದ ಶಾಸಕ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳ (20 ಅಂಶಗಳ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಜು.4ರಂದು ಬೆಳಗ್ಗೆ 10 ಗಂಟೆಗೆ ಜಿಪಂನ ಅಬ್ದುಲ್ ನಜೀರ್‌ಸಾಬ್ ಮುಖ್ಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸಭೆಯಲ್ಲಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಉಪಸ್ಥಿತರಿರುವರು.



ಮೈಸೂರು ನಗರ ಕನ್ನಡಪರ ಸಂಘಟನೆಯು ನಾಗರಿಕ ಹಿತರಕ್ಷಣಾ ವೇದಿಕೆ 32ನೇ ವಾರ್ಷಿಕೋತ್ಸವದ ಅಂಗವಾಗಿ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಶೇಷಾದ್ರಿಪುರಂ ಕಾಲೇಜಿನ ದೀಕ್ಷಿತಾಗೆ ಡಿಸಿ ಡಾ.ಬಗಾದಿಗೌತಮ್ ಅವರ ಮೂಲಕ ಅಭಿನಂದಿಸಿ, 5 ಸಾವಿರ ರೂ. ಚೆಕ್ ನೀಡಲಾಯಿತು. ವೇದಿಕೆ ಅಧ್ಯಕ್ಷ ಮಂಜುನಾಥ (ಮಿಲ್ಕ್ ಮಂಜು), ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣಗೌಡ, ಉಪಾಧ್ಯಕ್ಷ ಮೆಸ್ ಬಾಬು, ಮೋಹನ್, ಧನಶೇಖರ್, ರಂಗಪ್ಪಗೌಡ, ಅಶ್ವಿನ್‌ಕುಮಾರ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಆಷಾಢ ಶುಕ್ರವಾರ: ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ–ಒಳಚರಂಡಿ ಕಾರ್ಮಿಕರ ಸಂಘದಿಂದ ಚಾಮುಂಡಿಬೆಟ್ಟ ಮೆಟ್ಟಿಲು ಸ್ವಚ್ಛತೆ



ಮೈಸೂರು,ಜೂ.29(ಎಂಟಿವೈ)– ಆಷಾಢ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವದ ಹಿನ್ನೆಲೆಯಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ಚಾಮುಂಡಿ ಬೆಟ್ಟದ ಮೆಟ್ಟಿಲುಗಳ ಸ್ವಚ್ಛತಾ ಕಾರ್ಯ ನಡೆಸಿದರು.

ಬುಧವಾರ ಸ್ವಚ್ಛತಾ ಅಭಿಯಾನ ಆರಂಭಿಸಿದ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಬೆಟ್ಟದ ತಪ್ಪಲಿನಿಂದ ದೇವಾಲಯದವರೆಗೂ ಸ್ವಚ್ಛತಾ ಕಾರ್ಯ ನಡೆಸಿದರು. ಮಾರ್ಗದುದ್ದಕ್ಕೂ ಬಿದ್ದಿದ್ದ ವಿವಿಧ ತ್ಯಾಜ್ಯ, ಪ್ಲಾಸ್ಟಿಕ್ ಪೇಪರ್, ಬಾಟಲ್ ಸೇರಿದಂತೆ ಇನ್ನಿತರೆ ವಸ್ತುಗಳನ್ನು ಸಂಗ್ರಹಿಸಿದರು. ಮೆಟ್ಟಿಲುಗಳ ಮೂಲಕ ಹಾದು ಹೋಗುವ ಭಕ್ತರು ಹಾಗೂ ಪ್ರವಾಸಿಗರು ಮೆಟ್ಟಿಲುಗಳ ಆಜುಬಾಜಲ್ಲಿ ಅರಣ್ಯಕ್ಕೆ ಸೇರಿದ ಜಾಗದಲ್ಲಿ ಪ್ಲಾಸ್ಟಿಕ್ ಸೇರಿದಂತೆ ಪರಿಸರಕ್ಕೆ ಮಾರಕವಾದ ವಸ್ತುಗಳನ್ನು ಎಸೆದು ಹೋಗುವ ಮೂಲಕ ಪರಿಸರಕ್ಕೆ ಹಾನಿಯುಂಟು ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಆಷಾಢ ಶುಕ್ರವಾರ ವಿಶೇಷ ಪೂಜಾ ಮಹೋತ್ಸವ ಆರಂಭಕ್ಕೆ ಕೇವಲ ಎರಡು ದಿನ ಮಾತ್ರವಿದ್ದು, ಈ ಹಿನ್ನೆಲೆಯಲ್ಲಿ ಮೆಟ್ಟಿಲುಗಳ ಮೂಲಕ ಸಾವಿರಾರು ಭಕ್ತರು ಬೆಟ್ಟಕ್ಕೆ ಆಗಮಿಸುವುದರಿಂದ ಸ್ವಚ್ಛತಾ ಕಾರ್ಯ ನಡೆಸಿ, 15 ಮೂಟೆಯಷ್ಟು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ, ಬೆಟ್ಟದ ಗ್ರಾ.ಪಂ ಸ್ವಚ್ಛತಾ ಸಿಬ್ಬಂದಿಯ ಸುಪರ್ದಿಗೆ ನೀಡಿದರು.

ಚಾಲನೆ: ಬೆಟ್ಟದ ತಪ್ಪಲಿನಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಅಂಕಣಕಾರ, ಸಾಹಿತಿ ಬನ್ನೂರು ಕೆ.ರಾಜು ಮೆಟ್ಟಿಲುಗಳ ಕಸ ಗುಡಿಸುವ ಮೂಲಕ ಚಾಲನೆ ನೀಡಿದರು. ಇದೇ ವೇಳೆ ಮಾತನಾಡಿದ ಅವರು, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಈ ಹಿಂದೆ ಭಾರತ ಎಲ್ಲಾ ರೀತಿಯಲ್ಲೂ ಪರಿಶುದ್ಧವಾಗಿರಬೇಕು ಎಂಬ ಆಶಯದಿಂದ ಸ್ವಚ್ಛಭಾರತ್ ಕನಸು ಕಂಡಿದ್ದರು. ಅವರ ಕನಸನ್ನು ಇಂದು ನನಸು ಮಾಡಲು ಪ್ರಧಾನಿ ನರೇಂದ್ರ ಮೋದಿ ಪ್ರಯತ್ನಿಸುತ್ತಿದ್ದಾರೆ. ಮೈಸೂರಿನ ಕಾರ್ಮಿಕ ಸಂಘಟನೆಗಳಲ್ಲೊಂದಾದ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘವು ಆಷಾಢ ಮಾಸದ ಅಂಗವಾಗಿ ಚಾಮುಂಡಿಬೆಟ್ಟದ ಮೆಟ್ಟಿಲುಗಳ ಸ್ವಚ್ಛತಾ ಅಭಿಯಾನ ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಮಾಜಿ ಉಪ ಮೇಯರ್ ಸಿದ್ದರಾಜು ಮಾತನಾಡಿ, ದೇಶಕ್ಕೆ ಮಾದರಿಯಾಗಿದ್ದ ನಮ್ಮ ನಾಲ್ವಡಿ ಕೃಷ್ಣರಾಜ ಒಡೆಯರು, ಅಂದಿನ ಕಾಲದಲ್ಲಿಯೇ ಕೆರೆ–ಕಟ್ಟೆ, ಅಣೆಕಟ್ಟೆಗಳು, ಶೈಕ್ಷಣಿಕ ಸಂಸ್ಥೆಗಳು, ಅರಮನೆ– ಗುರುಮನೆಗಳು, ಕೃಷಿ–ಪಶು ಸಂಗೋಪನೆ, ಮಹಿಳಾಭಿವೃದ್ಧಿ, ಕೈಗಾರಿಕೆಗಳು, ಆಸ್ಪತ್ರೆಗಳು ಸೇರಿದಂತೆ ಪ್ರತಿಯೊಂದನ್ನು ಪ್ರಜೆಗಳಿಗೆ ಒದಗಿಸಿಕೊಟ್ಟು ಜನಾನುರಾಗಿಯಾಗಿದ್ದರು. ಇವರ ಸ್ಮರಣೆಯಲ್ಲಿ ಇಂತಹ ಸಾರ್ಥಕವಾದ ಕಾರ್ಯ ಮಾಡುತ್ತಿರುವುದು ಅರ್ಥಪೂರ್ಣವಾಗಿದೆ ಎಂದು ಹೇಳಿದರು.

ಅಭಿಯಾನದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಯನಗರ ಎಸ್.ಮಹೇಶ್, ಆಶೀರ್ವಾದ್ ಕಂಪನಿಯ ಪ್ರೊ.ರುದ್ರಸ್ವಾಮಿ, ಸಂಘದ ಕಾನೂನು ಸಲಹೆಗಾರ ಸುಂದರ್ ರಾಜ್, ಸಂಘದ ಉಪಾಧ್ಯಕ್ಷ ಸುರೇಶ್, ಪ್ರಧಾನ ಕಾರ್ಯದರ್ಶಿ ಕಾಳೇಗೌಡ, ಖಜಾಂಚಿ ಎಂ.ರವಿಕುಮಾರ್, ಸಹ ಕಾರ್ಯದರ್ಶಿ ಪಳನಿಸ್ವಾಮಿ, ನಿರ್ದೇಶಕರಾದ ಚಂದ್ರೇಗೌಡ, ಏಜಾಜ್ ಪಾಷ, ಪ್ರಕಾಶ್, ಲಕ್ಷ್ಮಣ್, ತಿಮ್ಮರಾಜು, ಯೋಗೇಶ್, ಹಿರಿಯ ಸದಸ್ಯರಾದ ಕುಮಾರ್, ಏಳುಮಲೈ, ರಮೇಶ್, ಸಿದ್ದರಾಜು, ಬಲ್ಲೇಗೌಡ ಇನ್ನಿತರರಿದ್ದರು.

ಕಾರ್ಖಾನೆಯ ಲಾಭದ ಪಾಲು ನೀಡುವುದಾಗಿ 45.08 ಲಕ್ಷ ವಂಚನೆ

ಮೈಸೂರು, ಜೂ.29– ಕಾರ್ಖಾನೆಯ ಲಾಭದಲ್ಲಿ ಪಾಲು ಕೊಡುವುದಾಗಿ ನಂಬಿಸಿ 45.08 ಲಕ್ಷ ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಗೋಕುಲಂ 3ನೇ ಹಂತದ ನಿವಾಸಿ ಜೆ.ಎಂ.ರಚಿತ್‌ಗೌಡ ಎಂಬುವರಿಗೆ ಪರಿಚಯವಿದ್ದ ಕೃಷ್ಣ ಎಂಜಿನಿಯರಿಂಗ್ ಕಾರ್ಖಾನೆಯ ಮಾಲೀಕ ಕೃಷ್ಣಕುಮಾರ್ ಎಂಬಾತ ತನ್ನ ಕಾರ್ಖಾನೆ ನಷ್ಟದಲ್ಲಿದ್ದು, ತನಗೆ ಹಣದ ಅವಶ್ಯಕತೆ ಇರುವುದರಿಂದ ಹಣ ನೀಡಿದರೆ ಕಾರ್ಖಾನೆ ಲಾಭಾಂಶದಲ್ಲಿ ಪಾಲು ಕೊಡುವುದಾಗಿ 2017ರ ಮಾರ್ಚ್‌ನಲ್ಲಿ ತಿಳಿಸಿ ಹಂತ ಹಂತವಾಗಿ 38.08 ಲಕ್ಷ ರೂ.ಗಳನ್ನು ಪಡೆದಿದ್ದಾರೆ.

2022ರ ಜನವರಿವರೆಗೂ ಯಾವುದೇ ಲಾಭಾಂಶ ನೀಡದೆ ಇರುವ ಬಗ್ಗೆ ಕೃಷ್ಣಕುಮಾರ್ ಬಳಿ ಕೇಳಿದಾಗ ಅವರು ತಮ್ಮ ಬಳಿಯಿರುವ ಫೋರ್ಡ್ ಎಂಡೋವಿಯರ್ ಕಾರನ್ನು (ಕೆಎ09 ಎಂಇ9399) ಮಾರಾಟ ಮಾಡುವುದಾಗಿ ತಿಳಿಸಿ 7 ಲಕ್ಷ ರೂ.ಗಳನ್ನು ಕಳೆದ ಫೆಬ್ರವರಿ 19ರಂದು ಮುಂಗಡವಾಗಿ ಪಡೆದಿದ್ದು, ತನಗೆ ಅಸಲು ಹಣವಾಗಲೀ, ಲಾಭಾಂಶವಾಗಲೀ ನೀಡಿಲ್ಲ. ಹಾಗೂ ಕಾರನ್ನು ಕೂಡ ತನ್ನ ಹೆಸರಿಗೆ ನೋಂದಣಿ ಮಾಡಿಸದೆ ಒಟ್ಟು 45.08 ಲಕ್ಷ ರೂ.ಗಳನ್ನು ವಂಚಿಸಲಾಗಿದೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿ ರುವ ವಿವಿ ಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಊಟ ಸೇವಿಸಿದ ವಸತಿ ಶಾಲೆಯ 35 ಮಕ್ಕಳು ಅಸ್ವಸ್ಥ

ಹೆಚ್.ಡಿ.ಕೋಟೆ ತಾಲೂಕಿನ ಹಿರೇಹಳ್ಳಿ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಯಲ್ಲಿ ಘಟನೆ

- ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ
- 25 ಮಕ್ಕಳು ಡಿಸ್ಚಾರ್ಜ್, 10 ಮಕ್ಕಳಿಗೆ ಚಿಕಿತ್ಸೆ ಮುಂದುವರಿಕೆ
- ಶಾಸಕರ ಭೇಟಿ; ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಸೂಚನೆ

ಹೆಚ್.ಡಿ.ಕೋಟೆ, ಜೂ.29(ಮಂಜು)– ತಾಲೂಕಿನ ಹಿರೇಹಳ್ಳಿ ಗ್ರಾಮದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಮಂಗಳವಾರ ರಾತ್ರಿ ಊಟ ಮಾಡಿದ 35 ಮಕ್ಕಳು ಅಸ್ವಸ್ಥಗೊಂಡು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇವರಲ್ಲಿ 25 ಮಕ್ಕಳು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದು, 10 ಮಕ್ಕಳಿಗೆ ಚಿಕಿತ್ಸೆ ಮುಂದುವರಿಸಲಾಗಿದೆ.

6 ರಿಂದ 10ನೇ ತರಗತಿಯಲ್ಲಿ ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಹೆಚ್.ಡಿ.ಕೋಟೆ, ಹುಣಸೂರು, ತಿ.ನರಸೀಪುರ ಸೇರಿದಂತೆ ಸಮೀಪದ ವಿವಿಧ ಗ್ರಾಮದವರಾಗಿದ್ದಾರೆ. ಮಂಗಳವಾರ ರಾತ್ರಿ ಚಪಾತಿ, ಅನ್ನ– ಸಾಂಬಾರ್ ಸೇವಿಸಿದ ಮಕ್ಕಳು ಊಟ ಮಾಡಿದ ಕೂಡಲೇ ವಾಂತಿ, ಭೇದಿ, ಸುಸ್ತು ಶುರುವಾಗಿ ಅಸ್ವಸ್ಥಗೊಂಡಿದ್ದಾರೆ. ಕೂಡಲೇ ಎಲ್ಲಾ ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಶಾಸಕರ ಭೇಟಿ: ವಿಷಯ ತಿಳಿದು ಆಸ್ಪತ್ರೆಗೆ ಶಾಸಕ ಅನಿಲ್ ಚಿಕ್ಕಮಾದು ಭೇಟಿ ನೀಡಿ, ಮಕ್ಕಳ ಆರೋಗ್ಯ ವಿಚಾರಿಸಿ ಘಟನೆಯ ಕುರಿತು ಮಾಹಿತಿ ಪಡೆದರು. ಬಳಿಕ ಮಾತನಾಡಿದ ಅವರು, ತಾಲೂಕಿನ ಅತೀ ಹೆಚ್ಚು



ಬಡ ಕುಟುಂಬಗಳ ಮಕ್ಕಳು ಆಶ್ರಮ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಶಾಲೆಯಲ್ಲಿ ಮಕ್ಕಳಿಗೆ ಉತ್ತಮ ಆಹಾರ ಹಾಗೂ ಗುಣಮಟ್ಟದ ಶಿಕ್ಷಣವನ್ನು ನೀಡದೇ ಬೇಜವಾಬ್ದಾರಿತನದಿಂದ ಕೆಲಸ ಮಾಡುತ್ತಿರುವ ಬಗ್ಗೆ ಮಕ್ಕಳು ಹಾಗೂ ಪೋಷಕರಿಂದ ದೂರುಗಳು ಬಂದಿದ್ದು, ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಘಟನೆ ಸಂಬಂಧ ಶಾಲೆಯ ವಾರ್ಡನ್, ಅಡುಗೆ ಸಿಬ್ಬಂದಿ ಹಾಗೂ ಪ್ರಾಂಶುಪಾಲರನ್ನು ವಿಚಾರಣೆ ಮಾಡುವುದಕ್ಕೆ ವೈದ್ಯರ ತಂಡ ನೇಮಿಸಲಾಗಿದ್ದು, ಸಂಪೂರ್ಣ ವರದಿ ತರಿಸಿಕೊಂಡು ಗುರುವಾರ ಆಶ್ರಮ ಶಾಲೆಗೆ ಭೇಟಿ ನೀಡಿ ಮಕ್ಕಳು, ಪೋಷಕರು, ಅಧಿಕಾರಿಗಳೊಂದಿಗೆ ಚರ್ಚಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಡಾ.ಪುಟ್ಟತಾಯಮ್ಮ, ಶೇಷಾದ್ರಿ ಹಾಜರಿದ್ದರು.

> ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಿಂದ ಮಂಗಳವಾರ ರಾತ್ರಿ 35 ಮಕ್ಕಳು ಅಸ್ವಸ್ಥಗೊಂಡು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಕೆಲವರಿಗೆ ವಾಂತಿ, ಭೇದಿ, ಸುಸ್ತು ಕಾಣಿಸಿಕೊಂಡಿತ್ತು. ಅವರಿಗೆ ಚಿಕಿತ್ಸೆ ನೀಡಿದ್ದೇವೆ. ಮಕ್ಕಳಿಗೆ ಯಾವುದೇ ಪ್ರಾಣಾಪಾಯವಿಲ್ಲ. ಎಲ್ಲರೂ ಆರೋಗ್ಯವಾಗಿದ್ದಾರೆ. ಸದ್ಯ 25 ಮಕ್ಕಳನ್ನು ಡಿಸ್ಚಾರ್ಜ್ ಮಾಡಿದ್ದೇವೆ. ಇನ್ನೂ 10 ಮಕ್ಕಳಿಗೆ ಚಿಕಿತ್ಸೆ ನೀಡುತ್ತಿದ್ದೇವೆ.
> -ಡಾ.ಚಂದ್ರಶೇಖರ್, ಮಕ್ಕಳ ತಜ್ಞರು, ಹೆಚ್.ಡಿ.ಕೋಟೆ ಆಸ್ಪತ್ರೆ

> ಮಂಗಳವಾರ ರಾತ್ರಿ ಮಕ್ಕಳಿಗೆ ಅನ್ನ, ಚಪಾತಿ, ಹೆಸರುಕಾಳು ಸಾಂಬಾರ್ ಮಾಡಿ ಬಡಿಸಿದ್ದೆವು. ಮಕ್ಕಳು ಸಾಂಬಾರ್ ರುಚಿ ಇಲ್ಲ ಎಂದು ಹೇಳಿದರು. ಕೂಡಲೇ, ಬೇಳೆ ಸಾಂಬಾರ್ ಮಾಡಿ ಊಟ ಬಡಿಸಿದ್ದೆವು. ಊಟ ಮಾಡಿದ ನಂತರ ಮಕ್ಕಳು ಸುಸ್ತು ಎಂದು ಹೇಳಿದರು. ತಕ್ಷಣ ಎಲ್ಲರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದೇವೆ.
> -ಚಿಕ್ಕಮಣಿ, ಆಶ್ರಮ ಶಾಲೆಯ ವಾರ್ಡನ್.

ಶಾಲೆಯ ಅವ್ಯವಸ್ಥೆ ಕುರಿತು ಮಕ್ಕಳಿಂದ ದೂರು

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಉತ್ತಮ ಆಹಾರ ಹಾಗೂ ಗುಣಮಟ್ಟದ ಶಿಕ್ಷಣ ನೀಡುತ್ತಿಲ್ಲ ಎಂದು ಮಕ್ಕಳು ದೂರಿದರು. ಆಸ್ಪತ್ರೆಗೆ ದೌಡಾಯಿಸಿದ ಶಾಸಕರೊಂದಿಗೆ ತಮ್ಮ ಅಹವಾಲು ಹೇಳಿದ ಮಕ್ಕಳು, ಮಂಗಳವಾರ ರಾತ್ರಿ ಎಲ್ಲರೂ ಊಟ ಮಾಡಿದ ನಂತರ ಇದ್ದಕ್ಕಿದ್ದ ಹಾಗೆ ವಾಂತಿ, ತಲೆಸುತ್ತು ಕಾಣಿಸಿಕೊಂಡಿತ್ತು. ಊಟ ಸೇವಿಸಿದ ತಕ್ಷಣದಲ್ಲೇ ನಮ್ಮ ದೇಹಕ್ಕೆ ಬಹಳಷ್ಟು ಸಂಕಟವಾಗುತ್ತಿತ್ತು ಎಂದು ಅವರು ಅನುಭವಿಸಿದ ಯಾತನೆಯನ್ನು ಹೇಳಿದರು.

ಪ್ರತಿಭಟನೆ: ಶಾಲೆಯಲ್ಲಿ ಉತ್ತಮ ಆಹಾರ ನೀಡುತ್ತಿಲ್ಲ. ಪಾಠ–ಪ್ರವಚನ ಸರಿಯಾಗಿ ಮಾಡುತ್ತಿಲ್ಲ ಎಂದು ತಿಂಗಳ ಹಿಂದೆಯೇ ಪೋಷಕರೊಂದಿಗೆ ಶಾಲೆಯ ಮುಂಭಾಗ ಪ್ರತಿಭಟನೆ ಮಾಡಿದ್ದೆವು. ಆದರೂ, ಮೇಲಧಿಕಾರಿಗಳಾಗಲೀ, ಶಾಲೆಯ ಅಧಿಕಾರಿ ವರ್ಗದವರಾಗಲೀ, ಪ್ರಾಂಶುಪಾಲರಾಗಲೀ ಯಾವುದೇ ಕ್ರಮಕೈಗೊಳ್ಳಲಿಲ್ಲ ಎಂದು ವಿದ್ಯಾರ್ಥಿನಿಯರು ಶಾಸಕರಿಗೆ ತಿಳಿಸಿದರು.

ನಮಗೆ ಶಾಲೆಯ ಬಗ್ಗೆ ಬಹಳ ಬೇಸರವಾಗಿದೆ. ನಮಗೆ ನ್ಯಾಯ ದೊರಕಿಸಿಕೊಟ್ಟು ಉತ್ತಮ ಉಪಾಹಾರ ಹಾಗೂ ಪಾಠ ಪ್ರವಚನಗಳು ನಡೆಯುವ ಹಾಗೆ ಮಾಡಿಕೊಡಿ ಎಂದು ವಿದ್ಯಾರ್ಥಿನಿಯರು ಮನವಿ ಮಾಡಿದರು. ಮಕ್ಕಳ ಮಾತುಗಳನ್ನು ಕೇಳಿದ ಶಾಸಕ ಅನಿಲ್ ಚಿಕ್ಕಮಾದು ಬೇಸರ ವ್ಯಕ್ತಪಡಿಸಿದರು. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕರಿಂದ ಭೂಮಿಪೂಜೆ



ಪಿರಿಯಾಪಟ್ಟಣ, ಜೂ.29(ವೀರೇಶ್)– ಬೆಟ್ಟದಪುರ ಸಮೀಪದ ಚಪ್ಪರದಹಳ್ಳಿ ಗ್ರಾಮದಲ್ಲಿ ಹಸುವಿನಕಾವಲು ಮಾರ್ಗದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಹಂತ ಹಂತವಾಗಿ ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ರಾಜ್ಯದಲ್ಲಿ ನಮ್ಮ ಸರ್ಕಾರ ಇಲ್ಲದಿದ್ದರೂ ಸಂಬಂಧಪಟ್ಟ ಸಚಿವರಿಗೆ ಮನವಿ ಸಲ್ಲಿಸಿ ತಾಲೂಕಿಗೆ ಅನುದಾನ ತರುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಜನರು ಆಶೀರ್ವದಿಸಿ ಮತ್ತೆ ನನ್ನನ್ನು ಶಾಸಕನಾಗಿ ಆಯ್ಕೆ ಮಾಡಿದರೆ ತಾಲೂಕಿನ ಸಂಪೂರ್ಣ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಇದಕ್ಕೂ ಮೊದಲು ಪಂಚಾಯಿತಿ ವ್ಯಾಪ್ತಿಯ ಗಂಗನಕುಪ್ಪೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎರಡು ನೂತನ ಕೊಠಡಿಗಳನ್ನು ಶಾಸಕರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಚಪ್ಪರದಹಳ್ಳಿ ಗ್ರಾಪಂ ಅಧ್ಯಕ್ಷ ಸಿ.ಪಿ.ಸುರೇಶ್, ಸದಸ್ಯರಾದ ಸಿ.ಎಸ್.ಗಣೇಶ್, ದೇವೇಗೌಡ, ಸಿ.ಕೆ.ವೆಂಕಟೇಶ್, ಲೋಕೋಪಯೋಗಿ ಇಲಾಖೆಯ ಎಇಇ ಜಯಂತ್, ಜೆಇ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಿದಾನಂದ್, ಮುಖಂಡರಾದ ಸಿ.ಎನ್.ಕಾಳೇಗೌಡ, ಹೆಚ್.ಎಲ್.ವೆಂಕಟೇಶ್, ಶಂಕರೇಗೌಡ, ಅಣ್ಣೇಗೌಡ, ಸಿ.ಎಸ್.ಕುಶಾಲ್‌ಗೌಡ, ಮಂಜು, ಸ್ವಾಮಿ, ನಾಗರಾಜು, ಕುಮಾರ, ಶ್ರೀನಿವಾಸ, ಸಣ್ಣೇಗೌಡ, ರಾಜಣ್ಣ, ವಿಶ್ವನಾಥ್, ಸಿ.ಆರ್.ಪ್ರಸನ್ನ, ಮುಕುಂದಚಾರಿ, ದೇವರಾಜು, ಯತೀರಾಜು, ಉಮೇಶ್, ನಿಜಗುಣ, ಸಿ.ಎಸ್.ವೆಂಕಟೇಶ್, ಕೃಷ್ಣೇಗೌಡ, ನಾಗರಾಜು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಗ್ರಾಮಸ್ಥರು ಇದ್ದರು.

ಎಸ್‌ಡಿಎಂಸಿ ಅಧ್ಯಕ್ಷರಾಗಿ ಸತೀಶ್ ಅವಿರೋಧ ಆಯ್ಕೆ



ಮಲ್ಕುಂಡಿ, ಜೂ.29(ಚನ್ನಪ್ಪ)– ನಂಜನಗೂಡು ತಾಲೂಕಿನ ಮಡುವಿನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರಾಗಿ ಸತೀಶ್ ಹಾಗೂ ಉಪಾಧ್ಯಕ್ಷರಾಗಿ ಮಣಿಯಮ್ಮ ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ಸತೀಶ್ ಮಾತನಾಡಿ, ಖಾಸಗಿ ಶಾಲೆಗಿಂತ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದು, ಪ್ರತಿಯೊಬ್ಬರು ಸರ್ಕಾರಿ ಶಾಲೆಗೆ ತಮ್ಮ ಮಕ್ಕಳನ್ನು ದಾಖಲಿಸಬೇಕು ಎಂದ ಅವರು, ನೂತನ ಸದಸ್ಯರ ಸಹಕಾರದಿಂದ ಶಾಲೆಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಉಪಾಧ್ಯಕ್ಷೆ ಮಣಿಯಮ್ಮ, ಸದಸ್ಯರಾದ ಗುರುಸಿದ್ದಪ್ಪ, ಕುಮಾರ, ಮಹೇಶ್ವರಿ, ಬಸವರಾಜ್, ಚಂದ್ರಮ್ಮ, ಸಣ್ಣಯ್ಯ, ಪಾಂಡುರಂಗ, ಜ್ಯೋತಿ, ಪುಟ್ಟಮ್ಮ, ಮಹೇಂದ್ರ, ಸುಧಾವತಿ, ರತ್ನಮ್ಮ, ಶೋಭಾ, ಸುರೇಶ್, ಸತೀಶ್, ಮಂಜುನಾಥ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ತಿರುಮಕೂಡಲಿನಲ್ಲಿ ಕೆಂಪೇಗೌಡರ ಜಯಂತಿ



ತಿ.ನರಸೀಪುರ, ಜೂ.29(ಎಸ್‌ಕೆ)– ಪಟ್ಟಣದ ತಿರುಮಕೂಡಲಿನ ಕೆಂಪೇಗೌಡರ ಯುವಕರ ಬಳಗದಿಂದ ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ಕಾಂಗ್ರೆಸ್ ಮುಖಂಡ ಪಿ.ಸ್ವಾಮಿನಾಥ್‌ಗೌಡ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ಬಳಗದ ಅಧ್ಯಕ್ಷ ಸಿ.ಸುನಿಲ್, ಗೌತಮ್, ಚಿದಂಬರ್, ಚಲ್ಲಿ, ಸುಮಾಂತ್, ಹರೀಶ್, ಮಂಜುನಾಥ್, ನಂದೀಶ್, ರಾಜೇಶ್, ಚೇತನ್, ಸುರೇಶ್, ಬಸ್ ಶ್ರೀನಿವಾಸ್, ರಾಮಣ್ಣ ಇದ್ದರು.

ಅಪ್ರಾಪ್ತ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ!

ವಿಡಿಯೋ ವೈರಲ್, ಐವರು ಬಾಲಕರ ಬಂಧನ

ನಂಜನಗೂಡು, ಜೂ.29– ಅಪ್ರಾಪ್ತ ಬಾಲಕನೋರ್ವನ ಮೇಲೆ ಲೈಂಗಿಕ ದೌರ್ಜನ್ಯವೆಸಗಿ ದೃಶ್ಯವನ್ನು ವಿಡಿಯೋ ಚಿತ್ರೀಕರಣ ಮಾಡಿ ವೈರಲ್ ಮಾಡಿದ ಘಟನೆ ತಾಲೂಕಿನ ವೀರದೇವನಪುರ ಗ್ರಾಮದಲ್ಲಿ ನಡೆದಿರುವುದು ತಡವಾಗಿ ವರದಿಯಾಗಿದ್ದು, ಈ ಸಂಬಂಧ ಐವರು ಅಪ್ರಾಪ್ತ ಬಾಲಕರನ್ನು ಬಿಳಿಗೆರೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗ್ರಾಮದ 8ನೇ ತರಗತಿ ಬಾಲಕನನ್ನು 8 ಮತ್ತು 10ನೇ ತರಗತಿಯ ಇಬ್ಬರು ಬಾಲಕರು ಕ್ರಿಕೆಟ್ ಆಡಲೆಂದು ಗ್ರಾಮದ ಹೊರವಲಯದಲ್ಲಿರುವ ನಿರ್ಜನ ಪ್ರದೇಶಕ್ಕೆ ಕಳೆದ ಜೂ.18ರಂದು ಕರೆದೊಯ್ದು ಲೈಂಗಿಕ ದೌರ್ಜನ್ಯವೆಸಗಿದ್ದಾರೆ. ಈ ದೃಶ್ಯವನ್ನು ಮತ್ತೋರ್ವ ವಿಡಿಯೋ ಚಿತ್ರೀಕರಣ ಮಾಡಿದ್ದು, ಈ ಪ್ರಕರಣದಲ್ಲಿ ಒಟ್ಟು ಐವರು ಅಪ್ರಾಪ್ತ ಬಾಲಕರು ಭಾಗಿಯಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಲೈಂಗಿಕ ದೌರ್ಜನ್ಯ ನಡೆದ ನಂತರ ಬಾಲಕ ಶಾಲೆಗೂ ಹೋಗದೆ, ಸರಿಯಾಗಿ ಊಟವನ್ನು ಮಾಡದೆ ಮಂಕಾಗಿ ಮನೆಯಲ್ಲಿಯೇ ಕುಳಿತಿದ್ದ. ಮನೆಯಿಂದ ಹೊರಗೆ ಎಲ್ಲಿಯೂ ಹೋಗುತ್ತಿರಲಿಲ್ಲ. ಮಗ ಯಾಕೆ ಮಂಕಾಗಿದ್ದಾನೆ ಎಂಬುದರ ಬಗ್ಗೆ ಪೋಷಕರು ಎಷ್ಟೇ ಕೇಳಿದರೂ ಉತ್ತರಿಸದೆ ಬಾಲಕ ಮೌನಕ್ಕೆ ಶರಣಾಗುತ್ತಿದ್ದ ಎಂದು ಹೇಳಲಾಗಿದೆ. ಈ ನಡುವೆ ಬಾಲಕ ಅಣ್ಣ ತನ್ನ ತಮ್ಮನ ಸ್ಥಿತಿಯ ಬಗ್ಗೆ ಸ್ನೇಹಿತನೊಬ್ಬನ ಜೊತೆ ಆತಂಕದಿಂದ ಹೇಳಿಕೊಂಡಾಗ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಅದರ ವಿಡಿಯೋ ವೈರಲಾಗಿರುವ ಬಗ್ಗೆ ಸ್ನೇಹಿತ ಬಾಲಕನ ಅಣ್ಣನಿಗೆ ತಿಳಿಸಿದನಲ್ಲದೆ, ಈ ವಿಷಯವನ್ನು ಹೇಗೆ ಹೇಳುವುದು ಎಂದು ನನಗೆ ತೋಚುತ್ತಿರಲಿಲ್ಲ ಎಂದು ಸಂಕೋಚದಿಂದಲೇ ಹೇಳಿದ್ದಾನೆ.

ಈ ಹಿನ್ನೆಲೆಯಲ್ಲಿ ಬಾಲಕನ ಪೋಷಕರು ಇಂದು (ಬುಧವಾರ) ಬಿಳಿಗೆರೆ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ನಂಜನಗೂಡು ಟೌನ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ನೇತೃತ್ವದ ಪೊಲೀಸರು ಐವರು ಬಾಲಕರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಅವರನ್ನು ಬಾಲಕರ ಬಾಲ ಮಂದಿರಕ್ಕೆ ರವಾನಿಸಲಾಗಿದೆ. ದೌರ್ಜನ್ಯಕ್ಕೆ ಒಳಗಾದ ಬಾಲಕನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ.

ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ

ಲಯನ್ಸ್ ಕ್ಲಬ್ ನೂತನ ಅಧ್ಯಕ್ಷ ಕೆ.ಈರೇಗೌಡ ಭರವಸೆ

ಹೆಚ್.ಡಿ.ಕೋಟೆ, ಜೂ.29(ಮಂಜು)– ತಾಲೂಕಿನಲ್ಲಿ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತೇನೆ ಎಂದು ಲಯನ್ಸ್ ಕ್ಲಬ್‌ನ ತಾಲೂಕು ನೂತನ ಅಧ್ಯಕ್ಷ ಕೆ.ಈರೇಗೌಡ ಭರವಸೆ ನೀಡಿದರು.

ಪಟ್ಟಣದ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ಲಯನ್ಸ್ ಕ್ಲಬ್‌ನ ನೂತನ ಅಧ್ಯಕ್ಷರ ಪ್ರತಿಜ್ಞಾವಿಧಿ ಬೋಧನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ತಾಲೂಕಿನಲ್ಲಿ ಹೆಚ್ಚಿನ ಬಡ ಕುಟುಂಬದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಾಗುತ್ತಿಲ್ಲ. ಇಂತಹ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಒತ್ತು ನೀಡಲಾಗುವುದು. ಆದಿವಾಸಿಗಳಿಗೆ ಶುದ್ಧ ಕುಡಿಯುವ ನೀರು ವ್ಯವಸ್ಥೆ, ಕಣ್ಣಿನ ತಪಾಸಣೆ, ಹೃದಯ ತಪಾಸಣೆ ಶಿಬಿರಗಳನ್ನು ಆಯೋಜಿಸುವುದರ ಮೂಲಕ ಇನ್ನೂ ಹಲವು ಕಾರ್ಯಕ್ರಮಗಳನ್ನು ಲಯನ್ಸ್ ಕ್ಲಬ್‌ನ ಎಲ್ಲಾ ಪ್ರಮುಖರ ನೇತೃತ್ವದಲ್ಲಿ ಆಯೋಜಿಸುವ ಮೂಲಕ ಲಯನ್ಸ್ ಸಂಸ್ಥೆಗೆ ಕೀರ್ತಿ ತರುವ ಕೆಲಸ ಮಾಡುತ್ತೇನೆ ಎಂದರು.



ಕಾರ್ಯಕ್ರಮದಲ್ಲಿ ಲಯನ್ಸ್ ಜಿಲ್ಲಾಧ್ಯಕ್ಷ ಎಂ.ಸುಬ್ರಹ್ಮಣ್ಯ, ತಾಂತ್ರಿಕ ಅಧ್ಯಕ್ಷ ಮಹಮ್ಮದ್ ಇಸ್ಮಾಯಿಲ್, ಹೆಚ್.ಡಿ.ಕೋಟೆ ಮಾಜಿ ಅಧ್ಯಕ್ಷ ಪಿ.ರವಿ, ಖಜಾಂಚಿ ವೈ.ಟಿ.ಮಹೇಶ್, ಕಾರ್ಯದರ್ಶಿ ಸುರೇಂದ್ರ ಡಿ.ಗೌಡ, ನಾರಾಯಣಗೌಡ, ಜಯರಾಮು, ಸಂಗಮೇಶ್ವರ, ನಾಗರಾಜು, ಭಾಸ್ಕರ್, ಎ.ಟಿ.ಸೋಮಶೇಖರ್, ಮೈಮುಲ್ ನಿರ್ದೇಶಕರಾದ ದ್ರಾಕ್ಷಾಯಿಣಿ ಬಸವರಾಜಪ್ಪ, ಓಂಪ್ರಕಾಶ್, ನೀಲಾಂಬಿಕೆ ಮಹೇಶ್, ಸದಾನಂದ, ಲೀಲಾ ನಾಗರಾಜ್, ಶಿವಗಾಮಿ, ವ್ಯವಸ್ಥಾಪಕ ನಿರ್ದೇಶಕರಾದ ಬಿ.ವಿ.ವಿಜಯಕುಮಾರ್, ಡಾ.ಸಣ್ಣತಮ್ಮೇಗೌಡ, ತಾಲೂಕಿನ ಎಲ್ಲಾ ಲಯನ್ಸ್ ಸಂಸ್ಥೆಯ ಸದಸ್ಯರು ಹಾಜರಿದ್ದರು.

ನಿವೃತ್ತಿಗೆ ಮುನ್ನ ದಿನ ಪಿಎಸ್‌ಐ ಹೃದಯಾಘಾತದಿಂದ ಸಾವು

ಭೇರ್ಯ, ಜೂ.29– ಸಾಲಿಗ್ರಾಮ ಪೊಲೀಸ್ ಠಾಣೆ ಪಿಎಸ್‌ಐ ದೊಡ್ಡೇಗೌಡ(60) ಹೃದಯಾಘಾತದಿಂದ ಬುಧವಾರ ನಿಧನರಾದರು. ಸೇವೆಯಿಂದ ನಿವೃತ್ತಿ ಹೊಂದಲು ಇವರಿಗೆ ಇನ್ನು ಒಂದು ದಿನ ಬಾಕಿ ಇತ್ತು.



ಕೆ.ಆರ್.ನಗರ ತಾಲೂಕಿನ ಸಾಲಿಗ್ರಾಮ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ದೊಡ್ಡೇಗೌಡ ಸೋಮವಾರ ರಾತ್ರಿ ಗಸ್ತಿನಲ್ಲಿದ್ದ ವೇಳೆ ಅಸ್ವಸ್ಥಗೊಂಡಿದ್ದರು. ಬಳಿಕ ಮೈಸೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದ್ದು, ಬುಧವಾರ ಬೆಳಗಿನ ಜಾವ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ಖಚಿತಪಡಿಸಿವೆ. ಇವರು ಗುರುವಾರ ಸೇವೆಯಿಂದ ನಿವೃತ್ತರಾಗಬೇಕಿತ್ತು.

ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಹುಣಸೂರು ತಾಲೂಕಿನ ಬಿಳಿಗೆರೆ ಗ್ರಾಮದ ತೋಟದಲ್ಲಿ ಸರ್ಕಾರಿ ಗೌರವಗಳೊಂದಿಗೆ ನಡೆಯಿತು. ಶಾಸಕ ಸಾ.ರಾ.ಮಹೇಶ್ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಎಸ್‌ಪಿ ಚೇತನ್, ಎಎಸ್‌ಪಿ ಶಿವಕುಮಾರ್, ದಕ್ಷಿಣ ವಿಭಾಗದ ಡಿವೈಎಸ್‌ಪಿ ಸುಮೀತ್, ಹುಣಸೂರು ವಿಭಾಗದ ರವಿಪ್ರಸಾದ್, ಸಾಲಿಗ್ರಾಮ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಶ್ರೀಕಾಂತ್ ಅಂತಿಮ ನಮನ ಸಲ್ಲಿಸಿದರು.

ಲಿಂಗರಾಜಪ್ಪ ನಿಧನ



ನಂಜನಗೂಡು, ಜೂ.29– ತಾಲೂಕಿನ ಹುಳಿಮಾವು ಗ್ರಾಮದ ಲಿಂಗರಾಜಪ್ಪ(85) ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಹುಳಿಮಾವು ಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದುಶ್ಚಟದಿಂದ ಹೊರಬಂದು ಸತ್ಪ್ರಜೆಗಳಾಗಿ ಬದುಕಲು ಸಲಹೆ



ತಿ.ನರಸೀಪುರ, ಜೂ.29(ಎಸ್‌ಕೆ)– ಮದ್ಯ ವ್ಯಸನಕ್ಕೆ ಬಲಿಯಾಗಿ ತಮ್ಮ ಬಾಳನ್ನು ನರಕ ಮಾಡಿಕೊಂಡಿದ್ದ ಗ್ರಾಮೀಣ ಪ್ರದೇಶದ ಯುವಕರನ್ನು ಗುರುತಿಸಿ, ಅವರನ್ನು ಸನ್ಮಾರ್ಗದಿಂದ ಬದುಕುವಂತೆ ಮಾಡುತ್ತಿರುವ ಕೆಲಸ ಶ್ಲಾಘನೀಯವಾಗಿದೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಹೇಳಿದರು.

ತಾಲೂಕಿನ ಮಾರಗೌಡನಹಳ್ಳಿಯ ಪಂಚರತ್ನ ಸ್ಮಾರಕ ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ಬನ್ನೂರು, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್, ಧರ್ಮಸ್ಥಳ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಜಿಲ್ಲಾ ಜನಜಾಗೃತಿ ವೇದಿಕೆ, ಬಸವನಹಳ್ಳಿಯ ಮದ್ಯವರ್ಜನ ಶಿಬಿರ ವ್ಯವಸ್ಥಾಪನಾ ಸಮಿತಿ ಹಾಗೂ ಪ್ರಾಥಮಿಕ ಸಮುದಾಯ ಆರೋಗ್ಯ ಕೇಂದ್ರ ಬನ್ನೂರು ಸಂಯುಕ್ತ ಆಶ್ರಯದಲ್ಲಿ ನಡೆದ ಏರ್ಪಡಿಸಲಾಗಿದ್ದ 1547ನೇ ಮದ್ಯವರ್ಜನ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಬದುಕಿ ಬಾಳಬೇಕಾದ ಯುವಕರು ಮದ್ಯವ್ಯಸನ ಚಟಕ್ಕೆ ಬಲಿಯಾಗಿ ಬೀದಿಗೆ ಬರುವಂತಹ ಸ್ಥಿತಿ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು,

ತಾವು ದುಡಿಮೆ ಮಾಡಿದ ಹಣವನ್ನು ಕುಡಿತಕ್ಕೆ ಬಳಸುವ ಮೂಲಕ ಬದುಕು ಕಟ್ಟಿಕೊಳ್ಳಲಾಗದೆ, ಬೀದಿ ಪಾಲಾಗುತ್ತಿರುವುದನ್ನು ಗಮನಿಸಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಟ್ರಸ್ಟ್‌ನವರು ಮದ್ಯವರ್ಜನ ಶಿಬಿರ ಹಮ್ಮಿಕೊಂಡು ಗ್ರಾಮೀಣ ಪ್ರದೇಶದಲ್ಲಿ ಕುಡಿತದ ಚಟದಿಂದ ಹೊರತರಲು ಮಾಡುತ್ತಿರುವ ಪ್ರಯತ್ನ ಸಫಲವಾಗಬೇಕಾದರೆ ಪ್ರತಿಜ್ಞೆ ಮಾಡಿ ದುಶ್ಚಟದಿಂದ ಹೊರಬಂದು ಸತ್ಪ್ರಜೆಗಳಾಗಿ ಬದುಕಬೇಕು. ಆಗ ಮಾತ್ರ ಇಂತಹ ಶಿಬಿರಕ್ಕೆ ಅರ್ಥ ಬರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದೊಡ್ಡ ಮುಲಗೂಡು ಗ್ರಾಪಂ ಅಧ್ಯಕ್ಷ ಅಶೋಕ್, ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ನಾರಾಯಣ್, ಎಪಿಎಂಸಿ ಮಾಜಿ ಅಧ್ಯಕ್ಷ ವೆಂಕಟೇಶ್, ಹೆಗ್ಗೂರು ಗ್ರಾಪಂ ಮಾಜಿ ಅಧ್ಯಕ್ಷ ರಾಜು, ಬಸವನಹಳ್ಳಿಯ ವಿಜ್ಞಾನಿ ಬಿ.ಎಸ್.ಯೋಗೇಂದ್ರ, ಗ್ರಾಪಂ ಮಾಜಿ ಸದಸ್ಯ ಕೆ.ಸಿ.ಮಹದೇವ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಡಿ.ಉಮಾವತಿ, ಚಂದ್ರಹಾಸ, ನಂದಕುಮಾರ, ಜಯಲಕ್ಷ್ಮೀ ಇದ್ದರು.

ಕಾರ್ಮಿಕರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಿ



ಬೆಟ್ಟದಪುರ, ಜೂ.29(ಶಿವದೇವ್)– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಜಯಮ್ಮ ಚಂದ್ರಶೇಖರ ಕನ್ವೆನ್ಷನ್ ಹಾಲ್‌ನಲ್ಲಿ ಕಟ್ಟಡ ಕಾರ್ಮಿಕರ ಜಾಗೃತಿ ಕಾರ್ಯಕ್ರಮ ನಡೆಯಿತು.

ಮಾಜಿ ಶಾಸಕ ಹೆಚ್.ಸಿ.ಬಸವರಾಜು ಮಾತನಾಡಿ, ಅಸಂಘಟಿತ ಕಾರ್ಮಿಕರು ಅವಿದ್ಯಾವಂತರು. ಅವರು ಸರ್ಕಾರಿ ಕಚೇರಿಗೆ ಬಂದು ಸೌಲಭ್ಯ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಕಾರ್ಮಿಕ ಇಲಾಖೆ ಅಧಿಕಾರಿಗಳು ಮನೆ–ಮನೆಗೆ ತೆರಳಿ ನೋಂದಣಿ ಮಾಡಿಸಿ, ಅವರಿಗೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯಕುಮಾರ್ ಮಾತನಾಡಿ, ಕಾರ್ಮಿಕರಿಗೆ ಸೌಲಭ್ಯ ನೀಡದಿದ್ದರೆ ದೇಶ ಅಭಿವೃದ್ಧಿ ಕಾಣಲು ಅಸಾಧ್ಯ. ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಕಾರ್ಮಿಕ ಇಲಾಖೆಗೆ ನೀಡುತ್ತಿದ್ದು, ಅದನ್ನು ಅಧಿಕಾರಿಗಳು ವಂಚಿತ ಕಾರ್ಮಿಕರಿಗೆ ದೊರೆಯುವಂತೆ ಮಾಡಬೇಕು ಎಂದರು.

ರಾಜ್ಯ ಕೆಪಿಸಿಸಿ ಕಾರ್ಮಿಕ ಘಟಕದ ಕಾರ್ಯದರ್ಶಿ ಈಶ್ವರ ವಿಶ್ವಕರ್ಮ, ಪಿರಿಯಾಪಟ್ಟಣ ಕಾರ್ಮಿಕ ಇಲಾಖೆಯ ಟಿ.ವಿ.ಲಕ್ಷ್ಮೀಶ್, ಕೆ.ಆರ್.ನಗರ ಕಾರ್ಮಿಕ ನಿರೀಕ್ಷಕ ಹೆಚ್.ಪಿ.ಜಯಣ್ಣ ಮಾತನಾಡಿದರು. ಅಸಂಘಟಿತ ವಿಶ್ವ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ನಂದಕುಮಾರ್, ಉಪಾಧ್ಯಕ್ಷ ಶಿವರಾಮೇಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿರುನೀಲಕಂಠ, ಪಿರಿಯಾಪಟ್ಟಣ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ಕುಮಾರಸ್ವಾಮಿ, ಖಜಾಂಚಿ ಯೋಗೀಶ್, ಸಂಘಟನಾ ಕಾರ್ಯದರ್ಶಿ ಹಿರಣ್ಣಯ್ಯ, ಭುವನಹಳ್ಳಿ ಸಿ.ದೀಪು, ಎಂ.ಜಿ.ಘೋರ್ಪಡೆ, ಪಟೇಲ್ ಚಂದ್ರು, ಶಿವಣ್ಣ, ರಘು, ಮಂಜು, ನಾಗರಾಜು, ಜಯಣ್ಣ, ಪುಷ್ಪಾ ಇದ್ದರು.

ದೋಷಪೂರಿತ ನಂಬರ್ ಪ್ಲೇಟ್: ಸವಾರರಿಗೆ ಆರ್‌ಟಿಓ ಬಿಸಿ

ಮೈಸೂರು, ಜೂ.29(ಎಂಟಿವೈ)–ದೋಷಪೂರಿತ ನಂಬರ್ ಪ್ಲೇಟ್ ಅಳವಡಿಸಿಕೊಂಡಿರುವ ವಾಹನ ಸವಾರರಿಗೆ ಬಿಸಿ ಮುಟ್ಟಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮುಂದಾಗಿದ್ದಾರೆ. ಬುಧವಾರ ಮಧ್ಯಾಹ್ನ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು, ಸರ್ಕಾರಿ ಹಾಗೂ ಖಾಸಗಿ ವಾಹನಗಳ ಚಾಲಕರಿಗೆ ದಂಡ ವಿಧಿಸಿದರು. ಮೋಟಾರ್ ವಾಹನ ಕಾಯ್ದೆಯಡಿ ನಂಬರ್ ಪ್ಲೇಟ್ ಮೇಲೆ ಬೇರೆ ಯಾವುದೇ ಅಕ್ಷರಗಳನ್ನು ಅಳವಡಿಸುವುದಾಗಲೀ ಅಥವಾ ಬರೆಯುವುದಕ್ಕಾಗಲೀ ಅವಕಾಶವಿಲ್ಲ. ಆದರೆ ವಿವಿಧ ಸಂಘಟನೆಗಳನ್ನು ನಂಬರ್ ಪ್ಲೇಟ್ ಮೇಲ್ಭಾಗದಲ್ಲಿ ತಮ್ಮ ಸಂಘದ ಹೆಸರಿರುವ ಫಲಕಗಳನ್ನು ಅಳವಡಿಸಿಕೊಳ್ಳುತ್ತಿದ್ದು, ಇಂತಹ ವಾಹನಗಳ ತಪಾಸಣೆ ನಡೆಯಿತು. ಪ್ರಾದೇಶಿಕ ಸಾರಿಗೆ ಇಲಾಖೆ ಜಂಟಿ ಆಯುಕ್ತ ಡಾ.ಸಿ.ಟಿ.ಮೂರ್ತಿ ನೇತೃತ್ವದಲ್ಲಿ ಉಪ ಸಾರಿಗೆ ಆಯುಕ್ತ ಭೀಮನಗೌಡ ಪಾಟೀಲ್, ಆರ್‌ಟಿಓ ಇನ್ಸ್‌ಪೆಕ್ಟರ್ ಡಿ.ಎಂ.ಮಹೇಶ್ ಹಾಗೂ ಸಿಬ್ಬಂದಿ ಡಿಸಿ ಕಚೇರಿ ಬಳಿ ಕಾರ್ಯಾಚರಣೆ ನಡೆಸಿದರು. ನಂಬರ್ ಪ್ಲೇಟ್ ಮೇಲೆ ಅಳವಡಿಸಿರುವ ನಾಮಫಲಕಗಳನ್ನು ವಶಪಡಿಸಿ ಕೊಂಡ ಅಧಿಕಾರಿಗಳು ದಂಡ ವಿಧಿಸಿದ್ದಲ್ಲದೇ, ಇನ್ನು ಮುಂದೆ ಫಲಕ ಅಳವಡಿಸಿದರೆ ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆ ನೀಡಿದರು.



ಈ ಸಂಬಂಧ 'ಮೈಸೂರು ಮಿತ್ರ'ನ ಜೊತೆ ಮಾತನಾಡಿದ ಡಾ.ಸಿ.ಟಿ.ಮೂರ್ತಿ, ನಿಯಮಾನುಸಾರ ನಂಬರ್ ಪ್ಲೇಟ್ ಅಳವಡಿಸಿಕೊಳ್ಳದಿರುವ ವಾಹನಗಳ ತಪಾಸಣೆ ನಡೆಸುತ್ತಿದ್ದೇವೆ. ಮೊದಲ ಬಾರಿಗೆ ಸಿಕ್ಕಿದ ವಾಹನ ಮಾಲೀಕರಿಗೆ ದಂಡ ವಿಧಿಸಲಾಗುತ್ತಿದೆ. ಮತ್ತೆ ವಾಹನದ ನಂಬರ್ ಪ್ಲೇಟ್ ಮೇಲೆ ಫಲಕ ಅಳವಡಿಸಿಕೊಂಡು ಸಿಕ್ಕಿಬಿದ್ದರೆ ಪ್ರಕರಣ ದಾಖಲಿಸಲಾಗುವುದು ಎಂದು ತಿಳಿಸಿದರು.

ಉಮೇಶ್ ಕತ್ತಿ ಜಿಲ್ಲಾ ಪ್ರವಾಸ

ಮೈಸೂರು,ಜೂ.29–ಅರಣ್ಯ ಹಾಗೂ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಉಮೇಶ್ ವಿ.ಕತ್ತಿ, ನಾಳೆ (ಜೂನ್ 30) ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ನಾಳೆ ಬೆಳಗ್ಗೆ 8 ಗಂಟೆಗೆ ಶ್ರೀ ಜಯ ಚಾಮರಾಜೇಂದ್ರ ಮೃಗಾಲಯವನ್ನು ವೀಕ್ಷಣೆ ಮಾಡುವರು ಹಾಗೂ ಬೆಳಗ್ಗೆ 11 ಗಂಟೆಗೆ ಮೃಗಾಲಯದ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸುವರು.



ನಿಧನ

ಶ್ರೀಮತಿ ಯಶೋಧರಾಜು

ಮೈಸೂರು, ಜೂ.29– ಜಾತ್ಯತೀತ ಜನತಾದಳ ಮಹಿಳಾ ಘಟಕದ ನಗರ ಉಪಾಧ್ಯಕ್ಷರು ಹಾಗೂ ಮೈಸೂರು ಹೆಬ್ಬಾಳು ಮೊದಲ ಹಂತದ ನಿವಾಸಿ ಶ್ರೀಮತಿ ಯಶೋಧರಾಜು (60) ಅವರು ಇಂದು ನಿಧನರಾದರು. ಇವರು ಪತಿ ರಾಜು, ಪುತ್ರಿ ಮಾನಸ ಸೇರಿದಂತೆ ಅಪಾರ ಬಂಧು ವರ್ಗ, ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ 11 ಗಂಟೆಗೆ ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ.



ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/33/2022
ದಿನಾಂಕ : 17-06-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಮೈಸೂರು ಯಾರ್ಡ್ –	ರೂ. 60,76,926/-
ಟ್ರಾಮ್‌ವೇನಲ್ಲಿ ಸ್ಟೇಬ್ಲಿಂಗ್ ಲೈನ್ 1 ರಿಂದ 4ರವರೆಗೆ ಓವರ್‌ಹೆಡ್ ಎಕ್ವಿಪ್‌ಮೆಂಟ್‌ನ (ಓಹೆಚ್‌ಇ) ಡಿಸೈನ್, ಸರಬರಾಜು, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವಿಕೆಯ ಬಾಕಿ ಉಳಿದ ಕಾಮಗಾರಿಗಳು. (ಟೆಂಡರ್ ಸಂ. ಇಸಿಎನ್-ಟಿಆರ್‌ಡಿ-6-2022)	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22-07-2022 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ನಿರ್ಮಾಣ ಬೆಂಗಳೂರು ದಂಡು
ಪಿಯುಬಿ/185/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23
S.W.Railways SWRRLY SWRRLY



1ನೇ ವರ್ಷದ ಸವಿನೆನಪು



ಬಿ. ನವೀನ್
S/o ಲಯನ್ ಎಲ್.ಬಸವರಾಜ್ (ಫಿಲಿಪ್ಸ್)
ಜನನ: 15-11-1975 ಮರಣ: 30-06-2021
ಒಂದು ವರ್ಷದ ನಂತರವೂ, ನಿಮ್ಮ ಸ್ಮರಣೆಯ ಯಾವಾಗಲೂ ನಮ್ಮ ಹೃದಯದಲ್ಲಿ ಜೀವಿತಾವಧಿಯಲ್ಲಿ ಇರುತ್ತದೆ.
ದುಃಖತಪ್ತರು: ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಜನನ : 24.07.1945 ಮರಣ: 22.06.2022

ಶ್ರೀಮಾನ್ ಸಿ.ಡಿ. ನಾಗರಾಜುರವರು
ಇವರು ದಿನಾಂಕ 22.06.2022ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 02.07.2022 ಶನಿವಾರ ಬೆಳಗ್ಗೆ 10.30 ಗಂಟೆಗೆ ಬಲಮುರಿ ಕ್ಷೇತ್ರದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು: ಮೃತರ ಧರ್ಮಪತ್ನಿ, ಶ್ರೀಮತಿ ಸುನಂದ ಮತ್ತು ಮಕ್ಕಳಾದ ಶ್ರೀ ಜಿ.ಎನ್.ಶಶಿಭೂಷಣ್, ಶ್ರೀ ಜಿ.ಎನ್. ಹರೀಶ್ ಕುಮಾರ್, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಶ್ರೀ ಚಿಕ್ಕದೇವೇಗೌಡರ ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು, ಬೆಳಗೊಳ.
ಭೋಜನ: 12.30ಕ್ಕೆ. ಸ್ಥಳ: ಬಲಮುರಿ ಕ್ಷೇತ್ರ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಣಸೂರು.
ಕ್ರಮ ಸಂಖ್ಯೆ:ಕೃಉಮಾಸ(ಹು): 67 :2022-23 ದಿ:27.06.2022

ಭದ್ರತಾ ವ್ಯವಸ್ಥೆಗೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಹುಣಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 05 ಜನ ಭದ್ರತಾ ಸಿಬ್ಬಂದಿಗಳನ್ನು 2022-23ನೇ ಸಾಲಿಗೆ ಆದೇಶ ನೀಡುವ ದಿನಾಂಕದಿಂದ 2023ನೇ ಮೇ ಮಾಹೆಯವರೆಗೆ ಒದಗಿಸಲು ಕಾರ್ಮಿಕ ಇಲಾಖೆ ಹಾಗೂ ಪೋಲೀಸ್ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಷರತ್ತುಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.karnataka. gov.in/eportal index. seam ಮೂಲಕ ಮಾತ್ರ ಸಲ್ಲಿಸಲು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್ ಮೆಂಟ್ ವೇಳಾಪಟ್ಟಿ: (1) ಟೆಂಡರ್ ಫಾರಂನ್ನು ವೆಬ್‌ಸೈಟ್‌ನಲ್ಲಿಯೇ ತುಂಬಿ ಸಲ್ಲಿಸಲು ಕೊನೆಯ ದಿನಾಂಕ: **28.07.2022 ಸಂಜೆ 05:30 ಗಂಟೆಯವರೆಗೆ** ಮಾತ್ರ (2) ಟೆಂಡರ್ ತೆರೆಯುವ ದಿನಾಂಕ: **30.07.2022 ರಂದು ಬೆಳಿಗ್ಗೆ 11:00 ಗಂಟೆಗೆ** (3) ಹೆಚ್ಚಿನ ವಿವರಗಳು ಮತ್ತು ಷರತ್ತು-ವಾ-ನಿಬಂಧನೆಗಳನ್ನು ಸಮಿತಿಯ ಕಛೇರಿಯ ವೇಳೆಯಲ್ಲಿ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಣಸೂರು, ಮೈಸೂರು ಜಿಲ್ಲೆ, ಹಾಗೂ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ. ವಾರ್ಷಿಕ ಅಂದಾಜು ವೆಚ್ಚ: **ರೂ. 12.00 ಲಕ್ಷ**. ಇ.ಎಂ.ಡಿ. ಮೊತ್ತ **ರೂ.1,20,000-00**

ಭದ್ರತಾ ಸಿಬ್ಬಂದಿಗಳ ವಿವರ:
(1) ಕಂಪ್ಯೂಟರ್ ಆಪರೇಟರ್-1, (2) ವಾಹನಚಾಲಕರು-1, (3) ಭದ್ರತಾ ಸಿಬ್ಬಂದಿಗಳು-2, (4) ಸ್ವಚ್ಛತಾ ಸಿಬ್ಬಂದಿ-1. ಒಟ್ಟು ಸಿಬ್ಬಂದಿ: **5 ಜನ**

ಸಹಿ/- (ಓ.ಹಂಪಣ್ಣ) ಕಾರ್ಯದರ್ಶಿ, ಕೃಉಮಾಸ, ಹುಣಸೂರು
ಸಹಿ/- (ಲೆಫ್ಟಿನೆಂಟ್ ಕರ್ನಲ್ ಡಾ//ಎಸ್.ಯು ಅಶೋಕ್) ಆಡಳಿತಾಧಿಕಾರಿಗಳು ಕೃಉಮಾಸ, ಹುಣಸೂರು.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ವೈ/ಇ 29/2022-23/06
ದಿನಾಂಕ : 23-06-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಮೈಸೂರು – ಹಾಸನ ಸೆಕ್ಷನ್ :	ರೂ. 9,62,272/-
ಮಂದಗೆರೆ ಮತ್ತು ಮಾವಿನಕೆರೆಯಲ್ಲಿ ಪ್ಲಾಟ್‌ಫಾರಂನ ವಿಸ್ತರಣೆ ಮತ್ತು ಎತ್ತರವನ್ನು ಹೆಚ್ಚಿಸುವುದು – ವಿದ್ಯುತ್ ವ್ಯವಸ್ಥೆಗಳು.	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 18-07-2022 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಮೈಸೂರು
ಪಿಯುಬಿ/184/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23
S.W.Railways SWRRLY SWRRLY

ಮೀನುಗಾರಿಕೆ ಇಲಾಖೆ, ಸೋಮವಾರಪೇಟೆ ತಾಲ್ಲೂಕು
ಸಂಖ್ಯೆ : ಎಫ್‌ವೈಪಿ/1/2022-23 ದಿನಾಂಕ:29/06/2022

ಟೆಂಡರ್ ಪ್ರಕಟಣೆ

ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ಮೀನುಗಾರರಿಗೆ ಅಗತ್ಯವಿರುವ ಮೀನುಗಾರಿಕೆ ಸಲಕರಣೆಗಳಾದ ನೈಲಾನ್ ಬಲೆಗಳು, ಹರಿಗೋಲು, ಲೈಫ್‌ಜಾಕೆಟ್, ಪ್ಲಾಸ್ಟಿಕ್ ಕ್ರೇಟ್ ಇತ್ಯಾದಿ ಸಾಮಾಗ್ರಿಗಳನ್ನು ಖರೀದಿಸಲು ಅತೀ ಕಡಿಮೆ ದರದಲ್ಲಿ ಸರಬರಾಜು ಮಾಡುವ ತಯಾರಕರು / ಅಧಿಕೃತ ಸರಬರಾಜುದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಕ್ರಸಂ	ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ	ಇ.ಎಂ.ಡಿ.ಮೊತ್ತ ರೂ.
1.	ರೂ. 2,30,000-00 (ರೂ. ಎರಡು ಲಕ್ಷದ ಮೂವತ್ತು ಸಾವಿರ ಮಾತ್ರ)	ರೂ.4600-00 (ರೂ. ನಾಲ್ಕು ಸಾವಿರದ ಆರು ಮಾತ್ರ)

ಟೆಂಡರ್ ಫಾರಂಗಳನ್ನು ಕಛೇರಿಯ ವೇಳೆಯಲ್ಲಿ ದಿ: 29.06.2022ರಿಂದ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸುವಕೊನೆಯ ದಿನಾಂಕ: 20/07/2022 ಸಂಜೆ 5.00 ಗಂಟೆಯೊಳಗಾಗಿ
ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ
ಸಹಿ/-ಮೀನುಗಾರಿಕೆ ಸಹಾಯಕ ನಿರ್ದೇಶಕರು, ಸೋಮವಾರಪೇಟೆ

ಭಾರತ ಸರ್ಕಾರ
ಸೆಂಟ್ರಲ್ ಬ್ಯೂರೋ ಆಫ್ ಕಮ್ಯುನಿಕೇಶನ್, ಬೆಂಗಳೂರು
(ವಾರ್ತಾ ಮತ್ತು ಪ್ರಸಾರ ಸಚಿವಾಲಯ)
ಬಿಎಸ್‌ಎನ್‌ಎಲ್ ದೂರವಾಣಿ ವಿನಿಮಯ ಕಟ್ಟಡ, ಹಾರ್ಡಿಂಗ್ ಸರ್ಕಲ್, ಮೈಸೂರು

DD/MYS/26/ veh/20/2022-23 Date 29.06.2022

ಟೆಂಡರ್ ಪ್ರಕಟಣೆ

ಈ ಮೇಲೆ ತಿಳಿಸಿದ ಕಛೇರಿಯ ವಾಹನ ಮಹೇಂದ್ರ ಕಮಾಂಡರ್ ಜೀಪ್ **KA-09 M-6778** ವನ್ನು ಯಥಾಸ್ಥಿತಿಯಲ್ಲಿ **(AS IS WHERE IS & WHAT IS BASIS)** ಮಾರಾಟ ಮಾಡಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕಟಣೆಯಾದ ದಿನಾಂಕದಿಂದ 21ನೇ ದಿನದ, ಅಂದರೆ ದಿನಾಂಕ **19.07.2022** ಒಳಗಾಗಿ ಆಸಕ್ತರು ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಮೈಸೂರು ಕಚೇರಿಯ ಗ್ಯಾರೇಜಿನಲ್ಲಿ ಇರುವ ವಾಹನವನ್ನು **ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ** (ರಜಾ ದಿನಗಳನ್ನು ಹೊರತುಪಡಿಸಿ) ಪರಿಶೀಲಿಸಿ ಟೆಂಡರ್ ಹಾಕಬಹುದು. ಹೆಚ್ಚಿನ ಮಾಹಿತಿ ಹಾಗೂ ನಿಯಮಗಳಿಗಾಗಿ ಕಚೇರಿ ವೇಳೆಯಲ್ಲಿ ಭೇಟಿ ನೀಡಿ ಅಥವಾ **ದೂರವಾಣಿ ಸಂಖ್ಯೆ 0821-2543866** ಸಂಪರ್ಕಿಸಿ ವಿವರ ಪಡೆಯಬಹುದಾಗಿದೆ.

ದಿನಾಂಕ: 29.06.2022
ಸ್ಥಳ : ಮೈಸೂರು
ಸಹಿ/- ನಿರ್ದೇಶಕರು, ಸೆಂಟ್ರಲ್ ಬ್ಯೂರೋ ಆಫ್ ಕಮ್ಯುನಿಕೇಶನ್, ಬೆಂಗಳೂರು
ವಾಸಾಸಂಇ/ಮೈಸೂರು/ಶಿರಡಿ ಸಾಯಿ/179/2022-23